Reg. No. D. 221

# भारत का राजपत्र
# The Gazette of India
# ಭಾರತ ರಾಜ ಪತ್ರ

**(EXTRAORDINARY)**

ವಿಶೇಷ ಸಂಚಿಕೆ


भाग—IX अनुभाग 1

PART IX SECTION 1

ಭಾಗ IX ವಿಭಾಗ 1

**प्राधिकार से प्रकाशित**

Published by Authority

ಪ್ರಾಧಿಕಾರದ ಮೇರೆಗೆ ಪ್ರಕಟಿತವಾಗಿದೆ

| | | | |
|---|---|---|---|
| सं—1 | नई दिल्ली सोमवार, नोव्हेंबर 10, 1986 | कार्तिक 19, 1908 (शक) | खण्ड—4 |
| No. 1 | New Delhi Monday, November 10, 1986 | Karthika 19, 1908 (Saka) | Vol. 4 |
| ಸಂಖ್ಯೆ ೧ | ನವದೆಹಲಿ ಸೋಮವಾರ, ನವೆಂಬರ್ ೧೦, ೧೯೮೬ | ಕಾರ್ತೀಕ ೧೯, ೧೯೦೮ (ಶಕ) | ಸಂಪುಟ ೪ |


## MINISTRY OF LAW AND JUSTICE

(Legislative Department)

New Delhi, September 8, 1986/Bhadrapada 17, 1908 (Sakha)

The translations in Kannada of the following namely— (1) The Public Servants (Inquiries) Act, 1850 (2) The Caste Disabilities Removal Act, 1850 (3) The Dramatic Performances Act, 1876 (4) The Epidemic Diseases Act, 1897 (5) The Police (Incitement to Disaffection) Act, 1922 (6) The Hindu Inheritance (Removal of Disabilities) Act, 1928 (7) The Hindu Gains of Learning Act, 1930 (8) The Arya Marriage Validation Act, 1937 (9) The Employees Liability Act, 1938 (10) The Weekly Holidays Act, 1942 (11) The Foreigners Act, 1946 (12) The Representation of the People (Miscellaneous Provisions) Act, 1956 (13) The Standards of Weights and Measures Act, 1976 (14) The National Library of India Act, 1976—are hereby published under the authority of the President and shall be deemed to be the authorised translations thereof in Kannada under clause (a) of Section 2 of the authorised Translations (Central Laws) Act, 1973 (50 of 1973).

ಕೆಳಕಂಡ ಅಧಿನಿಯಮಗಳು ಎಂದರೆ (೧) ಲೋಕ ನೌಕರರ (ವಿಚಾರಣಾ) ಅಧಿನಿಯಮ, ೧೮೫೦ (೨) ಜಾತಿ ಅಸಮರ್ಥತೆಗಳನ್ನು ತೆಗೆದುಹಾಕುವ ಅಧಿನಿಯಮ, ೧೮೫೦ (೩) ನಾಟಕ ಪ್ರದರ್ಶನ ಅಧಿನಿಯಮ, ೧೮೭೬ (೪) ಸಾಂಕ್ರಾಮಿಕ ರೋಗಗಳ ಅಧಿನಿಯಮ, ೧೮೯೭ (೫) ಪೊಲೀಸು (ಅಪ್ರೀತಿ ಪ್ರಚೋದನಾ) ಅಧಿನಿಯಮ, ೧೯೨೨ (೬) ಹಿಂದೂವಾರಸು (ಅಸಮರ್ಥತಾ ನಿವಾರಣಾ) ಅಧಿನಿಯಮ, ೧೯೨೮ (೭) ಹಿಂದೂ ವಿದ್ಯಾರ್ಜನ ಅಧಿನಿಯಮ, ೧೯೩೦ (೮) ಆರ್ಯ ವಿವಾಹ ಮಾನ್ಯೀಕರಣ ಅಧಿನಿಯಮ, ೧೯೩೭ (೯) ನಿಯೋಜಕ ಹೊಣೆಗಾರಿಕೆ ಅಧಿನಿಯಮ, ೧೯೩೮ (೧೦) ವಾರದ ರಜಾ ದಿನ ಅಧಿನಿಯಮ, ೧೯೪೨ (೧೧) ವಿದೇಶಿಯರ ಅಧಿನಿಯಮ, ೧೯೪೬ (೧೨) ಜನತಾ ಪ್ರಾತಿನಿಧ್ಯ (ಸಂಕೀರ್ಣ ಉಪಬಂಧಗಳ) ಅಧಿನಿಯಮ, ೧೯೫೬ (೧೩) ತೂಕ ಮತ್ತು ಅಳತೆ ಮಾನಕ ಅಧಿನಿಯಮ, ೧೯೭೬, (೧೪) ಭಾರತ ರಾಷ್ಟ್ರೀಯ ಗ್ರಂಥಾಲಯ ಅಧಿನಿಯಮ, ೧೯೭೬.

ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಭಾಷಾಂತರಗಳ ಅಧಿನಿಯಮ, ೧೯೭೩ ರ (೧೯೭೩ ರ ೫೦) ೨ನೇ ಪ್ರಕರಣದ, (ಕ) ಖಂಡದ ಮೇರೆಗೆ ಇವುಗಳನ್ನು ಆ ಅಧಿನಿಯಮಗಳ ಅಧಿಕೃತ ಕನ್ನಡ ಭಾಷಾಂತರವೆಂದು ಭಾವಿಸತಕ್ಕದ್ದು.

# ತೂಕ ಮತ್ತು ಅಳತೆ ಮಾನಕ ಅಧಿನಿಯಮ, 1976

(1976 ರ 60)

(ಏಪ್ರಿಲ್ 1, 1984 ರಂದು ಜಾರಿಯಲ್ಲಿದ್ದಂತೆ) [ಏಪ್ರಿಲ್ 8, 1976]

ತೂಕಗಳ ಮತ್ತು ಅಳತೆಗಳ ಮಾನಕಗಳನ್ನು ನಿಗದಿಪಡಿಸುವ ತೂಕಗಳಿಗೆ, ಅಳತೆಗಳಿಗೆ ಮತ್ತು ತೂಕದ, ಅಳತೆಯ ಅಥವಾ ಎಣಿಕೆಯ ಮೂಲಕ ಮಾರಲಾಗುವ ಅಥವಾ ವಿತರಣೆ ಮಾಡಲಾಗುವ ಇತರ ಸರಕುಗಳಿಗೆ ಸಂಬಂಧಿಸಿ ಅಂತಾರಾಜ್ಯ ವ್ಯಾಪಾರವನ್ನು ಅಥವಾ ವಾಣಿಜ್ಯವನ್ನು
2 ವಿನಿಯಮನಗೊಳಿಸುವುದಕ್ಕಾಗಿ ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಪ್ರಾಸಂಗಿಕವಾದ ವಿಷಯಗಳ ಬಗ್ಗೆ ಉಪಬಂಧಿಸುವ ಅಧಿನಿಯಮ.

3 ಭಾರತ ಗಣರಾಜ್ಯದ ಇಪ್ಪತ್ತೇಳನೇ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಇದು ಅಧಿನಿಯಮಿತವಾಗತಕ್ಕದ್ದು:—

## ಭಾಗ I

### ಪ್ರತಿಯೊಂದು ಭಾಗಕ್ಕೂ ಅನ್ವಯಿಸುವ ಉಪಬಂಧಗಳು

1. **ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.**—(1) ಈ ಅಧಿನಿಯಮವನ್ನು ತೂಕ ಮತ್ತು ಅಳತೆ ಮಾನಕ ಅಧಿನಿಯಮ, 1976 ಎಂದು ಕರೆಯತಕ್ಕದ್ದು.

(2) ಇದು ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) ಇದು ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು, ; ಮತ್ತು

(ಕ) ಈ ಅಧಿನಿಯಮದ ಬೇರೆ ಬೇರೆ ಉಪಬಂಧಗಳಿಗೆ,

(ಖ) ಬೇರೆ ಬೇರೆ ಪ್ರದೇಶಗಳಿಗೆ,

(ಗ) ಬೇರೆ ಬೇರೆ ಉದ್ಯಮಗಳ ವರ್ಗಗಳಿಗೆ,

(ಘ) ಬೇರೆ ಬೇರೆ ಸರಕುಗಳ ವರ್ಗಗಳಿಗೆ

(ಙ) ಬೇರೆ ಬೇರೆ ತೂಕಗಳ ಮತ್ತು ಅಳತೆಗಳ ವರ್ಗಗಳಿಗೆ, ಅಥವಾ

(ಚ) ತೂಕಗಳ ಮತ್ತು ಅಳತೆಗಳ ಬಳಕೆದಾರರ ಬೇರೆ ಬೇರೆ ವರ್ಗಗಳಿಗೆ—

—ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು ಮತ್ತು ಈ ಅಧಿನಿಯಮದ ಪ್ರಾರಂಭದ ಬಗ್ಗೆ ಅಂಥ ಯಾವುದೇ ಉಪಬಂಧದಲ್ಲಿ ಇರುವ ಯಾವುದೇ ಉಲ್ಲೇಖವನ್ನು ಯಾವ ಪ್ರದೇಶಗಳಲ್ಲಿ ಅಥವಾ ಯಾವ ಉದ್ಯಮಗಳ, ಸರಕುಗಳ, ತೂಕಗಳ ಮತ್ತು ಅಳತೆಗಳ ಅಥವಾ ತೂಕಗಳ ಮತ್ತು ಅಳತೆಗಳ ಬಳಕೆದಾರರ ವರ್ಗಗಳ ಸಂಬಂಧದಲ್ಲಿ ಈ ಅಧಿನಿಯಮವನ್ನು ಜಾರಿಗೆ ತರಲಾಗಿದೆಯೋ ಆ ಪ್ರದೇಶಗಳಲ್ಲಿ ಅಥವಾ ಆ ಉದ್ಯಮಗಳ ಸರಕುಗಳ ತೂಕಗಳ ಮತ್ತು ಅಳತೆಗಳ ಅಥವಾ ಆ ತೂಕಗಳ ಮತ್ತು ಅಳತೆಗಳ ಬಳಕೆದಾರರ ವರ್ಗಗಳ ಸಂಬಂಧದಲ್ಲಿ ಆ ಉಪಬಂಧವು ಜಾರಿಗೆ ಬಂದಿರುವುದರ ಬಗೆಗಿನ ಉಲ್ಲೇಖವೆಂದು ಅರ್ಥೈಸತಕ್ಕದ್ದು:

ಪರಂತು, (ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ನಿಗದಿಪಡಿಸಲಾದ ಮಾನಕಗಳನ್ನು ಒಳಗೊಂಡು) ಈ ಅಧಿನಿಯಮದ ಉಪಬಂಧಗಳು ಸಿಕ್ಕಿಂ ರಾಜ್ಯದಲ್ಲಿ ಈ ಅಧಿನಿಯಮವು ಅನುಮೋದಿತವಾದಂದಿನಿಂದ ಐದು ವರ್ಷಗಳಿಗೆ ಮೀರದಂತೆ ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು ಮತ್ತು ಈ ಅಧಿನಿಯಮದ ಬೇರೆ ಬೇರೆ ಉಪಬಂಧಗಳಿಗೆ ಅಥವಾ ಬೇರೆ ಬೇರೆ ಪ್ರದೇಶಗಳಿಗೆ ಅಥವಾ ಬೇರೆ ಬೇರೆ ಉದ್ಯಮಗಳ ವರ್ಗಗಳಿಗೆ ಅಥವಾ ಬೇರೆ ಬೇರೆ ಸರಕುಗಳ ವರ್ಗಗಳಿಗೆ ಬೇರೆ ಬೇರೆ ತೂಕಗಳ ಮತ್ತು ಅಳತೆಗಳ ವರ್ಗಗಳಿಗೆ ಅಥವಾ ತೂಕಗಳ ಮತ್ತು ಅಳತೆಗಳ ಬಳಕೆದಾರರ ಬೇರೆ ಬೇರೆ ವರ್ಗಗಳಿಗೆ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು.

2. **ಪರಿಭಾಷೆಗಳು.**—ಈ ಅಧಿನಿಯಮದಲ್ಲಿ ಸಂದರ್ಭಕ್ಕೆ ಬೇರೆ ಅರ್ಥದ ಅಗತ್ಯವಿರದಿದ್ದರೆ—

(ಕ) "ಅಂಕಶೋಧನ" ಎಂದರೆ ಒಂದು ತೂಕದಲ್ಲಿನ ಅಥವಾ ಅಳತೆಯಲ್ಲಿನ ಪ್ರಮಾದಗಳ ಮೌಲ್ಯಗಳನ್ನು ನಿರ್ಧರಿಸುವ ಮತ್ತು ಆವಶ್ಯಕವಾದರೆ ಅಂಥ ತೂಕದ ಅಥವಾ ಅಳತೆಯ ಮಾಪನ ಶಾಸ್ತ್ರದ ಗುಣಲಕ್ಷಣಗಳನ್ನು ನಿರ್ಧರಿಸುವ ಉದ್ದೇಶಕ್ಕಾಗಿ ಅವಶ್ಯವಾದ ಎಲ್ಲ ಕಾರ್ಯಗಳು ಮತ್ತು ಇದು ತೂಕದ ಅಥವಾ ಅಳತೆಯ ಗೇಜು ಗುರುತುಗಳ ಅಥವಾ ಸ್ಕೇಲು ಗುರುತುಗಳ ಸ್ಥಾನಗಳನ್ನು ಅಥವಾ ಕೆಲವು ಸಂದರ್ಭಗಳಲ್ಲಿ ಅಳತೆ ಮಾಡಬೇಕಾದ ಪ್ರಮಾಣದ ಸಂವಾದಿ ಮೌಲ್ಯಗಳ ಸಂಬಂಧದಲ್ಲಿ ಕೆಲವು ಪ್ರಮುಖ ಗುರುತುಗಳನ್ನು ಮಾತ್ರ ವಾಸ್ತವವಾಗಿ ನಿಗದಿಪಡಿಸುವುದನ್ನು ಒಳಗೊಳ್ಳುತ್ತದೆ.

**ವಿವರಣೆ.**—ಒಂದು ತೂಕವನ್ನು ಅಥವಾ ಅಳತೆಯನ್ನು ಒಂದು ಮಾನಕವಾಗಿ ಬಳಸುವುದಕ್ಕೆ ಅನುಮತಿಸುವ ದೃಷ್ಟಿಯಿಂದಲೂ ಸಹ ಅಂಕಶೋಧನವನ್ನು ಕೈಗೊಳ್ಳಬಹುದು.

(ಖ) "ಪ್ಯಾಕು ಮಾಡಿದ ರೂಪದಲ್ಲಿರುವ ಸರಕು" ಎಂದರೆ ಯಾವುದೇ ಶೀಸೆಯಲ್ಲಿ, ಡಬ್ಬದಲ್ಲಿ, ಸುತ್ತು ಕಾಗದದಲ್ಲಿ ಅಥವಾ ಅನ್ಯಥಾ ಸಗಟಾಗಿ ಅಥವಾ ಚಿಲ್ಲರೆಯಾಗಿ ಮಾರಾಟ ಮಾಡುವುದಕಾಗಿ ಸೂಕ್ತವಾದ ಘಟಕಗಳಲ್ಲಿ ಪ್ಯಾಕು ಮಾಡಿದ ವ್ಯಾಪಾರ ಸರಕು.

(ಗ) "ವ್ಯಾಪಾರಿ" ಎಂದರೆ ಯಾವುದೇ ತೂಕದ ಅಥವಾ ಅಳತೆಯ ಸಂಬಂಧದಲ್ಲಿ ಅಂಥ ತೂಕವನ್ನು ಅಥವಾ ಅಳತೆಯನ್ನು ನಗದಿಗೆ ಅಥವಾ ಮುಂದೂಡಿದ ಸಂದಾಯಕ್ಕಾಗಿ ಅಥವಾ ಕಮಿಷನ್ನಿಗಾಗಿ, ಪರಿಶ್ರಮ ಧನಕಾಗಿ ಅಥವಾ ಇತರ ಬೆಲೆಯುಳ್ಳ ಪ್ರತಿಫಲಕ್ಕಾಗಿ ಕೊಳ್ಳುವ ಮಾರುವ ಸರಬರಾಜು ಮಾಡುವ ಅಥವಾ ಹಂಚುವ ವ್ಯವಹಾರವನ್ನು ನೇರವಾಗಿ ಅಥವಾ ಅನ್ಯಥಾ ನಡೆಸುವ ವ್ಯಕ್ತಿ ಅಥವಾ ಫರ್ಮು ಅಥವಾ ಹಿಂದೂ ಅವಿಭಕ್ತ ಕುಟುಂಬ ಮತ್ತು ಇದು ಕೆಳಕಂಡವರನ್ನು ಒಳಗೊಳ್ಳುತ್ತದೆ.—

(i) ಯಾವನೇ ಯಜಮಾನನ ಪರವಾಗಿ ಅಂಥ ವ್ಯವಹಾರವನ್ನು ನಡೆಸುತ್ತಿರುವ ಕಮಿಷನ್ ಏಜೆಂಟು,

(ii) ಯಾವನೇ ಬಳಕೆದಾರನಿಗೆ, ತಯಾರಕನಿಗೆ, ದುರಸ್ತಿಗಾರನಿಗೆ, ಗ್ರಾಹಕನಿಗೆ ಅಥವಾ ಇತರ ಯಾವನೇ ವ್ಯಕ್ತಿಗೆ ಯಾವುದೇ ತೂಕವನ್ನು ಅಥವಾ ಅಳತೆಯನ್ನು ಮಾರುವ, ಸರಬರಾಜು ಮಾಡುವ, ಹಂಚುವ ಅಥವಾ ಅನ್ಯಥಾ ವಶಾವಣೆ ಮಾಡುವ ಯಾವನೇ ಆಮದುಗಾರ:

ಆದರೆ ಈ ಖಂಡದಲ್ಲಿ ಉಲ್ಲೇಖಿಸಲಾದ ಯಾವನೇ ವ್ಯಕ್ತಿಗೆ ಅಥವಾ ವ್ಯಕ್ತಿಗಳ ವರ್ಗಕ್ಕೆ ಯಾವುದೇ ತೂಕವನ್ನು ಅಥವಾ ಅಳತೆಯನ್ನು, ಮಾರುವ ಸರಬರಾಜು ಮಾಡುವ ಹಂಚುವ ಅಥವಾ ಅನ್ಯಥಾ ವಶಾವಣೆಮಾಡುವ ತಯಾರಕನನ್ನು ಒಳಗೊಳ್ಳುವುದಿಲ್ಲ.

ವಿವರಣೆ.—ಸಂದೇಹಗಳ ನಿವಾರಣೆಗಾಗಿ ವ್ಯಾಪಾರಿಯಲ್ಲದ ಇತರ ಯಾವನೇ ವ್ಯಕ್ತಿಗೆ ಯಾವುದೇ ತೂಕವನ್ನು ಅಥವಾ ಅಳತೆಯನ್ನು ಮಾರುವ, ಸರಬರಾಜು ಮಾಡುವ, ಹಂಚುವ ಅಥವಾ ಅನ್ಯಥಾ ವಶಾವಣೆಮಾಡುವ ತಯಾರಕನನ್ನು ವ್ಯಾಪಾರಿ ಎಂದು ಭಾವಿಸತಕ್ಕುದೆಂದು ಈ ಮೂಲಕ ಘೋಷಿಸಲಾಗಿದೆ;

(ಘ) ''ನಿರ್ದೇಶಕ" ಎಂದರೆ 28ನೇ ಪ್ರಕರಣದ ಮೇರೆಗೆ ನೇಮಿತನಾದ ಕಾನೂನು ಮಾಪನಶಾಸ್ತ್ರದ ನಿರ್ದೇಶಕ;

(ಙ) ''ರಫ್ತು" ಎಂದರೆ ಅದರ ವ್ಯಾಕರಣ ವ್ಯತ್ಯಾಸಗಳು ಹಾಗೂ ಸಜಾತೀಯ ಪದಾವಳಿಗಳೊಂದಿಗೆ ಭಾರತದಿಂದ ಹೊರಕ್ಕೆ ಭಾರತದ ಹೊರಗಿನ ಸ್ಥಳಕ್ಕೆ ತೆಗೆದುಕೊಂಡು ಹೋಗುವುದು;

(ಚ) 'ಪೋಟಾ ಪ್ಯಾಕೇಜು" ಎಂದರೆ ಅಂಥ ಪ್ಯಾಕೇಜಿನ ಸಂಬಂಧದಲ್ಲಿ ಈ ಅಧಿನಿಯಮದ ಉಪಬಂಧಗಳಿಗೆ ಅಥವಾ ಅದರ ಮೇರೆಗೆ ಮಾಡಲಾದ ಯಾವುದೇ ನಿಯಮಕ್ಕೆ ಅಥವಾ ಆದೇಶಕ್ಕೆ ಅನುಸಾರವಾಗಿ ಇರದ ಯಾವುದೇ ಪ್ಯಾಕೇಜು;

(ಛ) ''ಖೋಟಾ ತೂಕ ಅಥವಾ ಅಳತೆ" ಎಂದರೆ ಆ ತೂಕದ ಅಥವಾ ಅಳತೆಯ ಸಂಬಂಧದಲ್ಲಿ ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ನಿಗದಿಪಡಿಸಲಾದ ಮಾನಕಗಳಿಗೆ ಅನುಸಾರವಾಗಿ ಇರದ ಯಾವುದೇ ತೂಕ ಅಥವಾ ಅಳತೆ;

(ಜ) ''ತೂಕಗಳ ಮತ್ತು ಅಳತೆಗಳ ಬಗೆಗಿನ ಸಾಮಾನ್ಯ ಸಮ್ಮೇಳನ" ಎಂದರೆ ಕನ್ವೆಂಶನ್‌ದು ಮಿಾತರ್ ಮೇರೆಗೆ ಸ್ಥಾಪಿತವಾದ ಕಾನ್‌ಫರೆನ್ಸ್ ಜನರಲ್ ದೆ ಪಾಯ್ಡ್ಸ್ ವಿತ್ ಮೆಷರ್ಸ್;

(ಝ) 'ಆಮದು' ಎಂದರೆ ಅದರ ವ್ಯಾಕರಣ ವ್ಯತ್ಯಾಸಗಳು ಹಾಗೂ ಸಜಾತೀಯ ಪದಾವಳಿಗಳೊಡನೆ ಭಾರತದ ಹೊರಗಿನ ಸ್ಥಳದಿಂದ ಭಾರತದ ಒಳಕ್ಕೆ ತರುವುದು;

(ಞ) ''ತೂಕಗಳ ಮತ್ತು ಅಳತೆಗಳ ಅಂತಾರಾಷ್ಟ್ರೀಯ ಬ್ಯೂರೋ" ಎಂದರೆ ಫ್ರಾನ್ಸಿನ ಸೇವೆಯಲ್ಲಿ ಇರುವ ಕನ್ವೆಂಶನ್ ಮಿಾತರ್‌ನ ಮೇರೆಗೆ ಸ್ಥಾಪಿತವಾದ ಬ್ಯೂರೋ ಇಂಟರ್‌ನ್ಯಾಷನಲ್ ದೇಪಾಯ್ಡ್ಸ್ ವಿತ್ ಮೆಷರ್ಸ್.

(ಟ) ''ಕಾನೂನು ಮಾಪನಶಾಸ್ತ್ರದ ಅಂತಾರಾಷ್ಟ್ರೀಯ ಸಂಸ್ಥೆ"ಎಂದರೆ ಕನ್ವೆಂಷನ್ ಇನ್ಸ್ಟಿತಾ ಆನ್ ಆರ್ಗನೈಸೇಷನ್ ಇಂಟರ್‌ನ್ಯಾಷನಲ್ ಮೆತ್ರಾಲೋಜಿ ಲೀಗೆಲ್ ಮೇರೆಗೆ ಸ್ಥಾಪಿತವಾದ ಆರ್ಗನೈಸೇಷನ್ ಇಂಟರ್‌ನ್ಯಾಷನಲ್ ದೆ ಮೆತ್ರಾಲೊಜಿ ಲೀಗೇಲ್,

(ಠ) "ಕಿಲೋಗ್ರಾಂನ ಅಂತಾರಾಷ್ಟ್ರೀಯ ಪ್ರಥಮ ಮಾದರಿ" ಎಂದರೆ 1889ರಲ್ಲಿ ಪ್ಯಾರಿಸ್‌ನಲ್ಲಿ ಜರುಗಿದ ತೂಕಗಳ ಮತ್ತು ಅಳತೆಗಳ ಬಗೆಗಿನ ಪ್ರಥಮ ಸಾಮಾನ್ಯ ಸಮ್ಮೇಳನದಲ್ಲಿ ಮಂಜೂರಾದ ಮತ್ತು ತೂಕಗಳ ಮತ್ತು ಅಳತೆಗಳ ಅಂತಾರಾಷ್ಟ್ರೀಯ ಬ್ಯೂರೋವಿನಲ್ಲಿ ಇಡಲಾಗಿರುವ ಪ್ರಥಮ ಮಾದರಿ;

(ಡ) ''ಅಂತಾರಾಜ್ಯ ವ್ಯಾಪಾರ ಅಥವಾ ವಾಣಿಜ್ಯ" ಎಂದರೆ ತೂಕದ ಅಳತೆಯ ಅಥವಾ ಸಂಖ್ಯೆಯ ಮೂಲಕ ಕೊಳ್ಳಲಾಗುವ ಮಾರಲಾಗುವ ಸರಬರಾಜು ಮಾಡಲಾಗುವ, ಹಂಚಲಾಗುವ ಅಥವಾ ವಶಾವಣೆ ಮಾಡಲಾಗುವ ಇತರ ಸರಕಿನ ಸಂಬಂಧದಲ್ಲಿ.—

(i) ಅಂಥ ತೂಕವನ್ನು, ಅಳತೆಯನ್ನು ಅಥವಾ ಇತರ ಸರಕುಗಳನ್ನು ಒಂದು ರಾಜ್ಯದಿಂದ ಇನ್ನೊಂದಕ್ಕೆ ಸಾಗಿಸುವಂತೆ ಮಾಡುವ ಅಥವಾ

(ii) ಅಂಥ ತೂಕವನ್ನು, ಅಳತೆಯನ್ನು ಅಥವಾ ಇತರ ಸರಕುಗಳನ್ನು ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ಸಾಗಿಸುತ್ತಿರುವಾಗ ಅವುಗಳ ಸ್ವಾಮ್ಯದ ದಸ್ತಾವೇಜುಗಳನ್ನು ವರ್ಗಾಂತರಿಸುವ ಮೂಲಕ ಉಂಟಾದ,

—ಖರೀದಿ, ಮಾರಾಟ, ಸರಬರಾಜು, ಹಂಚಿಕೆ ಮತ್ತು ವಶಾವಣೆ.

ವಿವರಣೆ–I.—ಯಾವುದೇ ಅಂಥ ತೂಕವನ್ನು ಅಥವಾ ಅಳತೆಯನ್ನು ಅಥವಾ ಇತರ ಸರಕುಗಳನ್ನು ರವಾನೆ ಮಾಡುವುದಕ್ಕಾಗಿ ವಾಹಕನಿಗೆ ಅಥವಾ ಇತರ ಸರಕು ರಕ್ಷಕನಿಗೆ ವಶಾವಣೆ ಮಾಡಿರುವಲ್ಲಿ (ii) ನೇ ಉಪಖಂಡದ ಉದ್ದೇಶಗಳಿಗಾಗಿ ಅಂಥ ತೂಕದ, ಅಳತೆಯ ಅಥವಾ ಇತರ ಸರಕುಗಳ ಸಾಗಣೆಯು ಅಂಥ ವಶಾವಣೆಯ ಕಾಲದಿಂದ ಆರಂಭವಾಗುವುದೆಂದು ಮತ್ತು ಆ ಸರಕುವಾಹಕನಿಂದ ಅಥವಾ ಸರಕು ರಕ್ಷಕನಿಂದ ಅದನ್ನು ವಶಕ್ಕೆ ತೆಗೆದುಕೊಂಡ ಕಾಲಕ್ಕೆ ಅಂತ್ಯಗೊಳ್ಳುವುದೆಂದು ಭಾವಿಸತಕ್ಕದ್ದು.

ವಿವರಣೆ–II.—ಅಂಥ ಯಾವುದೇ ತೂಕದ, ಅಳತೆಯ ಅಥವಾ ಇತರ ಸರಕಿನ ಸಾಗಣೆಯು ಅದೇ ರಾಜ್ಯದಲ್ಲಿ ಆರಂಭವಾದಲ್ಲಿ ಮತ್ತು ಅಂತ್ಯಗೊಂಡಲ್ಲಿ ಹಾಗೆ ಸಾಗಿಸುವಾಗ ಅದು ಯಾವುದೇ ಇನ್ನೊಂದು ರಾಜ್ಯದ ರಾಜ್ಯ ಕ್ಷೇತ್ರದ ಮೂಲಕ ಹಾಯ್ದು ಹೋಗುವ ಕಾರಣ ಮಾತ್ರದಿಂದ ಅಂಥ ತೂಕವನ್ನು ಅಳತೆಯನ್ನು ಅಥವಾ ಇತರ ಸರಕುಗಳನ್ನು ಒಂದು ರಾಜ್ಯದಿಂದ ಮತ್ತೊಂದಕ್ಕೆ ಸಾಗಿಸುವುದು ಎಂದು ಭಾವಿಸತಕ್ಕುದಲ್ಲ.

(ಢ) ''ಗುರುತುಚೀಟಿ" ಎಂದರೆ ಯಾವುದೇ ಸರಕಿನ ಮೇಲೆ ಅಥವಾ ಯಾವುದೇ ವ್ಯಾಪಾರೀ ಸರಕನ್ನು ಒಳಗೊಂಡಿರುವ ಪ್ಯಾಕಿನ ಮೇಲೆ ಅಂಟಿಸಿರುವ ಅಥವಾ ಕಾಣಬರುವ, ಬರೆದ, ಗುರುತು ಹಾಕಿದ ಮುಂದ್ರೆಯೊತ್ತಿದ, ಮುದ್ರಿಸಿದ, ಅಥವಾ ಚಿತ್ರಿಸಿದ ಯಾವುದೇ ಚೀಟಿ;

(ಣ) ''ತಯಾರಕ" ಎಂದರೆ ಯಾವುದೇ ತೂಕದ ಅಥವಾ ಅಳತೆಯ ಸಂಬಂಧದಲ್ಲಿ;

(i) ಅಂಥ ತೂಕವನ್ನು ಅಥವಾ ಅಳತೆಯನ್ನು ಮಾಡುವ ಅಥವಾ ತಯಾರಿಸುವ;

(ii) ಅಂಥ ತೂಕದ ಅಥವಾ ಅಳತೆಯ ಒಂದು ಅಥವಾ ಹೆಚ್ಚಿನ ಭಾಗಗಳನ್ನು ಮಾಡುವ ಅಥವಾ ತಯಾರಿಸುವ ಮತ್ತು ಅಂಥ ತೂಕದ ಅಥವಾ ಅಳತೆಯ ಇತರ ಭಾಗಗಳನ್ನು ತರಿಸಿಕೊಳ್ಳುವ ಮತ್ತು ಆ ಭಾಗಗಳನ್ನು ಜೋಡಿಸಿದ ಅನಂತರ ಆ ಸಿದ್ಧ ವಸ್ತುವನ್ನು ಸಂದರ್ಭಾನುಸಾರ ತಾನೇ ತಯಾರಿಸಿದ ತೂಕವೆಂದು ಅಥವಾ ಅಳತೆಯೆಂದು ಕ್ಲೇಮು ಮಾಡುವ.

(iii) ಅಂಥ ತೂಕದ ಅಥವಾ ಅಳತೆಯ ಯಾವ ಭಾಗವನ್ನು ಮಾಡದೆ ಅಥವಾ ತಯಾರಿಸದೆ ಇತರರು ಮಾಡಿದ ಅಥವಾ ತಯಾರಿಸಿದ ಅದರ ಭಾಗಗಳನ್ನು ಜೋಡಿಸುವ ಮತ್ತು ಹಾಗೆ ಸಿದ್ಧವಾದ ವಸ್ತುವನ್ನು ಸಂದರ್ಭಾನುಸಾರ ತಾನೇ ಮಾಡಿದ ಅಥವಾ ತಯಾರಿಸಿದ ತೂಕವೆಂದು ಅಥವಾ ಅಳತೆಯೆಂದು ಕ್ಲೇಮು ಮಾಡುವ;

(iv) ಇತರ ಯಾವನೇ ವ್ಯಕ್ತಿಯು ಮಾಡಿದ ಅಥವಾ ತಯಾರಿಸಿದ ಸಂಪೂರ್ಣಗೊಂಡ ತೂಕದ ಅಥವಾ ಅಳತೆಯ ಮೇಲೆ ತನ್ನ ಸ್ವಂತ ಗುರುತನ್ನು ಹಾಕುವ ಅಥವಾ ಹಾಕಿಸುವ ಮತ್ತು ಅಂಥ ವಸ್ತುವನು ಸಂದರ್ಭಾನುಸಾರ ತಾನೇ ಮಾಡಿದ ಅಥವಾ ತಯಾರಿಸಿದ ತೂಕವೆಂದು ಅಥವಾ ಅಳತೆಯೆಂದು ಕ್ಲೇಮು ಮಾಡುವ,

—ವ್ಯಕ್ತಿ ಅಥವಾ ಫರ್ಮು ಅಥವಾ ಹಿಂದೂ ಅವಿಭಕ್ತ ಕುಟುಂಬ.

ವಿವರಣೆ.—ಯಾವನೇ ತಯಾರಕನು ತಾನು ನಡೆಸಿಕೊಂಡು ಬರುತ್ತಿರುವ ಯಾವುದೇ ಶಾಖಾ ಕಚೇರಿಗೆ ಯಾವುದೇ ತೂಕವನ್ನು ಅಥವಾ ಅಳತೆಯನ್ನು ಅಥವಾ ಅದರ ಭಾಗವನ್ನು ಕಳುಹಿಸಿಕೊಟ್ಟಲ್ಲಿ ಹಾಗೆ ಆ ಶಾಖಾ ಕಚೇರಿಗೆ ಕಳುಹಿಸಿಕೊಟ್ಟ ಭಾಗಗಳನ್ನು ಅಲ್ಲಿಯೇ ಜೋಡಿಸಿದರೂ ಸಹ ಆ ಶಾಖಾ ಕಚೇರಿಯನ್ನು ತಯಾರಕ ಎಂದು ಭಾವಿಸತಕ್ಕುದಲ್ಲ;

(ತ) ''ಅಧಿಸೂಚನೆ" ಎಂದರೆ ಸರ್ಕಾರೀ ರಾಜಪತ್ರದಲ್ಲಿ ಪ್ರಕಟಿಸಲಾದ ಅಧಿಸೂಚನೆ;

(ಥ) "ವ್ಯಕ್ತಿ" ಎಂಬುದು ಕೆಳಕಂಡವುಗಳನ್ನು ಒಳಗೊಳ್ಳುತ್ತದೆ—

(i) ಪ್ರತಿಯೊಂದು ಇಲಾಖೆ ಅಥವಾ ಕಚೇರಿ;

(ii) ಸರ್ಕಾರವು ಸ್ಥಾಪಿಸಿದ ಅಥವಾ ರಚಿಸಿದ ಪ್ರತಿಯೊಂದು ಸಂಸ್ಥೆ;

(iii) ಭಾರತದ ರಾಜ್ಯ ಕ್ಷೇತ್ರದ ಒಳಗಿರುವ ಪ್ರತಿಯೊಂದು ಸ್ಥಳೀಯ ಪ್ರಾಧಿಕಾರ;

(iv) ಪ್ರತಿಯೊಂದು ಸಹಕಾರಿ ಸಂಘ;

(v) ಸಂಘಗಳ ನೋಂದಣಿ ಅಧಿನಿಯಮ, 1860 (1860ರ 21) ರ ಮೇರೆಗೆ ನೋಂದಾಯಿತವಾದ ಪ್ರತಿಯೊಂದು ಇತರ ಸಂಘ;

(ದ) "ಆವರಣ" ಎಂಬುದು ಕೆಳಕಂಡವುಗಳನ್ನು ಒಳಗೊಳ್ಳುತ್ತದೆ.—

(i) ಯಾವನೇ ವ್ಯಕ್ತಿಯು ತಾನೇ ಆಗಲಿ ಅಥವಾ ಏಜೆಂಟನ ಮೂಲಕವಾಗಲಿ, ಅವನನ್ನು ಯಾವುದೇ ಹೆಸರಿನಿಂದ ಕರೆಯಲಿ, ಯಾವುದೇ ವ್ಯವಹಾರವನ್ನು ಕೈಗಾರಿಕೆಯನ್ನು ಉತ್ಪಾದನೆಯನ್ನು ಅಥವಾ ವ್ಯಾಪಾರವನ್ನು ನಡೆಸುತ್ತಿರುವ ಸ್ಥಳ,

(ii) ಯಾವುದೇ ತೂಕವನ್ನು, ಅಳತೆಯನ್ನು ಅಥವಾ ಇತರ ಸರಕುಗಳನ್ನು ದಾಸ್ತಾನು ಮಾಡಲಾಗಿರುವ ಅಥವಾ ಪ್ರದರ್ಶಿಸಲಾಗಿರುವ ಉಗ್ರಾಣ, ಗೋದಾಮು ಅಥವಾ ಇತರ ಸ್ಥಳ,

(iii) ಯಾವುದೇ ವ್ಯಾಪಾರಕ್ಕೆ ಅಥವಾ ವ್ಯವಹಾರಕ್ಕೆ ಸಂಬಂಧಿಸಿದ ಯಾವವೇ ಲೆಕ್ಕದ ಪುಸ್ತಕಗಳನ್ನು ಅಥವಾ ಇತರ ದಸ್ತಾವೇಜುಗಳನ್ನು ಇಟ್ಟಿರುವ ಸ್ಥಳ,

(iv) ಯಾವುದೇ ವ್ಯವಹಾರವನ್ನು, ಕೈಗಾರಿಕೆಯನ್ನು, ಉತ್ಪಾದನೆಯನ್ನು ಅಥವಾ ವ್ಯಾಪಾರವನ್ನು ನಡೆಸುವ ಉದ್ದೇಶಕ್ಕಾಗಿ ವಾಸದ ಮನೆಯ ಯಾವುದೇ ಭಾಗವನ್ನು ಬಳಸುತ್ತಿದ್ದರೆ ಆ ವಾಸದ ಮನೆ.

ವಿವರಣೆ.—"ಸ್ಥಳ" ಎಂಬುದು ವಾಹನದ ಅಥವಾ ನೌಕೆಯ ಅಥವಾ ಇತರ ಯಾವುದೇ ಚಲನ ಸಾಧನದ ಸಹಾಯದಿಂದ ಯಾವುದೇ ವ್ಯಾಪಾರವನ್ನು ಅಥವಾ ವ್ಯವಹಾರವನ್ನು ನಡೆಸುತ್ತಿದ್ದರೆ ಅವನ್ನು ಒಳಗೊಳ್ಳುತ್ತದೆ. ಮತ್ತು ವಾಹನದ, ನೌಕೆಯ ಅಥವಾ ಯಾವುದೇ ಚಲನ ಸಾಧನದ ಮೇಲೆ ನೆಲೆಗೊಳಿಸಲಾದ ಯಾವುದೇ ಅಳತೆಯ ಉಪಕರಣಗಳನ್ನು ಸಹ ಒಳಗೊಳ್ಳುತ್ತದೆ.

(ಧ) "ನಿಯಮಿಸಲಾದುದು" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಲಾಗಿರುವ ನಿಯಮಗಳ ಮೂಲಕ ನಿಯಮಿಸಲಾದುದು ಮತ್ತು 'ನಿಯಮಿಸಲಾದ ಪ್ರಾಧಿಕಾರ' ಎಂದರೆ ಅಂಥ ನಿಯಮಗಳ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಪ್ರಾಧಿಕಾರ;

(ನ) "ಮೂಲ ಮಾನಕ" ಎಂದರೆ ಯಾವುದೇ ಎರಡನೆಯ ಮಾನಕವನ್ನು ಸತ್ಯಾಪನೆ ಮಾಡುವುದಕ್ಕಾಗಿ ಕೇಂದ್ರ ಸರ್ಕಾರವು ಅಥವಾ ಅದರ ಪರವಾಗಿ ಮಾಡಿದ ಅಥವಾ ತಯಾರಿಸಿದ ಮಾನಕ ತೂಕದ ಅಥವಾ ಅಳತೆಯ ಸೆಟ್ಟು;

(ಪ) "ದುರಸ್ತಿಗಾರ" ಎಂಬುದು ಯಾವುದೇ ತೂಕವನ್ನು ಅಥವಾ ಅಳತೆಯನ್ನು ಸರಿಜೋಡಿಸುವ, ಸ್ವಚ್ಛಗೊಳಿಸುವ, ಅದಕ್ಕೆ ಎಣ್ಣೆ ಹಾಕುವ ಅಥವಾ ಬಣ್ಣ ಹಾಕುವ ಅಥವಾ ಅಂಥ ತೂಕವು ಅಥವಾ ಅಳತೆಯು ಈ ಅಧಿನಿಯಮದ ಮೇರೆಗೆ ಅಥವಾ ಮೂಲಕ ಸ್ಥಾಪಿತವಾದ ಮಾನಕಗಳಿಗೆ ಅನುಗುಣವಾಗಿರುವುದನ್ನು ಖಚಿತಪಡಿಸಿಕೊಳ್ಳಲು ಆ ತೂಕ ಅಥವಾ ಅಳತೆಗೆ ಇತರ ಯಾವುದೇ ಕೆಲಸವನ್ನು ಮಾಡುವ ವ್ಯಕ್ತಿ;

(ಫ) "ಮಾರಾಟ" ಎಂದರೆ ಅದರ ವ್ಯಾಕರಣ ವ್ಯತ್ಯಾಸಗಳು ಮತ್ತು ಸಜಾತೀಯ ಪದಾವಳಿಗಳೊಂದಿಗೆ ನಗದಿಗೆ ಅಥವಾ ಮುಂದೂಡಿದ ಸಂದಾಯಗಳಿಗಾಗಿ ಅಥವಾ ಇತರ ಯಾವುದೇ ಬೆಲೆಯುಳ್ಳ ಪ್ರತಿಫಲಕ್ಕಾಗಿ ಯಾವುದೇ ತೂಕದಲ್ಲಿ ಅಥವಾ ಅಳತೆಯಲ್ಲಿ ಅಥವಾ ಇತರ ಸರಕುಗಳಲ್ಲಿ ಸ್ವತ್ತನ್ನು ಒಬ್ಬ ವ್ಯಕ್ತಿಯು ಇನ್ನೊಬ್ಬ ವ್ಯಕ್ತಿಗೆ ವರ್ಗಾಯಿಸುವುದು ಮತ್ತು ಇದು ಬಾಡಿಗೆ ಖರೀದಿ ಪದ್ಧತಿಯ ಮೂಲಕ ಅಥವಾ ಕಂತುಗಳಲ್ಲಿ ಕೊಳ್ಳುವ ಇನ್ನಾವುದೇ ಪದ್ಧತಿಯ ಮೂಲಕ ತೂಕದ, ಅಳತೆಯ ಅಥವಾ ಇತರ ಸರಕುಗಳ ವರ್ಗಾವಣೆಯನ್ನು ಒಳಗೊಳ್ಳುತ್ತದೆ. ಆದರೆ ಅಂಥ ತೂಕವನ್ನು, ಅಳತೆಯನ್ನು ಅಥವಾ ಇತರ ಸರಕುಗಳನ್ನು ಅಡಮಾನ ಮಾಡುವುದನ್ನು ಆಧಾರ ಮಾಡುವುದನ್ನು ಅಥವಾ ಅದರ ಮೇಲಿನ ಋಣ ಭಾರವನ್ನು ಅಥವಾ ಒತ್ತೆಯನ್ನು ಒಳಗೊಳ್ಳುವುದಿಲ್ಲ;

(ಬ) "ಮೊಹರು" ಎಂದರೆ ಯಾವುದರಿಂದ ಮುದ್ರೆಯನ್ನು ತಯಾರಿಸಲಾಗುವುದೋ ಆ ಸಾಧನ ಅಥವಾ ಕಾರ್ಯವಿಧಾನ ಮತ್ತು ಇದು ಯಾವುದೇ ಮುದ್ರೆಯ ಋಜುತ್ವವನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಬಳಸಿದ ಯಾವುದೇ ತಂತಿಯನ್ನು ಅಥವಾ ಉಪಸಾಧನವನ್ನು ಒಳಗೊಳ್ಳುತ್ತದೆ;

(ಭ) "ಎರಡನೆಯ ಮಾನಕ" ಎಂದರೆ ಬಳಕೆ ಮಾನಕಗಳನ್ನು ಸತ್ಯಾಪನೆ ಮಾಡುವುದಕ್ಕಾಗಿ ಕೇಂದ್ರ ಸರ್ಕಾರವು ಅಥವಾ ರಾಜ್ಯ ಸರ್ಕಾರವು ಅಥವಾ ಅದರ ಪರವಾಗಿ ಮಾಡಿದ ಅಥವಾ ತಯಾರಿಸಿದ ಮಾನಕ ತೂಕದ ಅಥವಾ ಅಳತೆಯ ಸೆಟ್ಟು;

(ಮ) 'ಮುದ್ರೆ' ಎಂದರೆ—

(i) ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ನಿರ್ದಿಷ್ಟಪಡಿಸಲಾದ ಮಾನಕಕ್ಕೆ ಅಂಥ ತೂಕವು ಅಥವಾ ಅಳತೆಯು ಅನುಗುಣವಾಗಿದೆ ಎಂದು ಪ್ರಮಾಣೀಕರಿಸುವ ಅಥವಾ

(ii) ಯಾವುದೇ ಅಂಥ ತೂಕವು ಅಥವಾ ಅಳತೆಯು ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ನಿರ್ದಿಷ್ಟಪಡಿಸಲಾದ ಮಾನಕಗಳಿಗೆ ಅನನುಗುಣವಾಗಿದೆ ಎಂದು ಪ್ರಮಾಣೀಕರಿಸಿ ಈ ಹಿಂದೆ ಅದರ ಮೇಲೆ ಹಾಕಲಾಗಿದ್ದ ಯಾವುದೇ ಗುರುತನ್ನು ಅಳಿಸಿ ಹಾಕಿಸಲಾಗಿದೆ ಎಂದು ಸೂಚಿಸುವ,

—ದೃಷ್ಟಿಯಿಂದ ಯಾವುದೇ ತೂಕದ ಅಥವಾ ಅಳತೆಯ ಮೇಲೆ ಅಥವಾ ಅದಕ್ಕೆ ಸಂಬಂಧಿಸಿದಂತೆ ಮಾಡಲಾದ ಗುರುತು;

ವಿವರಣೆ.—ಅಚ್ಚೊತ್ತುವ ಮೂಲಕ, ಎರಕ ಹೊಯ್ಯುವ ಮೂಲಕ, ಕೊರೆಯುವ ಮೂಲಕ, ಕೆತ್ತುವ ಮೂಲಕ ಕಾಯಿಸಿ ಒತ್ತುವ ಮೂಲಕ ಅಥವಾ ಇತರ ಯಾವುದೇ ವಿಧಾನದ ಮೂಲಕ ಮುದ್ರೆಯನ್ನು ಹಾಕಬಹುದು.

(ಯ) 'ವ್ಯವಹಾರ' ಎಂದರೆ,—

(i) ಮಾರಾಟಕ್ಕಾಗಲಿ, ಖರೀದಿಗಾಗಲಿ, ವಿನಿಮಯಕ್ಕಾಗಲಿ ಅಥವಾ ಇತರ ಯಾವುದೇ ಉದ್ದೇಶಕ್ಕಾಗಲಿ ಮಾಡಿಕೊಂಡ ಯಾವುದೇ ಕರಾರು ಅಥವಾ

(ii) ಸಂಭಾವನೆಯ ಸುಂಕದ ಶುಲ್ಕದ ಅಥವಾ ಇತರ ಬಾಕಿಗಳ ಯಾವುದೇ ನಿರ್ಧಾರಣೆ ಅಥವಾ

(iii) ಮಾಡಿದ ಯಾವುದೇ ಕೆಲಸದ ಕೊಡಬೇಕಾದ ಯಾವುದೇ ಮಜೂರಿಯ ಅಥವಾ ಸಲ್ಲಿಸಿದ ಯಾವುವೇ ಸೇವೆಗಳ ನಿರ್ಧಾರಣೆ.

(ಯಕ) "ಸತ್ಯಾಪನೆ ಮಾಡಿರದ ತೂಕ ಅಥವಾ ಅಳತೆ" ಎಂದರೆ ಈ ಅಧಿನಿಯಮದ ಮೇರೆಗೆ ಸತ್ಯಾಪನೆ ಮಾಡಬೇಕೆಂದು ' ಮತ್ತು, ಮುದ್ರೆಯನ್ನು ಹಾಕಿರಬೇಕೆಂದು ಅಗತ್ಯಪಡಿಸಲಾದ ಆದರೆ ಹಾಗೆ ಸತ್ಯಾಪನೆ ಮಾಡಿರದ ಮತ್ತು ಮುದ್ರೆ ಹಾಕಿರದ ತೂಕ ಅಥವಾ ಅಳತೆ;

(ಯಖ) "ಸತ್ಯಾಪನೆ" ಎಂಬುದು ಅದರ ವ್ಯಾಕರಣ ವ್ಯತ್ಯಾಸಗಳು ಹಾಗೂ ಸಜಾತೀಯ ಪದಾವಳಿಗಳೊಂದಿಗೆ ಯಾವುದೇ ತೂಕದ ಅಥವಾ ಅಳತೆಯ ಸಂಬಂಧದಲ್ಲಿ ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಸ್ಥಾಪಿಸಲಾದ ಮಾನಕಗಳಿಗೆ ಅಂಥ ತೂಕವು ಅಥವಾ ಅಳತೆಯು ಅನುಗುಣವಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳುವ ದೃಷ್ಟಿಯಿಂದ ಆ ತೂಕವನ್ನು ಅಥವಾ ಅಳತೆಯನು ಹೋಲಿಸಿ ನೋಡುವ, ತಪಾಸಿಸುವ ಪರೀಕ್ಷಿಸುವ ಅಥವಾ ಸರಿಹೊಂದಿಸುವ ಪ್ರಕ್ರಿಯೆಯನ್ನು ಒಳಗೊಳ್ಳುತ್ತದೆ ಮತ್ತು ಇದು ಪುನಸ್ಸತ್ಯಾಪನೆಯನ್ನು ಮತ್ತು ಅಂಕಶೋಧನೆಯನ್ನು ಸಹ ಒಳಗೊಳ್ಳುತ್ತದೆ:

(ಯಗ) "ತೂಕದ ಅಥವಾ ಅಳತೆಯ ಉಪಕರಣ" ಎಂದರೆ ಏನನ್ನಾದರೂ ತೂಕ ಮಾಡುವ ಅಥವಾ ಅಳತೆ ಮಾಡುವ ಉದ್ದೇಶಕ್ಕಾಗಿ ಮಾತ್ರವೇ ಅಥವಾ ಅದಕ್ಕೆ ಜೊತೆಯಾಗಿ ಬಳಸಲಾದ ಅಥವಾ ಬಳಸಲು ಉದ್ದೇಶಿಸಿದ ಯಾವುದೇ ವಸ್ತು, ಉಪಕರಣ, ಸಲಕರಣೆ ಅಥವಾ ಸಾಧನ ಅಥವಾ ಅವುಗಳ ಯಾವುದೇ ಸಂಯೋಗ ಮತ್ತು ಇದು ಅಂಥ ಯಾವುದೇ ವಸ್ತುವಿನ ಉಪಕರಣದ, ಸಲಕರಣೆಯ ಅಥವಾ ಸಾಧನದ ಜೊತೆಗಿರುವ ಯಾವುದೇ ಪರಿಕರವನ್ನು, ಜೋಡಣೆಯನ್ನು ಅಥವಾ ಭಾಗವನ್ನು ಒಳಗೊಳ್ಳುತ್ತದೆ;

(ಯಘ) "ತೂಕ ಅಥವಾ ಅಳತೆ" ಎಂದರೆ ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ನಿರ್ದಿಷ್ಟಪಡಿಸಲಾದ ತೂಕ ಅಥವಾ ಅಳತೆ ಮತ್ತು ಇದು ತೂಕ ಮಾಡುವ ಅಥವಾ ಅಳತೆ ಮಾಡುವ ಉಪಕರಣವನ್ನು ಒಳಗೊಳ್ಳುತ್ತದೆ.

(ಯಙ) "ಬಳಕೆ ಮಾನಕ" ಎಂದರೆ.—ರಾಷ್ಟ್ರೀಯ ಪ್ರಥಮ ಮಾದರಿ ಅಥವಾ ರಾಷ್ಟ್ರೀಯ ಮೂಲ ಮಾನಕ ಅಥವಾ ಎರಡನೆಯ ಮಾನಕವಲ್ಲದ ಇತರ ಯಾವುದೇ ಮಾನಕ ತೂಕವನ್ನು ಅಥವಾ ಅಳತೆಯನ್ನು ಸತ್ಯಾಪನೆ ಮಾಡುವುದಕ್ಕಾಗಿ ಸರ್ಕಾರವು ಅಥವಾ ಅದರ ಪರವಾಗಿ ಮಾಡಿದ ಅಥವಾ ತಯಾರಿಸಿದ ಮಾನಕ ತೂಕದ ಅಥವಾ ಅಳತೆಯ ಸೆಟ್ಟು.

3. ಈ ಅಧಿನಿಯಮದ ಉಪಬಂಧಗಳು ಇತರ ಯಾವುದೇ ಕಾನೂನಿನ ಉಪಬಂಧಗಳನ್ನು ಅಧ್ಯಾರೋಹಿಸುವುವು.—ಈ ಅಧಿನಿಯಮವಲ್ಲದ ಇತರ ಯಾವುದೇ ಅಧಿನಿಯಮದಲ್ಲಿ ಅಥವಾ ಈ ಅಧಿನಿಯಮವಲ್ಲದ ಇತರ ಯಾವುದೇ ಅಧಿನಿಯಮದ ಕಾರಣದಿಂದಾಗಿ ಪರಿಣಾಮಕಾರಿಯಾಗುವ ಯಾವುದೇ ಲಿಖಿತದಲ್ಲಿ ಈ ಅಧಿನಿಯಮಕ್ಕೆ ಅಸಂಗತವಾದುದು ಏನೇ ಇದ್ದರೂ ಈ ಅಧಿನಿಯಮದ ಉಪಬಂಧಗಳು ಪರಿಣಾಮಕಾರಿಯಾಗಿರತಕ್ಕದ್ದು.

## ಭಾಗ-II

## ತೂಕಗಳ ಮತ್ತು ಅಳತೆಗಳ ಮಾನಕಗಳನ್ನು ನಿಗದಿಪಡಿಸುವುದು

### ಅಧ್ಯಾಯ-I

### ಮಾನಕ ಘಟಕಗಳು

4. ತೂಕದ ಅಥವಾ ಅಳತೆಯ ಘಟಕಗಳು ಮೆಟ್ರಿಕ್ ಪದ್ಧತಿಯನ್ನು ಆಧರಿಸಿರಬೇಕು.—(1) ತೂಕದ ಅಥವಾ ಅಳತೆಯ ಪ್ರತಿಯೊಂದು ಘಟಕವೂ ಮೆಟ್ರಿಕ್ ಪದ್ಧತಿಯ ಘಟಕಗಳನ್ನು ಆಧರಿಸಿರತಕ್ಕದ್ದು.

(2) (1)ನೇ ಉಪಪ್ರಕರಣದ ಉದ್ದೇಶಗಳಿಗಾಗಿ—

(ಕ) ತೂಕಗಳ ಮತ್ತು ಅಳತೆಗಳ ಸಾಮಾನ್ಯ ಸಮ್ಮೇಳನವು ಶಿಫಾರಸು ಮಾಡಿದ ಘಟಕಗಳ ಅಂತಾರಾಷ್ಟ್ರೀಯ ಪದ್ಧತಿಯು, ಮತ್ತು

(ಖ) ಕಾನೂನು ಮಾಪನ ಶಾಸ್ತ್ರದ ಅಂತಾರಾಷ್ಟ್ರೀಯ ಸಂಸ್ಥೆಯು ಶಿಫಾರಸು ಮಾಡಬಹುದಾದಂಥ ಹೆಚ್ಚಿನ ಘಟಕಗಳು,

—ಮೆಟ್ರಿಕ್ ಪದ್ಧತಿಯ ಘಟಕಗಳಾಗಿರತಕ್ಕದ್ದು.

5. ಉದ್ದದ ಮೂಲ ಘಟಕ.—(1) ಉದ್ದದ ಮೂಲ ಘಟಕವು ಮೀಟರ್ ಆಗಿರತಕ್ಕದ್ದು.

(2) 'ಮೀಟರ್' ಎಂಬುದು ಕ್ರಿಪ್ಟಾನ್ 86 ಅಣುವಿನ 2P ಮತ್ತು 5.5 ಮಟ್ಟಗಳ ನಡುವಣ ಸ್ಥಿತ್ಯಂತರಕ್ಕೆ ಸಂವಾದಿಯಾದ ವಿಕಿರಣದ ನಿರ್ವಾತ ಪ್ರದೇಶದಲ್ಲಿನ 1650 763·73 ತರಂಗಾಂತರಗಳಿಗೆ ಸಮನಾದ ಉದ್ದ.

6. ದ್ರವ್ಯರಾಶಿಯ ಮೂಲ ಘಟಕ.—(1) ದ್ರವ್ಯರಾಶಿಯ ಮೂಲ ಘಟಕವು ಕಿಲೋಗ್ರಾಂ ಆಗಿರತಕ್ಕದ್ದು.

(2) 'ಕಿಲೋಗ್ರಾಂ' ದ್ರವ್ಯರಾಶಿಯ ಘಟಕವಾಗಿದೆ; ಕಿಲೋಗ್ರಾಂನ ಅಂತಾರಾಷ್ಟ್ರೀಯ ಪ್ರಥಮ ಮಾದರಿಗೆ ಸಮನಾದ ದ್ರವ್ಯರಾಶಿ.

7. ಕಾಲದ ಮೂಲ ಘಟಕ:—(1) ಕಾಲದ ಮೂಲ ಘಟಕವು 'ಸೆಕೆಂಡು' ಆಗಿರತಕ್ಕದ್ದು.

(2) 'ಸೆಕೆಂಡು" ಎಂಬುದು ಸೀಸಿಯಂ—133 ಅಣುವಿನ ನೆಲಮಟ್ಟಿಗೆ ಪೂರ್ವಮಾಡಿದ ರೂಪದ ಎರಡು ಸೂಕ್ಷ್ಮಾತೀತ ಮಟ್ಟಗಳ ನಡುವಣ ಸ್ಥಿತ್ಯಂತರಕ್ಕೆ ಸಂವಾದಿಯಾದ ವಿಕಿರಣದ 9 192 631 770 ಅವಧಿಗಳ ಕಾಲಾವಧಿಯಾಗಿರುತ್ತದೆ.

8. ವಿದ್ಯುತ್ ಪ್ರವಾಹದ ಮೂಲ ಘಟಕ.—(1) ವಿದ್ಯುತ್ ಪ್ರವಾಹದ ಮೂಲ ಘಟಕವು 'ಆಂಪಿಯರ್' ಆಗಿರತಕ್ಕದ್ದು.

(2) 'ಆಂಪಿಯರ್' ಎಂಬುದು ನಿರ್ವಾತ ಪ್ರದೇಶದಲ್ಲಿ ಒಂದು ಮೀಟರ್ ಅಂತರದಲ್ಲಿರುವಂತೆ ಇರಿಸಿದ ಗೌಣ ವ್ಯತ್ಯಾಕಾರದ ಅಡ್ಡ-ಕೊಯ್ತುವುಳ್ಳ, ಅನಂತರ ಉದ್ದದ ನೇರ ಸಮಾನಾಂತರ ವಾಹಕಗಳಲ್ಲಿ ವಿದ್ಯುತ್ತು ಪ್ರವಹಿಸುವಂತೆ ಮಾಡಿದರೆ, ಈ ವಾಹಕಗಳ ನಡುವಣ ಪ್ರತಿ ಒಂದು ಮೀಟರ್ ಉದ್ದಕ್ಕೆ 2x10–7 ನ್ಯೂಟನ್‌ಗೆ ಸಮನಾದ ಬಲವನ್ನು ಉತ್ಪಾದಿಸುವ ನಿರಂತರ ವಿದ್ಯುತ್ ಪ್ರವಾಹ.

9. ಉಷ್ಣ ಚಲನದ ಉಷ್ಣಾಂಶದ ಮೂಲ ಘಟಕ.—(1) ಉಷ್ಣ ಚಲನದ ಉಷ್ಣಾಂಶದ ಮೂಲ ಘಟಕವು 'ಕೆಲ್ವಿನ್' ಆಗಿರತಕ್ಕದ್ದು.

(2) 'ಕೆಲ್ವಿನ್' ಎಂಬುದು ನೀರಿನ ತ್ರಿಗುಣ ಬಿಂದುವಿನ ಉಷ್ಣ ಚಲನದ ಉಷ್ಣಾಂಶದ 1/273.16 ಭಿನ್ನಾಂಶವಾಗಿರುತ್ತದೆ.

(3) ಕೆಲ್ವಿನ್ ಅನ್ನು ಉಷ್ಣಾಂಶದ ಬಿಡುವನ್ನು ಅಥವಾ ಅಂತರವನ್ನು ವ್ಯಕ್ತಪಡಿಸಲೂ ಸಹ ಬಳಸತಕ್ಕದ್ದು.

(4) ಸೊನ್ನೆ ಡಿಗ್ರಿ ಸೆಲ್ಸಿಯಸ್ ಎಂಬುದು 273·15 ಕೆಲ್ವಿನ್‌ಗೆ ಸಂವಾದಿಯಾದುದು.

(5) ಡಿಗ್ರಿ ಸೆಲ್ಸಿಯಸ್ ಘಟಕವು ಕೆಲ್ವಿನ್ ಘಟಕಕ್ಕೆ ಸಮನಾದುದರಿಂದ ಸೆಲ್ಸಿಯಸ್ ಡಿಗ್ರಿಯನ್ನು ಉಷ್ಣಾಂಶದ ಬಿಡುವನ್ನು ಅಥವಾ ಅಂತರವನ್ನು ವ್ಯಕ್ತಪಡಿಸಲೂ ಸಹ ಬಳಸಬಹುದು.

10. ಪ್ರಕಾಶದ ಪ್ರಖರತೆಯ ಮೂಲ ಘಟಕ.—(1) ಪ್ರಕಾಶದ ಪ್ರಖರತೆಯ ಮೂಲ ಘಟಕವು ಕ್ಯಾಂಡಲಾ ಆಗಿರತಕ್ಕದ್ದು.

(2) 'ಕ್ಯಾಂಡಲಾ' ಎಂಬುದು ಘನೀಭವಿಸುವ ಪ್ಲಾಟಿನಂನ ಉಷ್ಣಾಂಶದಲ್ಲಿ ಚದರ ಮೀಟರ್ ಒಂದಕ್ಕೆ 101/325 ನ್ಯೂಟನ್‌ಗಳ ಒತ್ತಡದಲ್ಲಿ ಒಂದು ಕಪ್ಪು ವಸ್ತುವಿನ 1/600·000 ಚದರ ಮೀಟರ್ ಮೇಲ್ಮೈಯಿಂದ ಲಂಬ ಮುಖವಾಗಿ ಬರುವ ಪ್ರಕಾಶದ ಪ್ರಖರತೆ.

11. ವಸ್ತುವಿನ ಪ್ರಮಾಣದ ಮೂಲ ಘಟಕ.—(1) ವಸ್ತುವಿನ ಪ್ರಮಾಣದ ಮೂಲ ಘಟಕವು 'ಮೋಲ್' ಆಗಿರತಕ್ಕದ್ದು.

(2) 'ಮೋಲ್' ಎಂಬುದು 0·012 ಕಿಲೋಗ್ರಾಂ ಕಾರ್ಬನ್ 12ರಲ್ಲಿ ಎಷ್ಟು ಪರಮಾಣುಗಳಿವೆಯೋ ಅಷ್ಟೇ ಮೂಲ ವಸ್ತುಗಳನ್ನುಳ್ಳ ಸಮುದಾಯದ ವಸ್ತುಪ್ರಮಾಣ,

(3) 'ಮೋಲ್' ಎಂಬುದನ್ನು ಬಳಸಿದಾಗ ಮೂಲ ವಸ್ತುಗಳನ್ನು ತಪ್ಪದೆ ನಿರ್ದಿಷ್ಟಪಡಿಸತಕ್ಕದ್ದು ಮತ್ತು ಅವು ಪರಮಾಣುಗಳು, ಅಣುಗಳು, ಆಯಾನ್‌ಗಳು, ಎಲೆಕ್ಟ್ರಾನುಗಳು ಇತರ ಕಣಗಳು ಅಥವಾ ಅಂಥ ಕಣಗಳ ನಿರ್ದಿಷ್ಟ ಗುಂಪುಗಳು ಆಗಿರಬಹುದು.

12. ತೂಕದ ಮತ್ತು ಅಳತೆಯ ಪೂರಕ, ಸಾಧಿತ, ವಿಶೇಷ ಮತ್ತು ಇತರ ಘಟಕಗಳು—ಅವುಗಳ ಸಂಕೇತಗಳು, ಪರಿಭಾಷೆಗಳು ಇತ್ಯಾದಿ.—(1) ತೂಕದ ಅಥವಾ ಅಳತೆಯ ಮೂಲ ಘಟಕಗಳ ಸಂಬಂಧದಲ್ಲಿ ಕೇಂದ್ರ ಸರ್ಕಾರವು ಈ ಬಗ್ಗೆ ಮಾಡಿದ ನಿಯಮಗಳ ಮೂಲಕ ತೂಕಗಳ ಮತ್ತು ಅಳತೆಗಳ ಸಾಮಾನ್ಯ ಸಮ್ಮೇಳನವು ಅಥವಾ ಕಾನೂನು ಮಾಪನ ಶಾಸ್ತ್ರದ ಅಂತಾರಾಷ್ಟ್ರೀಯ ಸಂಸ್ಥೆಯು ಶಿಫಾರಸು ಮಾಡಬಹುದಾದಂಥ ಪೂರಕ ಸಾಧಿತ ಅಥವಾ ಇತರ ಘಟಕಗಳನ್ನು ಅಥವಾ ಮಾದರಿ ಸಂಕೇತಗಳನ್ನು ಅಥವಾ ಪರಿಭಾಷೆಗಳನ್ನು ನಿರ್ದಿಷ್ಟಪಡಿಸಬಹುದು.

ವಿವರಣೆ.—'ಸಾಧಿತ ಘಟಕ' ಎಂದರೆ ಮೂಲ ಅಥವಾ ಪೂರಕ ಘಟಕಗಳಿಂದ ಅಥವಾ ಅವೆರಡರಿಂದಲೂ ಸಾಧಿತವಾದ ಘಟಕ.

(2) ತೂಕದ ಮತ್ತು ಅಳತೆಗಳ ಘಟಕಗಳ ಸಂಬಂಧದಲ್ಲಿ ತೂಕಗಳ ಮತ್ತು ಅಳತೆಗಳ ಸಾಮಾನ್ಯ ಸಮ್ಮೇಳನವು ಅಥವಾ ಕಾನೂನು ಮಾಪನ ಶಾಸ್ತ್ರದ ಅಂತಾರಾಷ್ಟ್ರೀಯ ಸಂಸ್ಥೆಯು ಶಿಫಾರಸು ಮಾಡಬಹುದಾದಂಥ ಅವುಗಳ ಗುಣಕಗಳನ್ನು ಮತ್ತು ಉಪಗುಣಕಗಳನ್ನು ಮತ್ತು ಭೌತಿಕ ನಿಯತಾಂಕಗಳನ್ನು ಹಾಗೂ ಪ್ರಮಾಣಗಳನ್ನು ಅಥವಾ ಗುಣಾಂಕಗಳನ್ನು ಕೇಂದ್ರ ಸರ್ಕಾರವು ಈ ಬಗ್ಗೆ ಮಾಡಿದ ನಿಯಮಗಳ ಮೂಲಕ ನಿರ್ದಿಷ್ಟಪಡಿಸಬಹುದು,

(3) ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ ತಾನು ಅವಶ್ಯವೆಂದು ಪರ್ಯಾಲೋಚಿಸಬಹುದಾದಂಥ ಅವಧಿಯವರೆಗೆ ತೂಕದ ಮತ್ತು ಅಳತೆಯ ಸಾಮಾನ್ಯ ಸಮ್ಮೇಳನವು ಅಥವಾ ಕಾನೂನು ಮಾಪನ ಶಾಸ್ತ್ರದ ಅಂತಾರಾಷ್ಟ್ರೀಯ ಸಂಸ್ಥೆಯು ಶಿಫಾರಸು ಮಾಡಬಹುದಾದಂಥ ವಿಶೇಷ ಘಟಕಗಳನ್ನು ಘೋಷಿಸಬಹುದು.

13. ಎಣಿಕೆಯ ಮೂಲ ಘಟಕ.—(1) ಎಣಿಕೆಯ ಮೂಲ ಘಟಕವು ಭಾರತೀಯ ಅಂಕಿಗಳ ಅಂತಾರಾಷ್ಟ್ರೀಯ ರೂಪದ ಘಟಕವಾಗಿರತಕ್ಕದ್ದು.

(2) ಪ್ರತಿಯೊಂದು ಎಣಿಕೆಯನ್ನು ದಶಮಾಂಶ ಪದ್ಧತಿಗನುಸಾರವಾಗಿ ಮಾಡತಕ್ಕದ್ದು.

(3) ಸಂಖ್ಯೆಗಳ ದಶಮಾಂಶ ಗುಣಕಗಳು ಮತ್ತು ಉಪಗುಣಕಗಳು ಕೇಂದ್ರ ಸರ್ಕಾರವು ಪೂರ್ವ ಪ್ರಕಟಣೆಯ ಅನಂತರ ಈ ಬಗ್ಗೆ ಮಾಡಿದ ನಿಯಮಗಳ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ವರ್ಗಗಳಾಗಿರತಕ್ಕದ್ದು ಮತ್ತು ಅವನ್ನು ಅಂಥ ರೀತಿಯಲ್ಲಿ ಬರೆಯತಕ್ಕದ್ದು;

ಪರಂತು ಪ್ರಸ್ತಾಪಿತ ನಿಯಮಗಳ ಕರಡನ್ನು ಮೊದಲ ಬಾರಿ ಸರ್ಕಾರಿ ರಾಜಪತ್ರದಲ್ಲಿ ಪ್ರಕಟಿಸಿದ ದಿನಾಂಕದಿಂದ ಆರು ತಿಂಗಳು ಮುಗಿಯುವ ಮುಂಚೆ ಅಂಥ ಯಾವ ನಿಯಮವನ್ನೂ ಮಾಡತಕ್ಕದ್ದಲ್ಲ.

14. ತೂಕದ ಅಥವಾ ಅಳತೆಯ ಮಾನಕ ಘಟಕ.—(1) 6ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ದ್ರವ್ಯರಾಶಿಯ ಮೂಲ ಘಟಕವು ಮತ್ತು 5ನೇ ಪ್ರಕರಣದಲ್ಲಿ ಮತ್ತು 7 ರಿಂದ 11ನೇ ಪ್ರಕರಣಗಳಲ್ಲಿ (ಎರಡೂ ಸೇರಿ) ನಿರ್ದಿಷ್ಟಪಡಿಸಲಾದ ಅಳತೆಗಳ ಘಟಕಗಳು ಮತ್ತು 12 ನೆ ಪ್ರಕರಣದ ಮೇರೆಗೆ ಮಾಡಲಾದ ನಿಯಮಗಳ ಮೂಲಕ ನಿರ್ದಿಷ್ಟಪಡಿಸಲಾದ ಪೂರಕ ಮತ್ತು ಇತರ ಘಟಕಗಳು ಸಂದರ್ಭಾನುಸಾರ ತೂಕದ ಅಥವ ಅಳತೆಯ ಮಾನಕ ಘಟಕಗಳಾಗಿರತಕ್ಕದ್ದು.

(2) 13ನೇ ಪ್ರಕರಣದ ಮೂಲಕ ಅಥವಾ ಮೇರೆಗೆ ನಿರ್ದಿಷ್ಟಪಡಿಸಲಾದ ಎಣಿಕೆಯ ಘಟಕಗಳು ಎಣಿಕೆಯ ಮಾನಕ ಘಟಕಗಳಾಗಿರತಕ್ಕದ್ದು.

## ಅಧ್ಯಾಯ–II

### ಮಾನಕ ಘಟಕಗಳ ಭೌತಿಕ ರೂಪಣ

15. ರಾಷ್ಟ್ರೀಯ ಪ್ರಥಮ ಮಾದರಿಗಳು.—(1) 'ಕಿಲೋಗ್ರಾಂ'ನ ಮೌಲ್ಯವನ್ನು ನಿರ್ಧರಿಸುವ ಉದ್ದೇಶಕ್ಕಾಗಿ ಕಿಲೋಗ್ರಾಂನ ಒಂದು ರಾಷ್ಟ್ರೀಯ ಪ್ರಥಮ ಮಾದರಿಯನ್ನು ತಯಾರಿಸುವಂತೆ ಕೇಂದ್ರ ಸರ್ಕಾರವು ಮಾಡತಕ್ಕದ್ದು ಮತ್ತು ಅದು ಕಿಲೋಗ್ರಾಂನ ಅಂತಾರಾಷ್ಟ್ರೀಯ ಪ್ರಥಮ ಮಾದರಿಗೆ ಸರಿದೂಗುವಂತೆ ತೂಕಗಳ ಮತ್ತು ಅಳತೆಗಳ ಅಂತರಾಷ್ಟ್ರೀಯ ಬ್ಯೂರೋವಿನಿಂದ ಅದರ ನಿಷ್ಕೃಷ್ಟತೆಯನ್ನು ಪ್ರಮಾಣನಗೊಳಿಸತಕ್ಕದ್ದು ಮತ್ತು ಅದನ್ನು ಸರ್ಕಾರವು ಸೂಕ್ತವೆಂದು ಆಲೋಚಿಸಬಹುದಾದಂಥ ಅಭಿರಕ್ಷೆಯಲ್ಲಿ ಮತ್ತು ಸ್ಥಳದಲ್ಲಿ ಇಡತಕ್ಕದ್ದು.

(2) ಮೀಟರಿನ ಮೌಲ್ಯವನ್ನು ನಿರ್ಧರಿಸುವ ಉದ್ದೇಶಕ್ಕಾಗಿ ಮೀಟರಿನ ಒಂದು ರಾಷ್ಟ್ರೀಯ ಪ್ರಥಮ ಮಾದರಿಯನ್ನು ತಯಾರಿಸುವಂತೆ ಕೇಂದ್ರ ಸರ್ಕಾರವು ಮಾಡತಕ್ಕದ್ದು ಮತ್ತು ಅಂಥ ಪ್ರಥಮ ಮಾದರಿಯನ್ನು ತಯಾರಿಸುವಂತೆ ಮಾಡಿದಲ್ಲಿ ಅದರ ನಿಷ್ಕೃಷ್ಟತೆಯನ್ನು ತೂಕಗಳ ಮತ್ತು ಅಳತೆಗಳ ಅಂತಾರಾಷ್ಟ್ರೀಯ ಬ್ಯೂರೋವಿನಿಂದ ಪ್ರಮಾಣಿಸುವಂತೆ ಮಾಡತಕ್ಕದ್ದು ಮತ್ತು ಅದನ್ನು ಆ ಸರ್ಕಾರವು ಸೂಕ್ತವೆಂದು ಆಲೋಚಿಸಬಹುದಾದಂಥ ಅಭಿರಕ್ಷೆಯಲ್ಲಿ ಮತ್ತು ಸ್ಥಳದಲ್ಲಿ ಇಡತಕ್ಕದ್ದು.

16. ರಾಷ್ಟ್ರೀಯ ಮಾನಕಗಳು.—(1) ದ್ರವ್ಯರಾಶಿಯ ಮೂಲ ಘಟಕವಲ್ಲದ ಇತರ ಮೂಲ ಘಟಕಗಳ ಮೌಲ್ಯವನ್ನು ನಿರ್ಧರಿಸುವ ಉದ್ದೇಶಕ್ಕಾಗಿ ಆ ಉದ್ದೇಶಕ್ಕೋಸ್ಕರ ಅವಶ್ಯಕವಾಗಬಹುದಾದಂಥ ವಸ್ತುಗಳನ್ನು ಅಥವಾ ಸಲಕರಣೆಗಳನ್ನು ಅಥವಾ ಅವೆರಡನ್ನೂ ತಯಾರಿಸುವಂತೆ ಕೇಂದ್ರ ಸರ್ಕಾರವು ಮಾಡತಕ್ಕದ್ದು ಮತ್ತು ಅಂಥ ವಸ್ತುಗಳ ಅಥವಾ ಸಲಕರಣೆಗಳ ಅಥವಾ ಅವೆರಡರ ನಿಷ್ಕೃಷ್ಟತೆಯನ್ನು ನಿಯಮಿಸಬಹುದಾದಂಥ ನಿಯತಕಾಲಿಕ ಅಂತರಗಳಲ್ಲಿ ತೂಕಗಳ ಮತ್ತು ಅಳತೆಗಳ ಅಂತಾರಾಷ್ಟ್ರೀಯ ಬ್ಯೂರೋವಿನಿಂದ ಪ್ರಮಾಣಿಸುವಂತೆ ಮಾಡತಕ್ಕದ್ದು ಮತ್ತು ಹಾಗೆ ಪ್ರಮಾಣಿತವಾದ ಅನಂತರ ಅಂಥ ವಸ್ತುಗಳನ್ನು ಅಥವಾ ಸಲಕರಣೆಗಳನ್ನು ಅಥವಾ ಅವೆರಡನ್ನು ಆ ಸರ್ಕಾರವು ಸೂಕ್ತವೆಂದು ಆಲೋಚಿಸಬಹುದಾದಂಥ ಅಭಿರಕ್ಷೆಯಲ್ಲಿ ಮತ್ತು ಸ್ಥಳದಲ್ಲಿ ಇಡತಕ್ಕದ್ದು.

(2) 12ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ಪೂರಕ ಮತ್ತು ಇತರ ಘಟಕಗಳ ಮೌಲ್ಯವನ್ನು ನಿರ್ಧರಿಸುವ ಉದ್ದೇಶಕ್ಕಾಗಿ ಆ ಉದ್ದೇಶಕ್ಕೋಸ್ಕರ ಅವಶ್ಯವಾಗಬಹುದಾದಂಥ ವಸ್ತುಗಳನ್ನು ಅಥವಾ ಸಲಕರಣೆಗಳನ್ನು ಅಥವಾ ಅವೆರಡನ್ನೂ ತಯಾರಿಸುವಂತೆ ಕೇಂದ್ರ ಸರ್ಕಾರವು ಮಾಡತಕ್ಕದ್ದು ಮತ್ತು ಅಂಥ ವಸ್ತುಗಳ ಅಥವಾ ಸಲಕರಣೆಗಳ ಅಥವಾ ಅವೆರಡರ ನಿಷ್ಕೃಷ್ಟತೆಯನ್ನು ನಿಯಮಿಸಬಹುದಾದಂಥ ನಿಯತ ಕಾಲಿಕ ಅಂತರಗಳಲ್ಲಿ ಮತ್ತು ನಿಯಮಿಸಬಹುದಾದಂಥ ಪ್ರಾಧಿಕಾರವು ಪ್ರಮಾಣಿಸುವಂತೆ ಮಾಡತಕ್ಕದ್ದು ಮತ್ತು ಹಾಗೆ ಪ್ರಮಾಣಿತವಾದ ಅನಂತರ ಅಂಥ ವಸ್ತುಗಳನ್ನು ಅಥವಾ ಸಲಕರಣೆಗಳನ್ನು ಅಥವಾ ಅವೆರಡನ್ನೂ ಆ ಸರ್ಕಾರವು ಸೂಕ್ತವೆಂದು ಆಲೋಚಿಸಬಹುದಾದಂಥ ಅಭಿರಕ್ಷೆಯಲ್ಲಿ ಮತ್ತು ಸ್ಥಳದಲ್ಲಿ ಇಡತಕ್ಕದ್ದು.

17. ರಾಷ್ಟ್ರೀಯ ಪ್ರಥಮ ಮಾದರಿಯನ್ನು ಮತ್ತು ರಾಷ್ಟ್ರೀಯ ಮಾನಕವನ್ನು ಹೇಗೆ ಇಡಬೇಕು.— 15ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ಪ್ರತಿಯೊಂದು ರಾಷ್ಟ್ರೀಯ ಪ್ರಥಮ ಮಾದರಿಯನ್ನು ಮತ್ತು 16ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ಪ್ರತಿಯೊಂದು ವಸ್ತುವನ್ನು ಅಥವಾ ಸಲಕರಣೆಯನ್ನು ಅಥವಾ ಅವೆರಡನ್ನೂ ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಸ್ಥಿತಿಯಲ್ಲಿ ಇಡತಕ್ಕದ್ದು.

18. ಮೂಲ, ಎರಡನೆಯ ಮತ್ತು ಬಳಕೆಯ ಮಾನಕಗಳು.—(1) ಪ್ರತಿಯೊಂದು—

(ಕ) ಮೂಲ ಮಾನಕವು,

(ಖ) ಎರಡನೆಯ ಮಾನಕವು, ಮತ್ತು

(ಗ) ಬಳಕೆಯ ಮಾನಕವು,

ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ನಿಗದಿಪಡಿಸಲಾದ ಮಾನಕಗಳಿಗೆ ಅನುಗುಣವಾಗಿರತಕ್ಕದ್ದು ಮತ್ತು ನಿಯಮಿಸಬಹುದಾದಂಥ ನಿಯತ ಕಾಲಿಕ ಅಂತರಗಳಲ್ಲಿ ಮತ್ತು ರೀತಿಗಳಲ್ಲಿ ಸತ್ಯಾಪಿತವಾಗತಕ್ಕದ್ದು ಮತ್ತು ಅಧಿಪ್ರಮಾಣಿತವಾಗತಕ್ಕದ್ದು.

(2) ಪ್ರತಿಯೊಂದು ಮೂಲ ಮಾನಕವನ್ನು, ಪ್ರತಿಯೊಂದು ಎರಡನೆಯ ಮಾನಕವನ್ನು ಮತ್ತು ಪ್ರತಿಯೊಂದು ಬಳಕೆಯ ಮಾನಕವನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಸ್ಥಿತಿಯಲ್ಲಿ ಇಡತಕ್ಕದ್ದು.

19. ತೂಕಗಳ ಮತ್ತು ಅಳತೆಗಳ ಭೌತಿಕ ಲಕ್ಷಣಗಳು, ಇತ್ಯಾದಿಗಳನ್ನು ನಿಯಮಿಸಲು ಕೇಂದ್ರ ಸರ್ಕಾರಕ್ಕಿರುವ ಅಧಿಕಾರ.—(1) ಯಾವುದೇ ತೂಕದ ಅಥವಾ ಅಳತೆಯ ಸಂಬಂಧದಲ್ಲಿ ಕಾನೂನು ಮಾಪನ ಶಾಸ್ತ್ರದ ಅಂತಾರಾಷ್ಟ್ರೀಯ ಸಂಸ್ಥೆಯ ಶಿಫಾರಸುಗಳಿಗನುಸಾರವಾಗಿ ಅದರ ಭೌತಿಕ ಲಕ್ಷಣಗಳನ್ನು, ವಿನ್ಯಾಸವನ್ನು, ನಿರ್ಮಾಣ ವಿವರಗಳನ್ನು, ವಸ್ತುಗಳನ್ನು, ಸಲಕರಣೆಯನ್ನು, ನಿರ್ವಹಣೆಯನ್ನು, ತಾಳಿಕೆಯನ್ನು, ಪರೀಕ್ಷಣಾ ವಿಧಾನಗಳನ್ನು, ಅಥವಾ ಪ್ರಕ್ರಿಯೆಗಳನ್ನು ಕೇಂದ್ರ ಸರ್ಕಾರವು ನಿಯಮಿಸತಕ್ಕದ್ದು.

ಪರಂತು ಅಂಥ ಯಾವ ಶಿಫಾರಸನ್ನೂ ಮಾಡದಿರುವಲ್ಲಿ ಯಾವುದೇ ತೂಕದ ಅಥವಾ ಅಳತೆಯ ಸಂಬಂಧದಲ್ಲಿ ತಾನು ಸೂಕ್ತವೆಂದು ಆಲೋಚಿಸಬಹುದಾದಂಥ ಭೌತಿಕ ಲಕ್ಷಣಗಳನ್ನು, ವಿನ್ಯಾಸವನ್ನು, ನಿರ್ಮಾಣ ವಿವರಗಳನ್ನು, ವಸ್ತುಗಳನ್ನು, ಸಲಕರಣೆಯನ್ನು, ನಿರ್ವಹಣೆಯನ್ನು, ತಾಳಿಕೆಯನ್ನು, ಪರೀಕ್ಷಣಾ ವಿಧಾನಗಳನ್ನು ಅಥವಾ ಪ್ರಕ್ರಿಯೆಗಳನ್ನು ಕೇಂದ್ರ ಸರ್ಕಾರವು ನಿಯಮಿಸತಕ್ಕದ್ದು.

(2) ಕಾನೂನು ಮಾಪನ ಶಾಸ್ತ್ರದ ಅಂತಾರಾಷ್ಟ್ರೀಯ ಸಂಸ್ಥೆಯ ಯಾವುದೇ ಶಿಫಾರಸನ್ನು ಜಾರಿಗೆ ತರುವುದು ಸಕಾರಣವಾಗಿ ಕಾರ್ಯಸಾಧ್ಯವಾಗದಿರುವಲ್ಲಿ ಕಾನೂನು ಮಾಪನ ಶಾಸ್ತ್ರದ ಅಂತಾರಾಷ್ಟ್ರೀಯ ಸಂಸ್ಥೆಯ ಶಿಫಾರಸುಗಳಲ್ಲಿ ತನಗೆ ಅವಶ್ಯವೆಂದು ತೋರಬಹುದಾದಂಥ ಚಿಕ್ಕಪುಟ್ಟ ಬದಲಾವಣೆಗಳನ್ನು ಕೇಂದ್ರ ಸರ್ಕಾರವು ಮಾಡಬಹುದು.

## ಅಧ್ಯಾಯ–III

### ಮಾನಕ ತೂಕಗಳು ಮತ್ತು ಅಳತೆಗಳು

20. ಮಾನಕ ತೂಕ ಅಥವಾ ಅಳತೆ.—(1) ಅಂಥ ತೂಕದ ಅಥವಾ ಅಳತೆಯ ಮಾನಕ ಘಟಕಕ್ಕೆ ಅನುಗುಣವಾಗಿರುವ ಮತ್ತು 15 ರಿಂದ 19ರ ವರೆಗಿನ (ಎರಡೂ ಸೇರಿ) ಪ್ರಕರಣಗಳ ಉಪಬಂಧಗಳಲ್ಲಿ ತನಗೆ ಅನ್ವಯವಾಗುವಂಥ ಉಪಬಂಧಗಳಿಗೆ ಸಹ ಅನುಗುಣವಾಗಿರುವ ಯಾವುದೇ ತೂಕವು ಅಥವಾ ಅಳತೆಯು ಮಾನಕ ತೂಕ ಅಥವಾ ಅಳತೆ ಆಗತಕ್ಕದ್ದು.

(2) 13ನೇ ಪ್ರಕರಣದ ಉಪಬಂಧಗಳಿಗೆ ಅನುಗುಣವಾಗಿರುವ ಯಾವುದೇ ಸಂಖ್ಯೆಯು ಮಾನಕ ಸಂಖ್ಯೆಯಾಗಿರತಕ್ಕದ್ದು.

21. ಮಾನಕವಲ್ಲದ ತೂಕ ಅಥವಾ ಅಳತೆಯ ಬಳಕೆಯು ನಿಷೇಧಿತವಾಗಿದೆ.—ಮಾನಕ ತೂಕ, ಅಳತೆ ಅಥವಾ ಸಂಖ್ಯೆಯಲ್ಲದ ಇತರ ಯಾವುದೇ ತೂಕವನ್ನು, ಅಳತೆಯನ್ನು ಅಥವಾ ಸಂಖ್ಯೆಯನ್ನು ಮಾನಕ ತೂಕವಾಗಿ, ಅಳತೆಯಾಗಿ ಅಥವಾ ಸಂಖ್ಯೆಯಾಗಿ ಬಳಸತಕ್ಕದ್ದಲ್ಲ.

22. ಮಾನಕವಲ್ಲದ ತೂಕದ ಅಥವಾ ಅಳತೆಯ ತಯಾರಿಕೆಯು ನಿಷೇಧಿತವಾಗಿದೆ.—ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ನಿಗದಿಪಡಿಸಲಾದ ತೂಕದ ಅಥವಾ ಅಳತೆಯ ಮಾನಕಗಳಿಗೆ ಅನುಗುಣವಾಗಿರುವ ಹೊರತು ಯಾವುದೇ ತೂಕವನ್ನೂ ಅಥವಾ ಅಳತೆಯನ್ನೂ ಮಾಡತಕ್ಕದ್ದಲ್ಲ ಅಥವಾ ತಯಾರಿಸತಕ್ಕದ್ದಲ್ಲ:

ಪರಂತು ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ನಿಗದಿಪಡಿಸಲಾದ ಮಾನಕಗಳಿಗೆ ಅನುಗುಣವಾಗಿರದ ಯಾವುದೇ ತೂಕವನ್ನು ಅಥವಾ ಅಳತೆಯನ್ನು ಯಾವುದೇ ವೈಜ್ಞಾನಿಕ ಪರಿಶೋಧನೆಯ ಅಥವಾ ಸಂಶೋಧನೆಯ ಉದ್ದೇಶಕ್ಕಾಗಿ ಅಥವಾ ರಫ್ತಿಗಾಗಿ ಮಾತ್ರವೇ ಮಾಡಿದ್ದರೆ ಅಥವಾ ತಯಾರಿಸಿದ್ದರೆ ಮತ್ತು ನಿಯಮಿಸಬಹುದಾದಂಥ ಷರತ್ತುಗಳ ಅಥವಾ ನಿರ್ಬಂಧಗಳ ಮೇರೆಗೆ ಮಾಡಿದ್ದರೆ ಅಥವಾ ತಯಾರಿಸಿದ್ದರೆ ಅಂಥ ತೂಕವನ್ನು ಅಥವಾ ಅಳತೆಯನ್ನು ಮಾಡಲು ಅಥವಾ ತಯಾರಿಸಲು ಕೇಂದ್ರ ಸರ್ಕಾರವು ಅನುಮತಿಯನ್ನು ಕೊಡಬಹುದು.

23. ಬರಹಗಳು, ಇತ್ಯಾದಿಗಳ ಬಗ್ಗೆ ನಿಷೇಧ.—ಯಾವುದೇ ತೂಕದ ಅಳತೆಯ ಅಥವಾ ಇತರ ಸರಕುಗಳ ಮೇಲೆ ತೂಕದ, ಅಳತೆಯ ಅಥವಾ ಸಂಖ್ಯೆಯ ಯಾವುದೇ ಬರಹವು ಅಥವಾ ಸೂಚನೆಯು ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ನಿಗದಿಪಡಿಸಲಾದ ತೂಕದ ಅಳತೆಯ ಅಥವಾ ಎಣಿಕೆಯ ಮಾನಕ ಘಟಕಕ್ಕೆ ಅನುಸಾರವಾಗಿ ಹೊರತು ಇರತಕ್ಕದ್ದಲ್ಲ;

ಪರಂತು ವೈಜ್ಞಾನಿಕ ಪರಿಶೋಧನೆಗಾಗಿ ಅಥವಾ ಸಂಶೋಧನೆಗಾಗಿ ಅಥವಾ ರಫ್ತಿಗಾಗಿ ತಯಾರಿಸಲಾದ ಯಾವುದೇ ತೂಕದ, ಅಳತೆಯ ಅಥವಾ ಇತರ ಸರಕುಗಳ ಸಂಬಂಧದಲ್ಲಿ ಇತರ ಯಾವುದೇ ತೂಕದ ಅಳತೆಯ ಅಥವಾ ಎಣಿಕೆಯ ಪದ್ಧತಿಗನುಸಾರವಾಗಿ ಯಾವುದೇ ತೂಕದ ಅಳತೆಯ ಅಥವಾ ಎಣಿಕೆಯ ಪದ್ಧತಿಗನುಸಾರವಾಗಿ ಯಾವುದೇ ತೂಕದ, ಅಳತೆಯ ಅಥವಾ ಸಂಖ್ಯೆಯ ಬರಹವನ್ನು ಅಥವಾ ಸೂಚನೆಯನ್ನು ಸಹ ಆ ವೈಜ್ಞಾನಿಕ ಪರಿಶೋಧನೆಯನ್ನು ಅಥವಾ ಸಂಶೋಧನೆಯನ್ನು ನಡೆಸಬೇಕಾಗಿರುವ ವ್ಯಕ್ತಿಯು ಅಥವಾ ಯಾರಿಗೆ ರಫ್ತು ಮಾಡಬೇಕಾಗಿದೆಯೋ ಆ ವ್ಯಕ್ತಿಯು ಆ ಬರಹವು ಅಥವಾ ಸೂಚನೆಯು ಬೇಕೆಂದು ಕೇಳಿದರೆ ಅವುಗಳ ಮೇಲೆ ಮಾಡಬಹುದು.

## ಅಧ್ಯಾಯ–IV

### ಮಾನಕ ಸಲಕರಣೆಗಳ ಅಭಿರಕ್ಷೆ ಮತ್ತು ಅವುಗಳ ಸತ್ಯಾಪನೆ

24. ಮೂಲ ಮಾನಕಗಳ ಸರಬರಾಜು, ಇತ್ಯಾದಿ.—(1) ಈ ಅಧಿನಿಯಮದ ಉದ್ದೇಶಗಳಿಗಾಗಿ ತಾನು ಅವಶ್ಯವೆಂದು ಆಲೋಚಿಸಬಹುದಾದಷ್ಟು ಮೂಲ ಮಾನಕಗಳ ಸೆಟ್ಟುಗಳನ್ನು ತಯಾರಿಸುವಂತೆ ಕೇಂದ್ರ ಸರ್ಕಾರವು ಮಾಡತಕ್ಕದ್ದು ಮತ್ತು ತಾನು ಸೂಕ್ತವೆಂದು ಆಲೋಚಿಸಬಹುದಾದಷ್ಟು ಮೂಲ ಮಾನಕಗಳ ಸೆಟ್ಟುಗಳನ್ನು ಪ್ರತಿಯೊಂದು ರಾಜ್ಯ ಸರ್ಕಾರಕ್ಕೂ ಸರಬರಾಜು ಮಾಡತಕ್ಕದ್ದು.

(2) ಈ ಅಧಿನಿಯಮದ ಉದ್ದೇಶಗಳಿಗಾಗಿ ಅವಶ್ಯವಾಗಬಹುದಾದಷ್ಟು ಸಂಖ್ಯೆಯ ಮೂಲ ಮಾನಕಗಳನ್ನು ಕೇಂದ್ರ ಸರ್ಕಾರವು ತನ್ನ ಅಭಿರಕ್ಷೆಯಲ್ಲಿಟ್ಟುಕೊಳ್ಳತಕ್ಕದ್ದು.

(3) (2)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಪ್ರತಿಯೊಂದು ಮೂಲ ಮಾನಕವನ್ನು ನಿಯಮಿಸಬಹುದಾದಂಥ ಸ್ಥಳದಲ್ಲಿ ಮತ್ತು ಅಭಿರಕ್ಷೆಯಲ್ಲಿ ಇಡತಕ್ಕದ್ದು ಮತ್ತು ಈ ಅಧಿನಿಯಮದ ಮೇರೆಗೆ ಮಾಡಲಾದ ನಿಯಮಗಳಿಗೆ ಅನುಸಾರವಾಗಿ ಅದನ್ನು ಸತ್ಯಾಪನೆ ಮಾಡಿದಲ್ಲದೆ ಮತ್ತು ಅಧಿಪ್ರಮಾಣಿಸಿದಲ್ಲದೆ ಅಂಥ ಯಾವುದೇ ಮೂಲ ಮಾನಕವನ್ನು ಮೂಲ ಮಾನಕವೆಂದು ಭಾವಿಸತಕ್ಕದ್ದಲ್ಲ ಮತ್ತು ಬಳಸತಕ್ಕದ್ದಲ್ಲ.

25. ಎರಡನೆಯ ಅಥವಾ ಬಳಕೆಯ ಮಾನಕಗಳ ತಯಾರಿಕೆ ಮತ್ತು ಅಭಿರಕ್ಷೆ.—ಈ ಅಧಿನಿಯಮದ ಉದ್ದೇಶಗಳಿಗಾಗಿ ತಾನು ಅವಶ್ಯವೆಂದು ಆಲೋಚಿಸಬಹುದಾದಷ್ಟು ಎರಡನೆಯ ಮಾನಕದ ಅಥವಾ ಬಳಕೆಯ ಮಾನಕದ ಸೆಟ್ಟುಗಳನ್ನು ತಯಾರಿಸುವಂತೆ ಕೇಂದ್ರ ಸರ್ಕಾರವು ಮಾಡತಕ್ಕದ್ದು ಮತ್ತು ಅಂಥ ಎರಡನೆಯ ಮಾನಕಗಳ ಅಥವಾ ಬಳಕೆಯ ಮಾನಕಗಳ ಸೆಟ್ಟುಗಳನ್ನು ನಿಯಮಿಸಬಹುದಾದಂಥ ಸ್ಥಳದಲ್ಲಿ ಮತ್ತು ಅಭಿರಕ್ಷೆಯಲ್ಲಿ ಇಡತಕ್ಕದ್ದು.

26. ಎರಡನೆಯ ಅಥವಾ ಬಳಕೆಯ ಮಾನಕಗಳನ್ನು ಸತ್ಯಾಪನೆ ಮಾಡುವುದು, ಮುದ್ರೆಯೊತ್ತುವುದು, ಇತ್ಯಾದಿ.—(1) 25ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ಪ್ರತಿಯೊಂದು ಎರಡನೆಯ ಮಾನಕವನ್ನು ನಿಯಮಿಸಬಹುದಾದಂಥ ಪ್ರಾಧಿಕಾರವು ಮೂಲ ಮಾನಕದೊಡನೆ ಸತ್ಯಾಪನೆ ಮಾಡತಕ್ಕದ್ದು ಮತ್ತು ಹಾಗೆ ಸತ್ಯಾಪನೆ ಮಾಡಿದ ಮೇಲೆ ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ನಿಗದಿಪಡಿಸಲಾದ ಮಾನಕಗಳಿಗೆ ಅನುಗುಣವಾಗಿದೆ ಎಂದು ಕಂಡುಬಂದರೆ ಆ ಪ್ರಾಧಿಕಾರವು ಅದಕ್ಕೆ ಮುದ್ರೆಯನ್ನು ಒತ್ತತಕ್ಕದ್ದು.

(2) 25ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ಪ್ರತಿಯೊಂದು ಬಳಕೆಯ ಮಾನಕವನ್ನು (1)ನೇ ಉಪಪ್ರಕರಣದ ಉಪಬಂಧಗಳಿಗನುಸಾರವಾಗಿ ಮುದ್ರೆ ಒತ್ತಲಾದ ಎರಡನೆಯ ಮಾನಕದೊಂದಿಗೆ ನಿಯಮಿಸಬಹುದಾದಂಥ ಪ್ರಾಧಿಕಾರವು ಸತ್ಯಾಪನೆ ಮಾಡತಕ್ಕದ್ದು ಮತ್ತು ಹಾಗೆ ಸತ್ಯಾಪಿತವಾದ ಮೇಲೆ ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ನಿಗದಿಪಡಿಸಲಾದ ಮಾನಕಗಳಿಗೆ ಅನುಗುಣವಾಗಿದೆ ಎಂದು ಕಂಡುಬಂದರೆ ಆ ಪ್ರಾಧಿಕಾರವು ಅದಕ್ಕೆ ಮುದ್ರೆಯನ್ನು ಒತ್ತತಕ್ಕದ್ದು.

(3) ಸಂದರ್ಭಾನುಸಾರ (1)ನೇ ಉಪಪ್ರಕರಣದ ಅಥವಾ (2)ನೇ ಉಪಪ್ರಕರಣದ ಉಪಬಂಧಗಳಿಗೆ ಅನುಸಾರವಾಗಿ ಯಾವುದೇ ಎರಡನೆಯ ಮಾನಕಕ್ಕೆ ಅಥವಾ ಬಳಕೆಯ ಮಾನಕಕ್ಕೆ ಮುದ್ರೆಯನ್ನು ಒತ್ತಲಾಗಿದ್ದಲ್ಲಿ, ಆ ತೂಕ ಅಥವಾ ಅಳತೆಗೆ ಯಾವ ದಿನಾಂಕದಂದು ಮುದ್ರೆ ಒತ್ತಲಾಯಿತೆಂಬುದನ್ನು ತೋರಿಸುವ ಪ್ರಮಾಣ ಪತ್ರವನ್ನು ಪ್ರತ್ಯೇಕವಾಗಿ ಕೊಡತಕ್ಕದ್ದು.

(4) ಸಂದರ್ಭಾನುಸಾರ (1)ನೇ ಉಪಪ್ರಕರಣದ ಅಥವಾ (2)ನೇ ಉಪಪ್ರಕರಣದ ಉಪಬಂಧಗಳಿಗೆ ಅನುಸಾರವಾಗಿ ಸತ್ಯಾಪನೆ ಮಾಡಿರದ ಮತ್ತು ಮುದ್ರೆ ಒತ್ತಿರದ ಪ್ರತಿಯೊಂದು ಎರಡನೆಯ ಮಾನಕವನ್ನು ಅಥವಾ ಬಳಕೆಯ ಮಾನಕವನ್ನು ಎರಡನೆಯ ಮಾನಕವೆಂದು ಅಥವಾ ಬಳಕೆಯ ಮಾನಕವೆಂದು ಭಾವಿಸತಕ್ಕದ್ದಲ್ಲ ಮತ್ತು ಹಾಗೆಂದು ಬಳಸತಕ್ಕದ್ದಲ್ಲ.

27. ಮುದ್ರೆ ಒತ್ತಬಹುದಾದ ಎರಡನೆಯ ಅಥವಾ ಬಳಕೆಯ ಮಾನಕ.—25ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ಯಾವುದೇ ಎರಡನೆಯ ಮಾನಕದ ಅಥವಾ ಬಳಕೆಯ ಮಾನಕದ ಗಾತ್ರದ ಅಥವಾ ಸ್ವರೂಪದ ಕಾರಣದಿಂದಾಗಿ ಅದರ ಮೇಲೆ ಮುದ್ರೆ ಒತ್ತುವುದು ಅಪೇಕ್ಷಣೀಯವಲ್ಲವೆಂದು ಅಥವಾ ಕಾರ್ಯಸಾಧ್ಯವಲ್ಲವೆಂದು ಕೇಂದ್ರ ಸರ್ಕಾರವು ಅಭಿಪ್ರಾಯಪಟ್ಟಲ್ಲಿ, ಎರಡನೆಯ ಮಾನಕದ ಅಥವಾ ಬಳಕೆಯ ಮಾನಕದ ಮೇಲೆ ಮುದ್ರೆ ಒತ್ತುವ ಬದಲು ಆ ಎರಡನೆಯ ಮಾನಕವು ಅಥವಾ ಬಳಕೆಯ ಮಾನಕವು ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ನಿಗದಿಪಡಿಸಲಾದ ಮಾನಕಗಳಿಗೆ ಅನುಗುಣವಾಗಿದೆ ಎಂಬ ಬಗ್ಗೆ ಒಂದು ಪ್ರಮಾಣಪತ್ರವನ್ನು ಹೊರಡಿಸಬಹುದೆಂದು ಅದು ನಿರ್ದೇಶಿಸಬಹುದು ಮತ್ತು ಹಾಗೆ ಪ್ರಮಾಣೀಕರಿಸಲಾದ ಪ್ರತಿಯೊಂದು ಎರಡನೆಯ ಮಾನಕದ ಅಥವಾ ಬಳಕೆಯ ಮಾನಕದ ಮೇಲೆ ಅಂಥ ಪ್ರಮಾಣ ಪತ್ರವನ್ನು ಹೊರಡಿಸಲಾದ ದಿನಾಂಕದಂದು ಈ ಅಧಿನಿಯಮದ ಮೇರೆಗೆ ಕ್ರಮಬದ್ಧವಾಗಿ ಮುದ್ರೆ ಒತ್ತಲಾಗಿದೆ ಎಂದು ಭಾವಿಸತಕ್ಕದ್ದು.

## ಭಾಗ–III

### ನಿರ್ದೇಶಕನ ಮತ್ತು ಇತರ ಸಿಬ್ಬಂದಿಯ ನೇಮಕಾತಿ ಮತ್ತು ಅಧಿಕಾರಗಳು

28. ನಿರ್ದೇಶಕನ ಮತ್ತು ಇತರ ಸಿಬ್ಬಂದಿಯ ನೇಮಕಾತಿ.—(1) ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಪ್ರದತ್ತವಾದ ಅಥವಾ ಹೊರಿಸಲಾದ ಅಧಿಕಾರಗಳನ್ನು ಚಲಾಯಿಸಲು ಮತ್ತು ಕರ್ತವ್ಯಗಳನ್ನು ದಕ್ಷತೆಯಿಂದ ನಿರ್ವಹಿಸಲು ಕಾನೂನು ಮಾಪನ ಶಾಸ್ತ್ರದ ಒಬ್ಬ ನಿರ್ದೇಶಕನನ್ನು ಮತ್ತು ಅವಶ್ಯಕವಾಗಬಹುದಾದಷ್ಟು ಜನ ಅಡಿಷನಲ್ ಜಂಟಿ ಸಹಾಯಕ ನಿರ್ದೇಶಕರುಗಳನ್ನು ಮತ್ತು ಇತರ ಅಧಿಕಾರಿಗಳನ್ನು ಹಾಗೂ ಸಿಬ್ಬಂದಿಯನ್ನು ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ ನೇಮಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ನೇಮಿಸಲಾದ ಪ್ರತಿಯೊಬ್ಬ ಅಡಿಷನಲ್ ಜಂಟಿ ಉಪ ಅಥವಾ ಸಹಾಯಕ ನಿರ್ದೇಶಕನು ಮತ್ತು ಇತರ ಅಧಿಕಾರಿಯು ಕೇಂದ್ರ ಸರ್ಕಾರವು ಈ ಬಗ್ಗೆ ಅಧಿಸೂಚನೆಯ ಮೂಲಕ ಅಧಿಕೃತಗೊಳಿಸಬಹುದಾದಂಥ ನಿರ್ದೇಶಕರ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು.

(3) (1)ನೇ ಉಪಪ್ರಕರಣದ ಮೇರೆಗೆ ನೇಮಿತನಾದ ಪ್ರತಿಯೊಬ್ಬ ಅಡಿಷನಲ್ ಜಂಟಿ ಉಪ ಅಥವಾ ಸಹಾಯಕ ನಿರ್ದೇಶಕನು ಅಥವಾ ಇತರ ಅಧಿಕಾರಿಯು ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಅವನಿಗೆ ಪ್ರದತ್ತವಾದ ಅಧಿಕಾರಗಳನ್ನು ಅಥವಾ ಹೊರಿಸಲಾದ ಕರ್ತವ್ಯಗಳನ್ನು ಯಾವ ಸ್ಥಳೀಯ ಪರಿಮಿತಿಗಳೊಳಗೆ ಚಲಾಯಿಸತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು ಎಂಬುದನ್ನು ನಿರ್ದೇಶಕನು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ನಿರ್ದಿಷ್ಟಪಡಿಸಬಹುದು.

(4) ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು (1)ನೇ ಉಪಪ್ರಕರಣದ ಮೇರೆಗೆ ನೇಮಿತನಾದ ಪ್ರತಿಯೊಬ್ಬ ಅಡಿಷನಲ್ ಜಂಟಿ ಉಪ ಅಥವಾ ಸಹಾಯಕ ನಿರ್ದೇಶಕನು ಮತ್ತು ಇತರ ಅಧಿಕಾರಿಯು ನಿರ್ದೇಶಕನ ಸಾಮಾನ್ಯ ಮೇಲ್ವಿಚಾರಣೆಯಲ್ಲಿ, ನಿರ್ದೇಶನದಲ್ಲಿ ಮತ್ತು ನಿಯಂತ್ರಣದಲ್ಲಿ ತನ್ನ ಪದದ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು ಮತ್ತು ಆ ಅಧಿಕಾರಗಳನ್ನು ಹಾಗೂ ಆ ಕರ್ತವ್ಯಗಳನ್ನು ಅಧಿಕೃತಗೊಳಿಸುವ ಮೂಲಕವಲ್ಲದೆ ನೇರವಾಗಿ ಈ ಅಧಿನಿಯಮದ ಮೂಲಕ ಅವುಗಳನ್ನು ಅವರಿಗೆ ಪ್ರಧಾನ ಮಾಡಿದ್ದಿದ್ದರೆ ಅಥವಾ ಹೊರಿಸಿದ್ದಿದ್ದರೆ ಹೇಗೋ ಹಾಗೆ ಅದೇ ರೀತಿಯಲ್ಲಿ ಮತ್ತು ಅಷ್ಟೇ ಪರಿಣಾಮಕಾರಿಯಾಗಿ ಚಲಾಯಿಸತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು.

(5) ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಯಾವುದೇ ಕರ್ತವ್ಯವನ್ನು ನೆರವೇರಿಸಲು ಅಧಿಕೃತಗೊಳಿಸಲಾದ ನಿರ್ದೇಶಕನನ್ನು ಮತ್ತು ಪ್ರತಿಯೊಬ್ಬ ಅಡಿಷನಲ್ ಜಂಟಿ, ಉಪ ಮತ್ತು ಸಹಾಯಕ ನಿರ್ದೇಶಕನನ್ನು ಹಾಗೂ ಇತರ ಅಧಿಕಾರಿಯನ್ನು ಭಾರತ ದಂಡ ಸಂಹಿತೆಯ (1860ರ 45) 21ನೇ ಪ್ರಕರಣದ ಅರ್ಥದಲ್ಲಿ ಲೋಕ ನೌಕರನೆಂದು ಭಾವಿಸತಕ್ಕದ್ದು.

(6) ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಮಾಡಿದ ಯಾವುದೇ ನಿಯಮದ ಅಥವಾ ಆದೇಶದ ಮೇರೆಗೆ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಬೇಕೆಂದು ಉದ್ದೇಶಿಸಿದ ಯಾವುದೇ ಕಾರ್ಯದ ಸಂಬಂಧದಲ್ಲಿ ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಯಾವುದೇ ಕರ್ತವ್ಯವನ್ನು ನೆರವೇರಿಸಲು ಅಧಿಕೃತಗೊಳಿಸಲಾದ ಯಾವನೇ ನಿರ್ದೇಶಕನ ಅಡಿಷನಲ್, ಜಂಟಿ, ಉಪ, ಅಥವಾ ಸಹಾಯಕ ನಿರ್ದೇಶಕನ ಅಥವಾ ಇತರ ಅಧಿಕಾರಿಯ ವಿರುದ್ಧ ಯಾವುದೇ ದಾವೆಯನ್ನು ಪ್ರಾಸಿಕ್ಯೂಷನನ್ನು ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡಲು ಅವಕಾಶವಿರತಕ್ಕದ್ದಲ್ಲ.

(7) ಕೇಂದ್ರ ಸರ್ಕಾರವು ರಾಜ್ಯ ಸರ್ಕಾರದ ಸಮ್ಮತಿಯೊಂದಿಗೆ ಮತ್ತು ಅದು ಈ ಬಗ್ಗೆ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳಿಗೆ, ಮಿತಿಗಳಿಗೆ ಮತ್ತು ನಿರ್ಬಂಧಗಳಿಗೆ ಒಳಪಟ್ಟು ತಾನು ಸೂಕ್ತವೆಂದು ಆಲೋಚಿಸಬಹುದಾದಂಥ ಈ ಅಧಿನಿಯಮದ ಮೇರೆಗಿನ ನಿರ್ದೇಶಕನ ಅಧಿಕಾರಗಳನ್ನು ಆ ರಾಜ್ಯದಲ್ಲಿ ಕಾನೂನು ಮಾಪನ ಶಾಸ್ತ್ರದ ನಿಯಂತ್ರಕನ ಪದವನ್ನು ತತ್ಕಾಲದಲ್ಲಿ ಹೊಂದಿರುವ ವ್ಯಕ್ತಿಗೆ ಪ್ರತ್ಯಾಯೋಜಿಸಬಹುದು ಮತ್ತು ಹಾಗೆ ಮಾಡುವುದು ಸಾರ್ವಜನಿಕ ಹಿತದೃಷ್ಟಿಯಿಂದ ಅವಶ್ಯವೆಂದು ಅಥವಾ ವಿಹಿತವೆಂದು ನಿಯಂತ್ರಕನು ಅಭಿಪ್ರಾಯಪಟ್ಟರೆ ಅವನು ತನಗೆ ಪ್ರತ್ಯಾಯೋಜಿಸಲಾಗಿರುವ ಅಧಿಕಾರಿಗಳಲ್ಲಿ ತಾನು ಸೂಕ್ತವೆಂದು ಆಲೋಚಿಸಬಹುದಾದಂಥವುಗಳನ್ನು ಇನ್ಸ್‌ಪೆಕ್ಟರನ ದರ್ಜೆಗೆ ಕಡಿಮೆಯಲ್ಲದ ತನ್ನ ಅಧೀನನಾಗಿರುವ, ಯಾವನೇ ಅಧಿಕಾರಿಗೆ ಪ್ರತ್ಯಾಯೋಜಿಸಬಹುದು ಮತ್ತು ಅಂಥ ನಿಯಂತ್ರಕನು ಅಂಥ ಯಾವುವೇ ಅಧಿಕಾರಗಳನ್ನು ಹಾಗೆ ಪ್ರತ್ಯಾಯೋಜಿಸಿರುವಲ್ಲಿ ಯಾರಿಗೆ ಹಾಗೆ ಅಧಿಕಾರಗಳನ್ನು ಪ್ರತ್ಯಾಯೋಜಿಸಲಾಗಿದೆಯೋ ಆ ವ್ಯಕ್ತಿಯು ಅವುಗಳನ್ನು ಅವನಿಗೆ ಪ್ರತ್ಯಾಯೋಜಿಸಲಾಗಿದೆ ಎಂಬ ರೀತಿಯಲ್ಲಲ್ಲದೆ ನೇರವಾಗಿ ಈ ಅಧಿನಿಯಮದ ಮೂಲಕ ಪ್ರದತ್ತವಾಗಿದೆ ಎಂಬ ರೀತಿಯಲ್ಲಿ ಮತ್ತು ಅಷ್ಟೇ ಪರಿಣಾಮಕಾರಿಯಾಗಿ ಆ ಅಧಿಕಾರಗಳನ್ನು ಚಲಾಯಿಸತಕ್ಕದ್ದು.

(8) (7)ನೇ ಉಪಪ್ರಕರಣದ ಮೇರೆಗೆ ಯಾವುವೇ ಅಧಿಕಾರಗಳನ್ನು ಪ್ರತ್ಯಾಯೋಜಿಸಲಾಗಿರುವಲ್ಲಿ ಹಾಗೆ ಪ್ರತ್ಯಾಯೋಜಿಸಲಾದ ಅಧಿಕಾರಗಳನ್ನು ನಿರ್ದೇಶಕನ ಮೇಲ್ವಿಚಾರಣೆಯಲ್ಲಿ, ನಿರ್ದೇಶನದಲ್ಲಿ ಮತ್ತು ಮಾರ್ಗದರ್ಶನದಲ್ಲಿ ಚಲಾಯಿಸತಕ್ಕದ್ದು,

29. ಪರಿಶೀಲನೆ, ಇತ್ಯಾದಿಗಳ ಬಗ್ಗೆ ಅಧಿಕಾರ.—(1) ನಿರ್ದೇಶಕನು ಅಥವಾ ನಿರ್ದೇಶಕನ ಅಧಿಕಾರಗಳನ್ನು ಚಲಾಯಿಸಲು ಅಥವಾ ಪ್ರಕಾರ್ಯಗಳನ್ನು ನಿರ್ವಹಿಸಲು ಅಧಿಕೃತನಾದ ಯಾವನೇ ವ್ಯಕ್ತಿಯು ಯಾವುದರ ಸಂಬಂಧದಲ್ಲಿ ಯಾವುದೇ ಅಂತಾರಾಜ್ಯ ವ್ಯಾಪಾರವು ಅಥವಾ ವಾಣಿಜ್ಯವು ನಡೆದಿದೆಯೋ ಅಥವಾ ಅವುಗಳನ್ನು ನಡೆಸಲು ಉದ್ದೇಶಿಸಲಾಗಿದೆಯೋ ಮತ್ತು ಯಾವುದರ ಸಂಬಂಧದಲ್ಲಿ ಈ ಅಧಿನಿಯಮದ ಮೇರೆಗೆ ದಂಡನೀಯವಾದ ಅಪರಾಧವು ನಡೆದಿದೆಯೆಂದು ಅಥವಾ ನಡೆಯುವ ಸಂಭವವಿದೆಯೆಂದು ತೋರುತ್ತದೆಯೋ ಅಥವಾ ಯಾವುದೇ ತೂಕವನ್ನು ಅಥವಾ ಅಳತೆಯನ್ನು ಅಥವಾ ಇತರ ಸರಕುಗಳನ್ನು ಯಾವುದೇ ಆವರಣದಲ್ಲಿ ಇಡಲಾಗಿದೆ ಅಥವಾ ಬಚ್ಚಿಡಲಾಗಿದೆ ಎಂದು ಅಥವಾ ಅವು ಒಂದು ರಾಜ್ಯದಿಂದ ಇನ್ನೊಂದಕ್ಕೆ ಸಾಗಿಸಲ್ಪಡುವ ಮಾರ್ಗದಲ್ಲಿವೆ ಎಂದು ನಂಬಲು ಯಾವನೇ ವ್ಯಕ್ತಿಯು ತನಗೆ ಕೊಟ್ಟ ಮತ್ತು ತಾನು ಬರೆದುಕೊಂಡ ಯಾವುದೇ ಮಾಹಿತಿಯಿಂದಾಗಲಿ ಅಥವಾ ಸ್ವಂತ ತಿಳಿವಳಿಕೆಯಿಂದಾಗಲಿ ಅಥವಾ ಇನ್ನಾವುದೇ ರೀತಿಯಿಂದಾಗಲಿ ಯಾವುದೇ ಕಾರಣವನ್ನು ಹೊಂದಿದ್ದರೆ—

(ಕ) ಯಾವುದೇ ಯುಕ್ತ ಸಮಯದಲ್ಲಿ ಅಂಥ ಯಾವುದೇ ಆವರಣವನ್ನು ಪ್ರವೇಶಿಸಬಹುದು ಮತ್ತು ಯಾವುದರ ಸಂಬಂಧದಲ್ಲಿ ಅಂತಾರಾಜ್ಯ ವ್ಯಾಪಾರವು ಅಥವಾ ವಾಣಿಜ್ಯವು ನಡೆದಿದೆಯೋ ಅಥವಾ ಅದನ್ನು ನಡೆಸಲು ಉದ್ದೇಶಿಸಲಾಗಿದೆಯೋ ಆ ಯಾವುದೇ ತೂಕವನ್ನು ಅಳತೆಯನ್ನು ಅಥವಾ ಇತರ ಸರಕುಗಳನ್ನು ಮತ್ತು ಅದಕ್ಕೆ ಸಂಬಂಧಿಸಿದ ಯಾವುದೇ ದಾಖಲೆಯನ್ನು, ರಿಜಿಸ್ಟರನ್ನು ಅಥವಾ ಇತರ ದಸ್ತಾವೇಜನ್ನು ಶೋಧಿಸಬಹುದು ಮತ್ತು ಪರಿಶೀಲಿಸಬಹುದು,

(ಖ) ಯಾವುದೇ ಅಂತಾರಾಜ್ಯ ವ್ಯಾಪಾರವನ್ನು ಅಥವಾ ವಾಣಿಜ್ಯವನ್ನು ನಡೆಸುತ್ತಿರುವಾಗ ಅಥವಾ ಅದಕ್ಕೆ ಸಂಬಂಧಿಸಿದಂತೆ ಈ ಅಧಿನಿಯಮದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧವು ನಡೆದಿದೆ ಅಥವಾ ನಡೆಯುವ ಸಂಭವವಿದೆ ಎಂದು ಸೂಚಿಸುವ ಸಾಕ್ಷ್ಯವನ್ನು ಒದಗಿಸಬಹುದೆಂದು ನಂಬಲು ತನಗೆ ಕಾರಣವಿರುವ ಯಾವುದೇ ತೂಕವನ್ನು, ಅಳತೆಯನ್ನು ಅಥವಾ ಇತರ ಸರಕುಗಳನ್ನು ಮತ್ತು ಯಾವುದೇ ದಾಖಲೆಯನ್ನು, ರಿಜಿಸ್ಟರನ್ನು ಅಥವಾ ದಸ್ತಾವೇಜನ್ನು ಅಥವಾ ವಸ್ತುವನ್ನು ಅಭಿಗ್ರಹಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ಅಭಿಗ್ರಹಿಸಲಾದ ಯಾವುದೇ ಸರಕು ಬೇಗನೆ ಅಥವಾ ಸ್ವಾಭಾವಿಕವಾಗಿ ನಾಶವಾಗುವಂತಿದ್ದಲ್ಲಿ ನಿರ್ದೇಶಕನು ಅಥವಾ ಅಧಿಕೃತನಾದ ವ್ಯಕ್ತಿಯು ಅಂಥ ಸರಕನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ವಿಲೆ ಮಾಡಬಹುದು.

(3) ಈ ಪ್ರಕರಣದ ಮೇರೆಗೆ ಮಾಡಲಾಗುವ ಪ್ರತಿಯೊಂದು ಶೋಧನೆಯನ್ನು ಮತ್ತು ಅಭಿಗ್ರಹಣವನ್ನು ದಂಡ ಪ್ರಕ್ರಿಯಾ ಸಂಹಿತೆ 1973 (1974ರ 2) ರಲ್ಲಿನ ಶೋಧನೆಗಳಿಗೆ ಮತ್ತು ಅಭಿಗ್ರಹಣಗಳಿಗೆ ಸಂಬಂಧಿಸಿದ ಉಪಬಂಧಗಳಿಗೆ ಅನುಸಾರವಾಗಿ ಮಾಡತಕ್ಕದ್ದು.

30. ಮುಟ್ಟುಗೋಲು.—ಯಾವುದೇ ಅಂತಾರಾಜ್ಯ ವ್ಯಾಪಾರವನ್ನು ಅಥವಾ ವಾಣಿಜ್ಯವನ್ನು ನಡೆಸುವಾಗ ಅಥವಾ ಅದಕ್ಕೆ ಸಂಬಂಧಿಸಿ ಬಳಸಿದ ಮತ್ತು 29ನೇ ಪ್ರಕರಣದ ಮೇರೆಗೆ ಅಭಿಗ್ರಹಿಸಲಾದ ಪ್ರತಿಯೊಂದು ಖೋಟಾ ಅಥವಾ ಸತ್ಯಾಪನೆ ಮಾಡಿರದ ತೂಕವು ಅಥವಾ ಅಳತೆಯು ಮತ್ತು ಪ್ರತಿಯೊಂದು ಖೋಟಾ ಪ್ಯಾಕೇಜು ಕೇಂದ್ರ ಸರ್ಕಾರಕ್ಕೆ ಮುಟ್ಟುಗೋಲು ಮಾಡಿಕೊಳ್ಳಲು ಗುರಿಯಾಗತಕ್ಕದ್ದು:

ಪರಂತು ಸತ್ಯಾಪನೆ ಮಾಡಿರದ ಅಂಥ ತೂಕವನ್ನು ಅಥವಾ ಅಳತೆಯನ್ನು ಯಾರಿಂದ ಅಭಿಗ್ರಹಿಸಲಾಯಿತೋ ಆ ವ್ಯಕ್ತಿಯು ಅವುಗಳನ್ನು ನಿಯಮಿಸಬಹುದಾದಂಥ ಕಾಲದೊಳಗೆ ಸತ್ಯಾಪನೆ ಮಾಡಿಸಿದರೆ ಮತ್ತು ಅವಕ್ಕೆ ಮುದ್ರೆ ಒತ್ತಿಸಿದರೆ ಅಂಥ ತೂಕವನ್ನು ಅಥವಾ ಅಳತೆಯನ್ನು ಸರ್ಕಾರಕ್ಕೆ ಮುಟ್ಟುಗೋಲು ಮಾಡಿಕೊಳ್ಳತಕ್ಕದ್ದಲ್ಲ.

## ಭಾಗ–IV

### ತೂಕದ ಅಳತೆಯ ಅಥವಾ ಇತರ ಸರಕಿನ ಅಂತಾರಾಜ್ಯ ವ್ಯಾಪಾರ ಮತ್ತು ವಾಣಿಜ್ಯ

### ಅಧ್ಯಾಯ–I

#### ಈ ಭಾಗವನ್ನು ಅನ್ವಯಿಸುವಿಕೆ

31 ಭಾಗ IV.—ಅಂತಾರಾಜ್ಯ ವ್ಯಾಪ್ಯಾರಕ್ಕೆ ಅಥವಾ ವಾಣಿಜ್ಯಕ್ಕೆ ಮಾತ್ರ ಅನ್ವಯಿಸತಕ್ಕದು.—ಈ ಭಾಗದ ಉಪಬಂಧಗಳು ಕೆಳ ಕಂಡವುಗಳಿಗೆ ಅನ್ವಯಿಸತಕ್ಕದು.

(ಕ) (i) ಅಂತಾರಾಜ್ಯ ವ್ಯಾಪಾರದ ಅಥವಾ ವಾಣಿಜ್ಯದ ಉದ್ದೇಶಕ್ಕಾಗಿ ಮಾಡಿದ ಅಥವಾ ತಯಾರಿಸಿದ ಅಥವಾ ಹಾಗೆ ಮಾಡಲು ಅಥವಾ ತಯಾರಿಸಲು ಉದ್ದೇಶಿಸಿದ,

(ii) ಅಂತಾರಾಜ್ಯ ವ್ಯಾಪಾರವನ್ನು ಅಥವಾ ವಾಣಿಜ್ಯವನ್ನು ನಡೆಸುವಾಗ ಬಳಸಿದ, ಮಾರಿದ, ಹಂಚಿದ, ವಶಾವಣೆ ಮಾಡಿದ, ಅಥವಾ ಅನ್ಯಥಾ ವರ್ಗಾಯಿಸಿದ ಅಥವಾ ಹಾಗೆ ಮಾಡಲು ಉದ್ದೇಶಿಸಿದ,

—ಪ್ರತಿಯೊಂದು ತೂಕ ಅಥವಾ ಅಳತೆ,

(ಖ) ಅಂತಾರಾಜ್ಯ ವ್ಯಾಪಾರವನ್ನು ಅಥವಾ ವಾಣಿಜ್ಯವನ್ನು ನಡೆಸುವಾಗ ತೂಕದಲ್ಲಿ, ಅಳತೆಯಲ್ಲಿ ಅಥವಾ ಸಂಖ್ಯೆಯಲ್ಲಿ ಮಾಡಿದ ಹಂಚಿದ, ವಶಾವಣೆ ಮಾಡಿದ, ಅಥವಾ ಅನ್ಯಥಾ ವರ್ಗಾಯಿಸಿದ ಅಥವಾ ಹಾಗೆ ಮಾಡಲು ಉದ್ದೇಶಿಸಿದ ಸರಕುಗಳು,

(ಗ) ಅಂತಾರಾಜ್ಯ ವ್ಯಾಪಾರವನ್ನು ಅಥವಾ ವಾಣಿಜ್ಯವನ್ನು ನಡೆಸುವಾಗ ಅಥವಾ ಅದರ ಸಂಬಂಧದಲ್ಲಿ ತೂಕದ, ಅಳತೆಯ ಅಥವಾ ಸಂಖ್ಯೆಯ ಮೂಲಕ ಸಲ್ಲಿಸಿದ ಪ್ರತಿಯೊಂದು ಸೇವೆ.

### ಅಧ್ಯಾಯ–II

#### ಸಾಮಾನ್ಯ

32. ಕೆಲವು ಸಂದರ್ಭಗಳಲ್ಲಿ ತೂಕಗಳನ್ನು ಮಾತ್ರ ಅಥವಾ ಅಳತೆಗಳನ್ನು ಮಾತ್ರ ಬಳಸುವುದು.—(1) ಕೇಂದ್ರ ಸರ್ಕಾರವು ಈ ಬಗ್ಗೆ ಮಾಡಲಾದ ನಿಯಮಗಳ ಮೂಲಕ ಅದರಲ್ಲಿ ನಿರ್ದಿಷ್ಟಪಡಿಸಿದ ಸರಕುಗಳ ಅಥವಾ ಉದ್ಯಮಗಳ ಅಥವಾ ಬಳಕೆದಾರರ ವರ್ಗದ ಸಂಬಂಧದಲ್ಲಿ, ಸದರಿ ನಿಯಮಗಳಲ್ಲಿ ನಿರ್ದಿಷ್ಟಪಡಿಸಬಹುದಾದಂಥ ತೂಕದಲ್ಲಿ, ಅಳತೆಯಲ್ಲಿ ಅಥವಾ ಸಂಖ್ಯೆಯಲ್ಲಿ ಹೊರತು ಯಾವ ವ್ಯವಹಾರವನ್ನೂ, ವ್ಯಾಪಾರವನ್ನೂ ಅಥವಾ ಕರಾರನ್ನೂ ಮಾಡತಕ್ಕದ್ದಲ್ಲ ಅಥವಾ ಅದು ಆಗತಕ್ಕದ್ದಲ್ಲ ಎಂದು ನಿರ್ದೇಶಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ಮಾಡಲಾದ ಯಾವುದೇ ನಿಯಮವು ಅದರಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಪ್ರದೇಶದಲ್ಲಿ ಅಂಥ ಮುಂದಿನ ದಿನಾಂಕದಿಂದ ಮತ್ತು ಅಂಥ ಷರತ್ತುಗಳು ಯಾವುವಾದರೂ ಇದ್ದರೆ ಅವುಗಳಿಗೆ ಒಳಪಟ್ಟು ಪರಿಣಾಮಕಾರಿಯಾಗತಕ್ಕದು.

33. ತೂಕದ, ಅಳತೆಯ ಅಥವಾ ಎಣಿಕೆಯ ಮಾನಕ ಘಟಕಗಳಲ್ಲಲ್ಲದೆ ಇತರ ರೀತಿಯಲ್ಲಿನ ಹೇಳುಬೆಲೆ ಇತ್ಯಾದಿಗಳ ನಿಷೇದ.—ಈ ಭಾಗವು ಅನ್ವಯಿಸುವ ಯಾವುದೇ ಸರಕಿನ, ವಸ್ತುವಿನ ಅಥವಾ ಸೇವೆಯ ಸಂಬಂಧದಲ್ಲಿ ಯಾವನೇ ವ್ಯಕ್ತಿಯು ತೂಕದ, ಅಳತೆಯ ಅಥವಾ ಎಣಿಕೆಯ ಮಾನಕ ಘಟಕಕ್ಕೆ ಅನುಸಾರವಾಗಿದೆಯಲ್ಲದೆ ಅನ್ಯಥಾ—

(ಕ) ಬಾಯಿ ಮಾತಿನಲ್ಲಿ ಅಥವಾ ಅನ್ಯಥಾ ಯಾವುದೇ ಬೆಲೆಯನ್ನು ಅಥವಾ ಚಾರ್ಜನ್ನು ಹೇಳತಕ್ಕದ್ದಲ್ಲ ಅಥವಾ ಪ್ರಕಟಿಸತಕ್ಕದ್ದಲ್ಲ ಅಥವಾ

(ಖ) ಯಾವುದೇ ಬೆಲೆ ಪಟ್ಟಿಯನ್ನು ಖರೀದಿ ಪಟ್ಟಿಯನ್ನು ನಗದು ರಸೀತಿಯನ್ನು ಅಥವಾ ಇತರ ದಸ್ತಾವೇಜನ್ನು ಕೊಡತಕ್ಕದ್ದಲ್ಲ ಅಥವಾ ಪ್ರದರ್ಶಿಸತಕ್ಕದ್ದಲ್ಲ; ಅಥವಾ

(ಗ) ಯಾವುದೇ ಜಾಹಿರಾತು ಭಿತ್ತಿಪತ್ರವನ್ನು ಅಥವಾ ಇತರ ದಸ್ತಾವೇಜನ್ನು ತಯಾರಿಸತಕ್ಕದ್ದಲ್ಲ ಅಥವಾ ಪ್ರಕಟಿಸತಕ್ಕದ್ದಲ್ಲ; ಅಥವಾ

(ಘ) ಯಾವುದೇ ಪ್ಯಾಕೇಟಿನಲ್ಲಿರುವ ವಸ್ತುವನ್ನು ಅದರ ಮೇಲೆಯಾಗಲಿ, ಲೇಬಲ್ಲಿನ ಅಥವಾ ರಟ್ಟುಪೆಟ್ಟಿಗೆಯ ಮೇಲೆಯಾಗಲಿ ಅಥವಾ ಇತರ ವಸ್ತುವಿನ ಮೇಲೆಯಾಗಲಿ ಸೂಚಿಸತಕ್ಕದ್ದಲ್ಲ; ಅಥವಾ

(ಙ) ಯಾವುದೇ ಪಾತ್ರೆಯಲ್ಲಿರುವ ವಸ್ತುವನ್ನು ಸೂಚಿಸತಕ್ಕದ್ದಲ್ಲ; ಅಥವಾ

(ಚ) ಯಾವುದೇ ಪರಿಣಾಮವನ್ನು ಅಥವಾ ಸಂತೃಪ್ತತೆಯನ್ನು ತಿಳಿಸತಕ್ಕದ್ದಲ್ಲ.

34. ಮಾನಕ ತೂಕಕ್ಕೆ, ಅಳತೆಗೆ ಅಥವಾ ಎಣಿಕೆಗೆ ವ್ಯತಿರಿಕ್ತವಾದ ಯಾವುದೇ ರೂಢಿ ಆಚರಣೆ, ಇತ್ಯಾದಿಗಳು ಶೂನ್ಯವಾಗತಕ್ಕದು.—(ಈ ಭಾಗವು ಅನ್ವಯಿಸುವ) ಯಾವುದೇ ವಸ್ತುವಿನ, ಪದಾರ್ಥದ ಅಥವಾ ಸೇವೆಯ ಯಾವುದೇ ಪರಿಣಾಮವನ್ನು ಸದರಿ ವಸ್ತುವಿನ, ಪದಾರ್ಥದ ಅಥವಾ ಸೇವೆಯ ಸಂಬಂಧದಲ್ಲಿ ತೂಕದಲ್ಲಿ, ಅಳತೆಯಲ್ಲಿ ಅಥವಾ ಸಂಖ್ಯೆಯ ಮೂಲಕ ಕರಾರಿನಲ್ಲಿ ಅಥವಾ ಇತರ ಒಪ್ಪಂದದಲ್ಲಿ ನಿರ್ದಿಷ್ಟಪಡಿಸಲಾದ ಪರಿಮಾಣಕ್ಕಿಂತ ಹೆಚ್ಚಾಗಿ ಅಥವಾ ಕಡಿಮೆಯಾಗಿ ಕೇಳಲು ಅಥವಾ ಸ್ವೀಕರಿಸಲು ಅಥವಾ ಕೇಳುವಂತೆ ಅಥವಾ ಸ್ವೀಕರಿಸುವಂತೆ ಮಾಡಲು ಅನುಮತಿಸುವ ಯಾವುದೇ ಸ್ವರೂಪದ ಯಾವುದೇ ರೂಢಿಯು, ಆಚರಣೆಯು, ಪದ್ಧತಿಯು ಅಥವಾ ವಿಧಾನವು ಶೂನ್ಯವಾಗತಕ್ಕದು.

35. ತಯಾರಕರು ಮುಂತಾದವರು ದಾಖಲೆಗಳನ್ನು ಮತ್ತು ರಿಜಿಸ್ಟರುಗಳನ್ನು ಇಟ್ಟುಕೊಂಡು ಬರತಕ್ಕದು.—(1) ಈ ಭಾಗವು ಅನ್ವಯಿಸುವ,—

(ಕ) ತೂಕದಲ್ಲಿ; ಅಳತೆಯಲ್ಲಿ ಅಥವಾ ಸಂಖ್ಯೆಯಲ್ಲಿ ಮಾರಲಾಗುವ, ವಶಾವಣೆ ಮಾಡಲಾಗುವ ಅಥವಾ ವಿತರಣೆ ಮಾಡಲಾಗುವ ಯಾವುದೇ ತೂಕವನ್ನು, ಅಳತೆಯನ್ನು ಅಥವಾ ಇತರ ಸರಕನ್ನು ಮಾಡುವ, ತಯಾರಿಸುವ, ಮಾರುವ, ವಿತರಣೆ ಮಾಡುವ ಅಥವಾ ಅನ್ಯಥಾ ವಿಲೆ ಮಾಡುವ ಅಥವಾ

(ಖ) ಯಾವುದೇ ತೂಕವನ್ನು ಅಥವಾ ಅಳತೆಯನ್ನು ದುರಸ್ತಿ ಮಾಡುವ,

—ಪ್ರತಿಯೊಬ್ಬ ವ್ಯಕ್ತಿಯು ನಿಯಮಿಸಬಹುದಾದಂಥ ದಾಖಲೆಗಳನ್ನು ಮತ್ತು ರಿಜಿಸ್ಟರುಗಳನ್ನು ಇಟ್ಟುಕೊಂಡು ಬರತಕ್ಕದು ಮತ್ತು ನಿರ್ದೇಶಕನು ಹಾಗೆ ಮಾಡಲು ಅಗತ್ಯಪಡಿಸಿದರೆ, ಅಂಥ ದಾಖಲೆಗಳನ್ನು ಮತ್ತು ರಿಜಿಸ್ಟರುಗಳನ್ನು ನಿರ್ದೇಶಕನ ಅಥವಾ ನಿರ್ದೇಶಕನು ಈ ಬಗ್ಗೆ ಅಧಿಕೃತಗೊಳಿಸಬಹುದಾದಂಥ ಇತರ ಅಧಿಕಾರಿಯ ಮುಂದೆ ಪರಿಶೀಲನೆಗಾಗಿ ಒಪ್ಪಿಸತಕ್ಕದು.

(2) (1)ನೇ ಉಪಪ್ರಕರಣದಲ್ಲಿ ಏನೇ ಇದ್ದರೂ ಯಾವನೇ ನಿರ್ಮಾಪಕನು ತಯಾರಕನು ವ್ಯಾಪಾರಿಯು ಅಥವಾ ದುರಸ್ತಿಗಾರನು ನಡೆಸುವ ವ್ಯವಹಾರದ ಸ್ವರೂಪವನ್ನು ಅಥವಾ ಪ್ರಮಾಣವನ್ನು ಗಮನಿಸಿ ಹಾಗೆ ಮಾಡುವುದು ಅವಶ್ಯವೆಂದು ನಿರ್ದೇಶಕನು ಅಭಿಪ್ರಾಯಪಟ್ಟರೆ ಅವನು ಅಂಥ ನಿರ್ಮಾಪಕನನ್ನು, ತಯಾರಕನನ್ನು, ವ್ಯಾಪಾರಿಯನ್ನು ಅಥವಾ ದುರಸ್ತಿಗಾರರನು ಆ ಉಪಪ್ರಕರಣದ ಪ್ರವರ್ತನೆಯಿಂದ ಆದೇಶದ ಮೂಲಕ ವಿನಾಯಿತಿಗೊಳಿಸಬಹುದು.

## ಅಧ್ಯಾಯ–III

### ಮಾದರಿಗಳ ಅನುಮೋದನೆ

36. ಮಾದರಿಗಳ ಅನುಮೋದನೆ.—(1) ಈ ಪ್ರಕರಣದಲ್ಲಿ ಅನ್ಯಥಾ ಉಪಬಂಧಿಸಿರುವುದನ್ನು ಉಳಿದು ಈ ಅಧ್ಯಾಯವು ಕೆಳಕಂಡವುಗಳಿಗೆ ಅನ್ವಯಿಸತಕ್ಕುದಲ್ಲ.—

(ಕ) ಈ ಅಧಿನಿಯಮದ ಪ್ರಾರಂಭಕ್ಕೆ ನಿಕಟಪೂರ್ವದಲ್ಲಿ ಜಾರಿಯಲ್ಲಿದ್ದ ರಾಜ್ಯ ಕಾನೂನಿನ ಮೇರೆಗೆ ಸತ್ಯಾಪನೆ ಮಾಡುವುದಕ್ಕೆ ಮತ್ತು ಮುದ್ರೆಯೊತ್ತುವುದಕ್ಕೆ ಒಳಪಟ್ಟು ಅಂಥ ಪ್ರಾರಂಭದಲ್ಲಿ ಬಳಕೆಯಲ್ಲಿರುವ ಯಾವುದೇ ತೂಕ ಅಥವಾ ಅಳತೆ;

(ಖ) ಈ ಬಗ್ಗೆ ಮಾಡಲಾದ ನಿಯಮಗಳ ಮೂಲಕ ನಿರ್ದಿಷ್ಟಪಡಿಸಲಾದವನ್ನು ಬಿಟ್ಟು ಉಳಿದ ಯಾವುದೇ ತಾಂಡವಾಳ, ಹಿತ್ತಾಳೆ, ಚಿನ್ನ ಅಥವಾ ಬೆಳ್ಳಿ ಗಟ್ಟಿ ಅಥವಾ ಕ್ಯಾರೇಟ್ ತೂಕ ಅಥವಾ ಯಾವುದೇ ತಕ್ಕಡಿ;

(ಗ) ಜವಳಿಯನ್ನು ಅಥವಾ ಚೌಬೀನೆಯನ್ನು ಅಳೆಯಲು ಚಿಲ್ಲರೆ ವ್ಯಾಪಾರದಲ್ಲಿ ಸಾಮಾನ್ಯವಾಗಿ ಬಳಸಲಾಗುವ (ಅಳತೆ ಟೇಪುಗಳಲ್ಲದ) ಇತರ ಅಳತೆ ಸಾಧನಗಳು;

(ಘ) ಸೀಮೆಎಣ್ಣೆಯನ್ನು, ಹಾಲನ್ನು ಅಥವಾ ಪೇಯಪಾನಗಳನ್ನು ಅಳೆಯಲು ಚಿಲ್ಲರೆ ವ್ಯಾಪಾರದಲ್ಲಿ ಸಾಮಾನ್ಯವಾಗಿ ಬಳಸಲಾಗುವ ಅದರೆ ಇಪ್ಪತ್ತು ಲೀಟರುಗಳನ್ನು ಮೀರದ ಅಳತೆ ಮಾಪುಗಳು;

(ಙ) ಮನೆ ಬಳಕೆಗಾಗಿ ಮಾತ್ರವೇ ಮಾಡಲಾದ ಅಥವಾ ತಯಾರಿಸಲಾದ ಯಾವುದೇ ತೂಕದ ಅಥವಾ ಅಳತೆಯ ಉಪಕರಣ ಅಥವಾ ಸಾಧನ:

ಪರಂತು ಅಂಥ ಉಪಕರಣವು ಅಥವಾ ಸಾಧನವು ವೈದ್ಯಕೀಯ ವೃತ್ತಿಯನ್ನು ನಡೆಸುತ್ತಿರುವ ಯಾವನೇ ವ್ಯಕ್ತಿಯು ಅಂಥ ವೃತ್ತಿಯನ್ನು ನಡೆಸುವಲ್ಲಿ ಬಳಸುವುದಕ್ಕಾಗಿ ಉದ್ದೇಶಿತವಾಗಿರಕೂಡದು.

(2) ತೂಕಗಳಿಗೆ ಮತ್ತು ಅಳತೆಗಳಿಗೆ ಸಂಬಂಧಿಸಿದ ಕಾನೂನನ್ನು ಕಾರ್ಯಗತಗೊಳಿಸುವ ಕರ್ತವ್ಯವನ್ನು ಹೊಂದಿರುವ ಕೇಂದ್ರ ಅಥವಾ ರಾಜ್ಯ ಸರ್ಕಾರದ ಯಾವನೇ ಅಧಿಕಾರಿಗೆ (1)ನೇ ಉಪಪ್ರಕರಣದಲ್ಲಿ ಉಲ್ಲೇಖಿತವಾದ ಯಾವುದೇ ತೂಕದ ಅಥವಾ ಅಳತೆಯ ಮಾದರಿಯನ್ನು ನಿಯಮಿಸಲಾದ ಪ್ರಾಧಿಕಾರವು ಪರೀಕ್ಷೆ ಮಾಡುವ ಅಗತ್ಯವಿದೆಯೆಂದು ನಂಬಲು ಯಾವುದೇ ಕಾರಣವು ಇರುವಲ್ಲಿ ಅವನು ಅಂಥ ಒಂದು ತೂಕವನ್ನು ಅಥವಾ ಅಳತೆಯನ್ನು ಮಾರುಕಟ್ಟೆಯಿಂದ ದೊರಕಿಸಿಕೊಳ್ಳಬಹುದು ಮತ್ತು ನಿಯಮಿಸಲಾದ ಪ್ರಾಧಿಕಾರಕ್ಕೆ ಪರೀಕ್ಷೆಗಾಗಿ ಕಳುಹಿಸಬಹುದು; ಆ ಬಗೆಗಿನ ಫೀಜನ್ನು ಅಂಥ ತೂಕವನ್ನು ಅಥವಾ ಅಳತೆಯನ್ನು ಪರೀಕ್ಷೆಗಾಗಿ ಯಾವ ಅಧಿಕಾರಿಯು ಕಳುಹಿಸಿರುವನೋ ಆ ಅಧಿಕಾರಿಯನ್ನು ನಿಯೋಜಿಸಿರುವ ಸರ್ಕಾರವು ಸಂದಾಯ ಮಾಡತಕ್ಕುದು.

(3) ಈ ಭಾಗವು ಅನ್ವಯಿಸುವ ಯಾವುದೇ ತೂಕವನ್ನು ಅಥವಾ ಅಳತೆಯನ್ನು ಮಾಡುವ ಅಥವಾ ತಯಾರಿಸುವ ಪ್ರತಿಯೊಬ್ಬ ವ್ಯಕ್ತಿಯೂ ಅಂಥ ತೂಕಕ್ಕೆ ಅಥವಾ ಅಳತೆಗೆ ಸಂಬಂಧಿಸಿ ನಿಯಮಿಸಬಹುದಾದಷ್ಟು ಸಂಖ್ಯೆಯ ಮಾದರಿಗಳನ್ನು, ರೇಖಾ ಚಿತ್ರಗಳನ್ನು ಮತ್ತು ಇತರ ಮಾಹಿತಿಯನ್ನು ನಿಯಮಿಸಲಾದ ಪ್ರಾಧಿಕಾರದ ಅನುಮೋದನೆಗಾಗಿ ಸಲ್ಲಿಸತಕ್ಕುದು:

ಪರಂತು ಈ ಭಾಗವು ಅನ್ವಯಿಸುವ ಹಾಗು ಈ ಭಾಗ ಪ್ರಾರಂಭವಾಗುವ ಕಾಲದಲ್ಲಿ ಈಗಾಗಲೇ ಮಾಡಲಾಗಿರುವ ಅಥವಾ ತಯಾರಿಸಲಾಗಿರುವ ಅಥವಾ ಮಾಡುವಿಕೆಯ ಅಥವಾ ತಯಾರಿಕೆಯ ಹಂತದಲ್ಲಿರುವ ಯಾವುದೇ ತೂಕದ ಅಥವಾ ಅಳತೆಯ ಸಂಬಂಧದಲ್ಲಿ ಈಗಾಗಲೇ ಮಾಡಲಾಗಿರುವ ಅಥವಾ ತಯಾರಿಸಲಾಗಿರುವ ಅಥವಾ ಮಾಡುವಿಕೆಯ ಅಥವಾ ತಯಾರಿಕೆಯ ಹಂತದಲ್ಲಿರುವ ಅಂಥ ತೂಕಗಳಿಂದ ಅಥವಾ ಅಳತೆಗಳಿಂದ ಆ ತೂಕದ ಅಥವಾ ಅಳತೆಯ ಮಾದರಿಗಳನ್ನು ತೆಗೆದುಕೊಂಡು ನಿಯಮಿಸಲಾದ ಪ್ರಾಧಿಕಾರಕ್ಕೆ ಸಲ್ಲಿಸತಕ್ಕುದು:

ಮತ್ತೂ ಪರಂತು, ಯಾವ ತೂಕದ ಅಥವಾ ಅಳತೆಯ ಮಾದರಿಯನ್ನು ಅದರ ಸ್ವರೂಪದ ಅಥವಾ ಇನ್ನಾವುದೇ ಕಾರಣದಿಂದಾಗಿ ಸಲ್ಲಿಸಲು ಸಾಧ್ಯವಿಲ್ಲವೋ ಆ ತೂಕದ ಅಥವಾ ಅಳತೆಯ ಸಂದರ್ಭದಲ್ಲಿ ಆ ತೂಕದ ಅಥವಾ ಅಳತೆಯ ರೇಖಾ ಚಿತ್ರಗಳನ್ನು ಮತ್ತು ಅವುಗಳ ಬಗೆಗಿನ ನಿಯಮಿಸಲಾದ ಇತರ ಮಾಹಿತಿಯನ್ನು ನಿಯಮಿಸಲಾದ ಪ್ರಾಧಿಕಾರಕ್ಕೆ ಸಲ್ಲಿಸಿದರೆ ಸಾಕು ಮತ್ತು ಆ ಮೇಲೆ ಆ ಪ್ರಾಧಿಕಾರವು ತೂಕದ ಅಥವಾ ಅಳತೆಯ ಮಾದರಿಗಳನ್ನು, ಅದನ್ನು ಮಾಡಿದ ಅಥವಾ ತಯಾರಿಸಿದ ಸ್ಥಳದಲ್ಲಿ ಅಥವಾ ನಿರ್ದೇಶಕನು ನಿರ್ದಿಷ್ಟಪಡಿಸಬಹುದಾದಂಥ ಇತರ ಸ್ಥಳದಲ್ಲಿ ಪರೀಕ್ಷಿಸತಕ್ಕುದು:

ಇನ್ನೂ ಪರಂತು, ಭಾರತದ ಹೊರಗಿನ ಯಾವುದೇ ದೇಶದಲ್ಲಿ ಅನುಮೋದಿತವಾದ ಯಾವುದೇ ತೂಕದ ಅಥವಾ ಅಳತೆಯ ಮಾದರಿಯು ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ನಿಗದಿಪಡಿಸಲಾದ ಮಾನಕಗಳಿಗೆ ಅನುಗುಣವಾಗಿದೆ ಎಂದು ನಿಯಮಿಸಲಾದ ಪ್ರಾಧಿಕಾರಕ್ಕೆ ಮನದಟ್ಟಾದರೆ ಅದು ಅಂಥ ಮಾದರಿಯನ್ನು ಯಾವುದೇ ಪರೀಕ್ಷೆಯಿಲ್ಲದೆ ಅಥವಾ ತಾನು ಸೂಕ್ತವೆಂದು ಭಾವಿಸುವಂಥ ಪರೀಕ್ಷೆಯ ಅನಂತರ ಅನುಮೋದಿಸಬಹುದು.

(4) ಈ ಪ್ರಕರಣದ ಮೇರೆಗೆ ಅನುಮೋದನೆಗಾಗಿ ಸಲ್ಲಿಸಲಾದ ಯಾವುದೇ ಮಾದರಿಯನ್ನು ಪರೀಕ್ಷಿಸುವುದಕ್ಕಾಗಿ ನಿಯಮಿಸಲಾದ ಪ್ರಾಧಿಕಾರವು ನಿಯಮಿಸಬಹುದಾದಂಥ ಫೀಜನ್ನು ವಿಧಿಸತಕ್ಕುದು ಮತ್ತು ವಸೂಲು ಮಾಡತಕ್ಕುದು.

(5) ತನಗೆ ಸಲ್ಲಿಸಲಾದ ಮಾದರಿಗಳನ್ನು ನಿಯಮಿಸಲಾದ ಪ್ರಾಧಿಕಾರವು ಕೆಳಕಂಡ ದೃಷ್ಟಿಯಿಂದ ಪರೀಕ್ಷಿಸತಕ್ಕುದು.

(ಕ) ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ನಿಗದಿಪಡಿಸಲಾದ ಮಾನಕಗಳಿಗೆ ಅಂಥ ಮಾದರಿಗಳು ಅನುಗುಣವಾಗಿವೆಯೇ ಎಂಬುವನ್ನು ಖಚಿತಪಡಿಸಿಕೊಳ್ಳುವುದು;

(ಖ) ಸತತ ಬಳಕೆಯ ಕಾಲಾವಧಿಯ ಅನಂತರವೂ ತಮ್ಮ ನಿಷ್ಕೃಷ್ಟತೆಯನ್ನು ಉಳಿಸಿಕೊಳ್ಳಲು ಅಂಥ ಮಾದರಿಗಳಿಗಿರುವ ಸಾಮರ್ಥ್ಯವನ್ನು ಕಂಡುಹಿಡಿಯುವುದು; ಮತ್ತು

(ಗ) ನಿಯಮಿಸಬಹುದಾದಂಥ ವಿಭಿನ್ನ ಪರಿಸ್ಥಿತಿಗಳಲ್ಲಿ ಅಂಥ ಮಾದರಿಗಳ ಕಾರ್ಯನಿರ್ವಹಣೆಯನ್ನು ನಿರ್ಧರಿಸುವುದು.

(6) ತನಗೆ ಸಲ್ಲಿಸಲಾದ ಮಾದರಿಯ ಕಾರ್ಯನಿರ್ವಹಣೆಯ ಬಗ್ಗೆ ವಿವರವಾದ ವರದಿಯನ್ನು ಆ ಮಾದರಿಯ ಸಂಬಂಧದಲ್ಲಿನ ಅನುಮೋದನೆಯ ಪ್ರಮಾಣ ಪತ್ರವನ್ನು ಕೊಡುವುದು ಆಕ್ಷೇಪಣೀಯವೇ ಅಥವಾ ಅಲ್ಲವೇ ಎಂಬ ಬಗೆಗೆ ತನ ಶಿಫಾರಸ್ಸುಗಳೊಂದಿಗೆ ನಿಯಮಿಸಲಾದ ಪ್ರಾಧಿಕಾರವು ಕೇಂದ್ರ ಸರ್ಕಾರಕ್ಕೆ ಸಲ್ಲಿಸತಕ್ಕದು.

(7) ನಿಯಮಿಸಲಾದ ಪ್ರಾಧಿಕಾರವು ತನಗೆ ಸಲ್ಲಿಸಿದ ವರದಿಯನ್ನು ಪರ್ಯಾಲೋಚಿಸಿದ ಅನಂತರ, ಮೇಲೆ ಹೇಳಿದ ಮಾದರಿಯು ಈ ಅಧಿನಿಯಮದ ಅಥವಾ ಅದರ ಮೇರೆಗೆ ಮಾಡಲಾದ ಯಾವುದೇ ನಿಯಮದ ಉಪಬಂಧಗಳಿಗೆ ಅನುಗುಣವಾಗಿದೆಯೆಂದು ಮತ್ತು ಸತತ ಬಳಕೆಯ ಕಾಲಾವಧಿಯ ಅನಂತರವೂ ಅದು ತನ್ನ ನಿಷ್ಕೃಷ್ಟತೆಯನ್ನು ಉಳಿಸಿಕೊಳ್ಳುವ ಮತ್ತು ವಿಭಿನ್ನ ಪರಿಸ್ಥಿತಿಗಳಲ್ಲಿ ನಿಷ್ಕೃಷ್ಟ ಸೇವೆಯನ್ನು ಸಲ್ಲಿಸುವ ಸಂಭವವಿದೆ ಎಂದು ಕೇಂದ್ರ ಸರ್ಕಾರಕ್ಕೆ ಮನದಟ್ಟಾದರೆ ಅದು ಆ ಮಾದರಿಗೆ ಸಂಬಂಧಿಸಿದ ಅನುಮೋದನಾ ಪ್ರಮಾಣಪತ್ರವನ್ನು ಕೊಡಬಹುದು.

(8) ಮಾದರಿಯನ್ನು ಅನುಮೋದಿಸಿದ ಬಗೆಗಿನ ಪ್ರತಿಯೊಂದು ಪ್ರಮಾಣಪತ್ರವನ್ನು ಸರ್ಕಾರೀ ರಾಜಪತ್ರದಲ್ಲಿ ಪ್ರಕಟಿಸತಕ್ಕದು ಮತ್ತು ಕೇಂದ್ರ ಸರ್ಕಾರವು ಸೂಕ್ತವೆಂದು ಆಲೋಚಿಸಬಹುದಾದಂಥ ಇತರ ರೀತಿಯಲ್ಲಿ ಸಹ ಪ್ರಕಟಿಸತಕ್ಕದು.

(9) ತಾನು ಅನುಮೋದಿಸಿದ ಮಾದರಿಗೆ ಅನುಸಾರವಾಗಿ ಮಾಡಲಾದ ಅಥವಾ ತಯಾರಿಸಲಾದ ವಸ್ತುವು ನಿರೀಕ್ಷಿತ ಕಾರ್ಯನಿರ್ವಹಣೆಯನ್ನು ಮಾಡಲು ಅಥವಾ ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ನಿಗದಿಪಡಿಸಲಾದ ಮಾನಕಗಳಿಗೆ ಅನುಗುಣವಾಗಿರಲು ವಿಫಲವಾಗಿದೆಯೆಂದು ಕೇಂದ್ರ ಸರ್ಕಾರಕ್ಕೆ ಮನದಟ್ಟಾದರೆ (7)ನೇ ಉಪಪ್ರಕರಣದ ಮೇರೆಗೆ ತಾನು ಕೊಟ್ಟ ಪ್ರಮಾಣ ಪತ್ರವನ್ನು ಹಿಂತೆಗೆದುಕೊಳ್ಳಬಹುದು:

ಪರಂತು ತನ್ನ ಅಹವಾಲನ್ನು ಹೇಳಿಕೊಳ್ಳಲು ಅಂಥ ತೂಕದ ಅಥವಾ ಅಳತೆಯ ತಯಾರಕನಿಗೆ ಯುಕ್ತ ಅವಕಾಶವನ್ನು ಕೊಟ್ಟ ಹೊರತು ಹಾಗೆ ಹಿಂತೆಗೆದುಕೊಳ್ಳತಕ್ಕದಲ್ಲ:

ಮತ್ತೂ ಪರಂತು ಆ ತೂಕದ ಅಥವಾ ಅಳತೆಯ ಮಾದರಿಯಲ್ಲಿ ತಯಾರಕನು ಮಾಡಿದ ವ್ಯತ್ಯಾಸದ ಪರಿಣಾಮದಿಂದಾಗಿ ಅಂಥ ಮಾದರಿಯು ಅನುಮೋದನೆಗೆ ಅರ್ಹವಾಗಿದೆಯೆಂದು ಕೇಂದ್ರ ಸರ್ಕಾರಕ್ಕೆ ಮನದಟ್ಟಾದಲ್ಲಿ ತಾನು ಕೊಟ್ಟ ಅನುಮೋದನಾ ಪ್ರಮಾಣಪತ್ರವನು ಹಿಂತೆಗೆದುಕೊಂಡ ಆದೇಶವನ್ನು ತೆರವು ಮಾಡಬಹುದು.

(10) ಈ ಭಾಗವು ಅನ್ವಯಿಸುವ ತೂಕದ ಅಥವಾ ಅಳತೆಯ ಅನುಮೋದಿತ ಮಾದರಿಯ ಯಾವುದೇ ಸಾಮಗ್ರಿಯು ಯಾವುದೇ ಕಾರಣದಿಂದಾಗಿ ಭಾರತದಲ್ಲಿ ದೊರೆಯದಿದ್ದರೆ ಅಂಥ ತೂಕದ ಅಥವಾ ಅಳತೆಯ ತಯಾರಿಕೆಗೆ ಅತ್ಯಂತ ಸೂಕ್ತವಾಗಿದೆಯೆಂದು ತಾನು ಅಭಿಪ್ರಾಯಪಡಬಹುದಾದಂತಹ ಬದಲಿ ಸಾಮಗ್ರಿಯನ್ನು ಬಳಸಿ ಆ ತೂಕದ ಅಥವಾ ಅಳತೆಯ ತಯಾರಿಕೆಯನ್ನು ತಯಾರಕನು ಮುಂದುವರಿಸಬಹುದು. ಆದರೆ ತಯಾರಕನು ಹಾಗೆ ಮಾಡುವಲ್ಲಿ ಅವನು ಅಂಥ ಬದಲಿ ಸಾಮಗ್ರಿಗಳನ್ನು ನಿಯಮಿಸಲಾದ ಪ್ರಾಧಿಕಾರಕ್ಕೆ ಪರೀಕ್ಷೆಗಾಗಿ ಕಳುಹಿಸತಕ್ಕದು.

(11) (10)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಬದಲಿ ಸಾಮಗ್ರಿಯು ಸೂಕ್ತವಾದುದಲ್ಲವೆಂದು ಮತ್ತು ಇದಕ್ಕಿಂತ ಸೂಕ್ತವಾದ ಯಾವುದೇ ಇತರ ಸಾಮಗ್ರಿಯು ಭಾರತದಲ್ಲಿ ದೊರೆಯುತ್ತದೆ ಎಂದು ನಿಯಮಿಸಲಾದ ಪ್ರಾಧಿಕಾರವು ಅಭಿಪ್ರಾಯಪಟ್ಟರೆ ಆ ಪ್ರಾಧಿಕಾರವು ತನ್ನ ನಿರ್ಣಯವನ್ನು ಕೇಂದ್ರ ಸರ್ಕಾರಕ್ಕೆ ಮತ್ತು ತಯಾರಕನಿಗೂ ಸಹ ತಿಳಿಸತಕ್ಕದು ಮತ್ತು ಆ ಮೇಲೆ ಆ ತಯಾರಕನು ನಿಯಮಿಸಲಾದ ಪ್ರಾಧಿಕಾರವು ಮೊದಲು ಅನುಮೋದಿಸಿದ್ದ ಸಾಮಗ್ರಿಯು ಭಾರತದಲ್ಲಿ ದೊರೆಯುವಂತಾಗುವವರೆಗೆ ನಿಯಮಿಸಲಾದ ಪ್ರಾಧಿಕಾರವು ಶಿಫಾರಸು ಮಾಡಿದ ಸಾಮಗ್ರಿಯಲ್ಲದ ಇತರ ಯಾವುದೇ ಸಾಮಗ್ರಿಯಿಂದ ಆ ತೂಕವನ್ನು ಅಥವಾ ಅಳತೆಯನ್ನು ತಯಾರಿಸತಕ್ಕದಲ್ಲ:

ಪರಂತು (10)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಬದಲಿ ಸಾಮಗ್ರಿಯು ಸೂಕ್ತವಾದುದಲ್ಲವೆಂದು ಮತ್ತು ಸೂಕ್ತವಾದ ಇತರ ಯಾವುದೇ ಸಾಮಗ್ರಿಯು ಭಾರತದಲ್ಲಿ ದೊರೆಯುವುದಿಲ್ಲವೆಂದು ನಿಯಮಿಸಲಾದ ಪ್ರಾಧಿಕಾರವು ಅಭಿಪ್ರಾಯಪಟ್ಟಲ್ಲಿ ಸೂಕ್ತವಾದ ಸಾಮಗ್ರಿಯು ಭಾರತದಲ್ಲಿ ದೊರೆಯುವವರೆಗೆ ಆ ಮಾದರಿಯ ಅನುಮೋದನೆಯು ಅಮಾನತ್ತಿನಲ್ಲಿರತಕ್ಕದು.

(12) ಈ ಭಾಗವು ಅನ್ವಯಿಸುವ ಯಾವುದೇ ತೂಕದ ಅಥವಾ ಅಳತೆಯ ಮಾದರಿಯನ್ನು ಅನುಮೋದಿಸಿರುವಲ್ಲಿ ಅಂಥ ತೂಕದ ಅಥವಾ ಅಳತೆಯ ಬೇರೆ ಬೇರೆ ವರ್ಗಗಳ ಮಾದರಿಗಳಿಗೆ ಅನುಮೋದಿತವಾದ ಮಾದರಿಯನ್ನು ಯಾವ ತತ್ವಗಳಿಗೆ ಅನುಸಾರವಾಗಿ ಮತ್ತು ಯಾವ ಸಾಮಗ್ರಿಗಳಿಂದ ತಯಾರಿಸಲಾಗಿದೆಯೋ ಅವೇ ತತ್ವಗಳಿಗೆ ಅನುಸಾರವಾಗಿ ಮತ್ತು ಅವೇ ಸಾಮಗ್ರಿಗಳಿಂದ ಅಂಥ ವರ್ಗಗಳನು ತಯಾರಿಸಿದ್ದರೆ ಯಾವ ಅನುಮೋದನೆಯೂ ಅಗತ್ಯವಿರತಕ್ಕದಲ್ಲ.

37. <u>ತೂಕಗಳನ್ನು ಅಥವಾ ಅಳತೆಗಳನ್ನು ತಯಾರಿಸಲು ಲೈಸೆನ್ಸನ್ನು ಯಾವಾಗ ಕೊಡತಕ್ಕದು.</u>—(1) ಈ ಭಾಗವು ಅನ್ವಯಿಸುವ ಯಾವುದೇ ತೂಕವನ್ನು ಅಥವಾ ಅಳತೆಯನ್ನು ಮಾಡಲು ಅಥವಾ ತಯಾರಿಸಲು ಲೈಸೆನ್ಸನ್ನು ಕೊಡುವ ಮುಂಚೆ, ಅಂಥ ತೂಕದ ಅಥವಾ ಅಳತೆಯ ಮಾದರಿಯ ಅನುಮೋದನಾ ಪ್ರಮಾಣಪತ್ರವನ್ನು 36ನೇ ಪ್ರಕರಣದ ಮೇರೆಗೆ ಕೇಂದ್ರ ಸರ್ಕಾರವು ಕೊಟ್ಟಿದೆ ಎಂಬುದನ್ನು ರಾಜ್ಯ ಸರ್ಕಾರವು ಖಚಿತಪಡಿಸಿಕೊಳ್ಳತಕ್ಕದು.

(2) ಯಾವುದೇ ಮಾದರಿಯ ಯಾವುದೇ ಅನುಮೋದನಾ ಪ್ರಮಾಣ ಪತ್ರವನ್ನು ಕೇಂದ್ರ ಸರ್ಕಾರವು ಹಿಂತೆಗೆದುಕೊಂಡಿರುವಲ್ಲಿ, ಅಂಥ ಮಾದರಿಗೆ ಅನುಸಾರವಾಗಿ ಯಾವುದೇ ತೂಕವನ್ನು ಅಥವಾ ಅಳತೆಯನ್ನು ಮಾಡುವುದಕ್ಕೆ ಅಥವಾ ತಯಾರಿಸುವುದಕ್ಕೆ ರಾಜ್ಯ ಸರ್ಕಾರವು ಕೊಟ್ಟಿರುವ ಲೈಸೆನ್ಸು ಅಮಾನತ್ತಿನಲ್ಲಿರತಕ್ಕದು:

ಪರಂತು ಕೇಂದ್ರ ಸರ್ಕಾರವು ಅಂಥ ಮಾದರಿಯನ್ನು ತರುವಾಯ ಅನುಮೋದಿಸಿದರೆ ಅಂಥ ಅಮಾನತು ತೆರವಾಗತಕ್ಕದು.

38. <u>ತೂಕವು ಅಥವಾ ಅಳತೆಯು ಅನುಮೋದಿತ ಮಾದರಿಯ ನಂಬರು, ಇತ್ಯಾದಿಗಳನ್ನು ಹೊಂದಿರತಕ್ಕದು.</u>—ಈ ಭಾಗವು ಅನ್ವಯಿಸುವ ಮತ್ತು ಯಾವುದಕ್ಕಾಗಿ ಒಂದು ಮಾದರಿಯನ್ನು ಅನುಮೋದಿಸಲಾಗಿದೆಯೋ ಆ ಪ್ರತಿಯೊಂದು ತೂಕದ ಅಥವಾ ಅಳತೆಯ ಮೇಲೆ ಅನುಮೋದಿತ ಮಾದರಿಯ ನಂಬರು ಮತ್ತು ಯಾವುದರ ಮೂಲಕ ಅಥವಾ ಮೇರೆಗೆ ಆ ಮಾದರಿಯನ್ನು ಅನುಮೋದಿಸಲಾಯಿತೋ ಆ ಪ್ರಮಾಣಪತ್ರದ ನಂಬರು ನಿಯಮಿಸಬಹುದಾದಂಥ ರೀತಿಯಲ್ಲಿ ಇರತಕ್ಕದು:

ಪರಂತು ಯಾವುದೇ ತೂಕದ ಅಥವಾ ಅಳತೆಯ ಮೇಲೆ ಅದರ ಗಾತ್ರದ ಅಥವಾ ಸ್ವರೂಪದ ಕಾರಣದಿಂದಾಗಿ ಅಂಥ ಯಾವುವೇ ವಿವರಗಳನ್ನು ನಮೂದಿಸುವುದು ಸಾಧ್ಯವಿಲ್ಲವೆಂದು ಕೇಂದ್ರ ಸರ್ಕಾರವು ಅಭಿಪ್ರಾಯಪಟ್ಟಲ್ಲಿ, ಅಂಥ ತೂಕದ ಅಥವಾ ಅಳತೆಯ ಮೇಲೆ ಅಂಥ ವಿವರಗಳನ್ನು ನಮೂದಿಸುವುದನ್ನು ಆ ಸರ್ಕಾರವು ವಿನಾಯಿತಿಸಬಹುದು.

## ಅಧ್ಯಾಯ–IV

### ಅಂತಾರಾಜ್ಯ ವ್ಯಾಪಾರವನ್ನು ಅಥವಾ ವಾಣಿಜ್ಯವನ್ನು ನಡೆಸುವಾಗ ಮಾರಲು ಅಥವಾ ವಿತರಣೆ ಮಾಡಲು ಉದ್ದೇಶಿಸಲಾದ ಪ್ಯಾಕ್ ಮಾಡಿದ ರೂಪದಲ್ಲಿರುವ ಸರಕುಗಳು

39. ಪ್ಯಾಕ್ ಮಾಡಿದ ರೂಪದಲ್ಲಿರುವ ಸರಕುಗಳ ಪರಿಮಾಣವನ್ನು ಮತ್ತು ಮೂಲವನ್ನು ಘೋಷಿಸತಕ್ಕದು.—(1) ಈ ಭಾಗವು ಅನ್ವಯಿಸುವ ಪ್ಯಾಕ್ ಮಾಡಿರುವ ರೂಪದಲ್ಲಿರುವ ಯಾವುದೇ ಸರಕನ್ನು ನಿಯಮಿಸಲಾದ ರೀತಿಯಲ್ಲಿ ಆ ಪ್ಯಾಕೇಜಿನ ಮೇಲೆ ಅಥವಾ ಅದಕ್ಕೆ ಭದ್ರವಾಗಿ ಅಂಟಿಸಲಾಗಿರುವ ಗುರುತು ಚೀಟಿಯ ಮೇಲೆ

(i) ಪ್ಯಾಕೇಜಿನಲ್ಲಿರುವ ವ್ಯಾಪಾರ ಸರಕಿನ ಪರಿಚಯ;

(ii) ತೂಕದ ಅಥವಾ ಅಳತೆಯ ಮಾನಕ ಘಟಕದಲ್ಲಿ ಆ ಪ್ಯಾಕೇಜಿನಲ್ಲಿರುವ ಸರಕಿನ ನಿವ್ವಳ ಪರಿಮಾಣ;

(iii) ಆ ವ್ಯಾಪಾರ ಸರಕನ್ನು ಎಣಿಕೆ ಮಾಡಿ ಪ್ಯಾಕೇಜು ಮಾಡಿರುವಲ್ಲಿ ಅಥವಾ ಮಾರಾಟ ಮಾಡಿರುವಲ್ಲಿ ಆ ಪ್ಯಾಕೇಜಿನಲ್ಲಿರುವ ಸರಕಿನ ಖಚಿತವಾದ ಸಂಖ್ಯೆ;

(iv) ಪ್ಯಾಕೇಜಿನಲ್ಲಿರುವ ಸರಕಿನ ಘಟಕವಾರು ಮಾರಾಟದ ಬೆಲೆ; ಮತ್ತು

(v) ಪ್ಯಾಕೇಜಿನ ಮಾರಾಟದ ಬೆಲೆ

—ಇವುಗಳ ಬಗ್ಗೆ ಒಂದು ನಿರ್ದಿಷ್ಟವಾದ ಸರಳವಾದ ಮತ್ತು ಎದ್ದು ಕಾಣುವ ಘೋಷಣೆಯು ಇದ್ದ ಹೊರತು ಯಾವ ವ್ಯಕ್ತಿಯೂ ಅದನ್ನು

(ಕ) ಮಾಡತಕ್ಕದಲ್ಲ, ತಯಾರಿಸತಕ್ಕದಲ್ಲ, ಪ್ಯಾಕು ಮಾಡತಕ್ಕದಲ್ಲ, ಮಾರತಕ್ಕದಲ್ಲ ಅಥವಾ ಪ್ಯಾಕು ಮಾಡಿಸತಕ್ಕದಲ್ಲ ಅಥವಾ ಮಾರಾಟ ಮಾಡಿಸತಕ್ಕದಲ್ಲ ಅಥವಾ

(ಖ) ವಿತರಣೆ ಮಾಡತಕ್ಕದಲ್ಲ, ವಶಾವಣೆ ಮಾಡತಕ್ಕದಲ್ಲ ಅಥವಾ ವಿತರಣೆ ಮಾಡಿಸತಕ್ಕದಲ್ಲ ಅಥವಾ ವಶಾವಣೆ ಮಾಡಿಸತಕ್ಕದಲ್ಲ, ಅಥವಾ

(ಗ) ಮಾರಾಟಕ್ಕಾಗಿ ನೀಡತಕ್ಕದಲ್ಲ, ಪ್ರದರ್ಶಿಸತಕ್ಕದಲ್ಲ ಅಥವಾ ಹೊಂದಿರತಕ್ಕದಲ್ಲ.

ವಿವರಣೆ.—ಈ ಉಪಪ್ರಕರಣದಲ್ಲಿ "ಘಟಕವಾರು ಮಾರಾಟದ ಬೆಲೆ" ಎಂಬ ಪದಾವಳಿಗೆ, ನಿಯಮಿಸಬಹುದಾದಂಥ ತೂಕದ, ಅಳತೆಯ ಅಥವಾ ನಂಬರಿನ ಘಟಕಕ್ಕೆ ಅನುಸಾರವಾದ ಬೆಲೆ ಎಂದು ಅರ್ಥ.

(2) ಈ ಭಾಗವು ಅನ್ವಯಿಸುವ ಪ್ರತಿಯೊಂದು ಪ್ಯಾಕೇಜಿನ ಮೇಲೂ ತಯಾರಕನ ಹೆಸರು ಮತ್ತು ಪ್ಯಾಕುಗಾರನ ಅಥವಾ ವಿತರಣೆಗಾರನ ಹೆಸರು ಇರತಕ್ಕದು.

(3) ಈ ಭಾಗವು ಅನ್ವಯಿಸುವ ಸರಕಿನ ಪ್ಯಾಕೇಜಿನ ಮೇಲೆ ಅಥವಾ ಅದರ ಮೇಲಿರುವ ಲೇಬಲ್ಲಿನ ಮೇಲೆ, ಅದರೊಳಗಿರುವ ಸರಕಿನ ಬಳಕೆ ಪ್ರಮಾಣದ ಸಂಖ್ಯೆಯ ಬಗ್ಗೆ ನಿರೂಪಣೆ ಇದ್ದಲ್ಲಿ ಆ ಪ್ಯಾಕೇಜಿನ ಅಥವಾ ಅದರ ಲೇಬಲ್ಲಿನ ಮೇಲೆ ಅಂಥ ಪ್ರತಿಯೊಂದು ಬಳಕೆ ಪ್ರಮಾಣದ ನಿವ್ವಳ ಪರಿಮಾಣ (ತೂಕ, ಅಳತೆ ಅಥವಾ ಸಂಖ್ಯೆಯಲ್ಲಿ)ವನ್ನು ಕುರಿತ ಒಂದು ಹೇಳಿಕೆಯು ಇರತಕ್ಕದು.

(4) ಪ್ಯಾಕೇಜಿನ ಅಥವಾ ಲೇಬಲ್ಲಿನ ಮೇಲಿರುವ ಅದರೊಳಗಿನ ವಸ್ತುವಿನ ನಿವ್ವಳ ತೂಕದ, ಅಳತೆಯ ಅಥವಾ ಸಂಖ್ಯೆಯ ಬಗೆಗಿನ ಆ ತೂಕವನ್ನು ಅಳತೆಯನ್ನು ಅಥವಾ ಸಂಖ್ಯೆಯನ್ನು ಪರಿಮಿತಗೊಳಿಸಲು ಅನುವು ಮಾಡಿಕೊಡುವ ಯಾವುದೇ ಹೇಳಿಕೆಯನ್ನು ಒಳಗೊಂಡಿರತಕ್ಕದಲ್ಲ:

ಪರಂತು ಹವಾಮಾನದ ವ್ಯತ್ಯಾಸಗಳಿಂದಾಗಿ ಯಾವ ಸರಕುಗಳ ತೂಕವು ಅಥವಾ ಅಳತೆಯು ನಿಯಮಿಸಲಾದ ಅನುಮತಿತ ವ್ಯತ್ಯಾಸ ಪರಿಮಿತಿಗಳಿಗಿಂತ ಹೆಚ್ಚಾಗುವ ಅಥವಾ ಕಡಿಮೆಯಾಗುವ ಸಂಭವವಿದೆಯೋ ಆ ಸರಕುಗಳನ್ನು ನಿಯಮಗಳ ಮೂಲಕ ಕೇಂದ್ರ ಸರ್ಕಾರವು ನಿರ್ದಿಷ್ಟಪಡಿಸಬಹುದು ಮತ್ತು ಹಾಗೆ ನಿರ್ದಿಷ್ಟಪಡಿಸಿದ ಸರಕಿನ ತಯಾರಕನು ಅಥವಾ ಪ್ಯಾಕುಗಾರನು ಅಂಥ ಸರಕಿನ ನಿವ್ವಳ ಪರಿಮಾಣದ ಬಗೆಗಿನ ಹೇಳಿಕೆಯನ್ನು 'ಪ್ಯಾಕು ಮಾಡಿದಾಗ' ಎಂಬ ಪದಗಳ ಮೂಲಕ ಪರಿಮಿತಗೊಳಿಸುವುದು ಕಾನೂನುಬದ್ಧವಾಗಿರತಕ್ಕದು.

ವಿವರಣೆ.—(4)ನೇ ಉಪಪ್ರಕರಣದ ಪರಂತುಕವು ಅನ್ವಯಿಸುವ ಯಾವುದೇ ಸಂದರ್ಭವನ್ನು ಹೊರತುಪಡಿಸಿ ಇತರ ಯಾವುದೇ ಸಂದರ್ಭದಲ್ಲಿ 'ಪ್ಯಾಕು ಮಾಡಿದಾಗ' ಎಂಬ ಪದಗಳನ್ನು ಬಳಸತಕ್ಕದಲ್ಲ.

(5) ಯಾವುದೇ ಸರಕನ್ನು ಅಥವಾ ಯುಕ್ತವಾಗಿ ಹೋಲಿಸಬಹುದಾದ ಸರಕುಗಳನ್ನು ಮಾರಾಟಕ್ಕಾಗಿ, ವಿತರಣೆಗಾಗಿ, ಅಥವಾ ವಶಾವಣೆಗಾಗಿ ಯಾವ ತೂಕದಲ್ಲಿ ಅಳತೆಯಲ್ಲಿ ಅಥವಾ ಸಂಖ್ಯೆಯಲ್ಲಿ ಪ್ಯಾಕು ಮಾಡಲಾಗುತ್ತಿದೆಯೋ ಆ ತೂಕದಲ್ಲಿ, ಅಳತೆಯಲ್ಲಿ ಅಥವಾ ಸಂಖ್ಯೆಯಲ್ಲಿ ಅಮಿತವಾದ ಹೆಚ್ಚಳವುಂಟಾಗಿದೆಯೆಂದು ನಂಬಲು ಕೇಂದ್ರ ಸರ್ಕಾರಕ್ಕೆ ಕಾರಣವಿರುವಲ್ಲಿ ಮತ್ತು ಆ ಅಮಿತ ಹೆಚ್ಚಳವು ಅಂಥ ಸರಕಿನ ನಿವ್ವಳ ಪರಿಮಾಣವನ್ನು ಅಥವಾ ಸಂಖ್ಯೆಯನ್ನು ಪರ್ಯಾಲೋಚಿಸಿದ ಅನಂತರ ಬೆಲೆಗಳ ತೌಲನಿಕ ಮೌಲ್ಯ ನಿರ್ಧಾರವನ್ನು ಮಾಡುವ ಗ್ರಾಹಕನ ವಿವೇಚನಾ ಸಾಮರ್ಥ್ಯಕ್ಕೆ ಧಕ್ಕೆ ಉಂಟುಮಾಡುವುದೆಂದು ಆ ಸರ್ಕಾರವು ಅಭಿಪ್ರಾಯಪಟ್ಟಲ್ಲಿ ನಿಯಮಿಸಬಹುದಾದಂಥ ಮಾನಕ ಪರಿಮಾಣಗಳಲ್ಲಿ ಅಥವಾ ಸಂಖ್ಯೆಗಳಲ್ಲಿ ಅಂಥ ಸರಕನ್ನು ಮಾರಬೇಕೆಂದು, ವಿತರಣೆ ಮಾಡಬೇಕೆಂದು ಅಥವಾ ವಶಾವಣೆ ಮಾಡಬೇಕೆಂದು ತಯಾರಕರಿಗೆ ಮತ್ತು ಪ್ಯಾಕುಗಾರರಿಗೆ ಅಥವಾ ವಿತರಣೆಗಾರರಿಗೆ ಸಹ ಆ ಸರ್ಕಾರವು ನಿರ್ದೇಶಿಸಬಹುದು.

(6) ಈ ಅಧ್ಯಾಯವು ಅನ್ವಯಿಸುವ ಪ್ಯಾಕ್ ಮಾಡಿದ ರೂಪದಲ್ಲಿರುವ ಸರಕಿನ ಚಿಲ್ಲರೆ ಬೆಲೆಯನ್ನು ಯಾವುದೇ ಜಾಹೀರಾತಿನಲ್ಲಿ ಹೇಳಿದಾಗಲೆಲ್ಲ ಆ ಪ್ಯಾಕೇಜ್‌ನಲ್ಲಿ ಇರುವ ಆ ಸರಕಿನ ನಿವ್ವಳ ಪರಿಮಾಣದ ಅಥವಾ ಸಂಖ್ಯೆಯ ಮತ್ತು ಅದರ ಘಟಕವಾರು ಚಿಲ್ಲರೆ ಮಾರಾಟ ಬೆಲೆಯ ಬಗೆಗಿನ ಗಮನ ಸೆಳೆಯುವ ಒಂದು ಘೋಷಣೆಯು ಆ ಜಾಹೀರಾತಿನಲ್ಲಿ ಇರತಕ್ಕದು.

(7) ಸರಕನ್ನು ಒಳಗೊಂಡಿರುವ ಪ್ಯಾಕೇಜನ್ನು ಅಂಥ ಪ್ಯಾಕೇಜಿನ ನಿಯಮಿಸಲಾದ ಧಾರಣ ಸಾಮರ್ಥ್ಯಕ್ಕಿಂತ ಕಡಿಮೆ ತುಂಬಿ ಆ ಪ್ಯಾಕೇಜನ್ನು

(ಕ) ಅಂಥ ಪ್ಯಾಕೇಜಿನೊಳಗಿರುವುದಕ್ಕೆ ರಕ್ಷಣೆಯನ್ನು ಒದಗಿಸುವ, ಅಥವಾ

(ಖ) ಆ ಪ್ಯಾಕೇಜಿನಲ್ಲಿರುವುದನ್ನು ಹಾಗೆ ತುಂಬಲು ಬಳಸಲಾದ ಯಂತ್ರದ ಅಗತ್ಯತೆಗಳನ್ನು ಪೂರೈಸುವ;

—ದೃಷ್ಟಿಯಿಂದ ಹಾಗೆ ತುಂಬಲಾಗಿದೆ ಎಂದು ಆ ವ್ಯಕ್ತಿಯು ರುಜುವಾತುಪಡಿಸಿದ ಹೊರತು ಆ ಯಾವನೇ ವ್ಯಕ್ತಿಯು ಮಾರತಕ್ಕದಲ್ಲ, ಮಾರಾಟಕ್ಕಾಗಿ ವಿತರಣೆ ಮಾಡತಕ್ಕದಲ್ಲ ಅಥವಾ ವಶಾವಣೆ ಮಾಡತಕ್ಕದಲ್ಲ.

(8) ಪ್ಯಾಕು ಮಾಡುವ ವಿಧಾನದಿಂದಾಗಿ ಅಥವಾ ಅಂಥ ಸರಕನ್ನು ವ್ಯಾಪಾರದಲ್ಲಿ ಅಥವಾ ವಾಣಿಜ್ಯದಲ್ಲಿ ತೊಡಗಿಸಿದ ಅನಂತರ ಅದನ್ನು ಸಾಮಾನ್ಯವಾಗಿ ತೆರೆದಿಡುವುದರಿಂದಾಗಿ ಆ ಪ್ಯಾಕೇಜಿನಲ್ಲಿರುವ ಸರಕಿನ ನಿವ್ವಳ ಪರಿಮಾಣದಲ್ಲಿ ಉಂಟಾಗಬಹುದಾದಂಥ ಯುಕ್ತ ವ್ಯತ್ಯಾಸಗಳನ್ನು ಕೇಂದ್ರ ಸರ್ಕಾರವು ನಿಯಮಗಳ ಮೂಲಕ ನಿರ್ದಿಷ್ಟಪಡಿಸಬಹುದು.

(9) ಈ ಪ್ರಕರಣದ ಎಲ್ಲ ಅಥವಾ ಯಾವುವೇ ಉಪಬಂಧಗಳು ಯಾವ ಸರಕುಗಳ ಅಥವಾ ಪ್ಯಾಕೇಜುಗಳ ವರ್ಗಗಳ ಸಂಬಂಧದಲ್ಲಿ ಅನ್ವಯಿಸತಕ್ಕದಲ್ಲವೋ ಅಥವಾ ಅದರಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಅಪವಾದಗಳೊಂದಿಗೆ ಅಥವಾ ಮಾರ್ಪಾಡುಗಳೊಂದಿಗೆ ಅನ್ವಯಿಸತಕ್ಕದೋ ಅವುಗಳನ್ನು ಕೇಂದ್ರ ಸರ್ಕಾರವು ನಿಯಮಗಳ ಮೂಲಕ ನಿರ್ದಿಷ್ಟಪಡಿಸಬಹುದು.

## ಅಧ್ಯಾಯ—V

### ಒಂದು ರಾಜ್ಯದಿಂದ ಇನ್ನೊಂದಕ್ಕೆ ಕಳುಹಿಸಿಕೊಡಲಾದ ತೂಕಗಳನ್ನು ಮತ್ತು ಅಳತೆಗಳನ್ನು ಸತ್ಯಾಪನೆ ಮಾಡುವುದು ಮತ್ತು ಅವುಗಳಿಗೆ ಮುದ್ರೆ ಒತ್ತುವುದು

40. ಪರಿಭಾಷೆಗಳು.—ಈ ಅಧ್ಯಾಯದಲ್ಲಿ ಸಂದರ್ಭಕ್ಕೆ ಬೇರೆ ಅರ್ಥದ ಅಗತ್ಯವಿರದಿದ್ದರೆ.—

(ಕ) 'ನಿಯಂತ್ರಕ' ಎಂದರೆ ರಾಜ್ಯ ಕಾನೂನಿನ ಮೇರೆಗೆ ರಾಜ್ಯ ಸರ್ಕಾರದಿಂದ ಹಾಗೆಂದು ನೇಮಿತನಾದ ವ್ಯಕ್ತಿ;

(ಖ) 'ಪರಿಶೀಲಕ' ಎಂದರೆ ರಾಜ್ಯ ಕಾನೂನಿನ ಮೇರೆಗೆ ರಾಜ್ಯ ಸರ್ಕಾರದಿಂದ ಹಾಗೆಂದು ನೇಮಿತನಾದ ವ್ಯಕ್ತಿ;

(ಗ) 'ಸ್ಥಳೀಯ ಪರಿಶೀಲಕ' ಎಂದರೆ ಯಾರ ಅಧಿಕಾರ ವ್ಯಾಪ್ತಿಯ ಸ್ಥಳೀಯ ಮಿತಿಗಳೊಳಗೆ ಯಾವುದೇ ತೂಕವನ್ನು ಅಥವಾ ಅಳತೆಯನ್ನು ಮಾಡಲಾಗಿದೆಯೋ, ತಯಾರು ಮಾಡಲಾಗಿದೆಯೋ, ಪಡೆಯಲಾಗಿದೆಯೋ, ವಶಾವಣೆ ಮಾಡಲಾಗಿದೆಯೋ ಅಥವಾ ಮಾರಾಟಕ್ಕಾಗಿ ಇಲ್ಲವೆ ಬಳಕೆಗಾಗಿ ಇಡಲಾಗಿದೆಯೋ ಆ ಪರಿಶೀಲಕ.

(ಘ) 'ರಾಜ್ಯ ಕಾನೂನು' ಎಂದರೆ ರಾಜ್ಯ ವಿಧಾನ ಮಂಡಲದಿಂದ ಅಧಿನಿಯಮಿತವಾದ ಮತ್ತು ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ನಿಗದಿಪಡಿಸಲಾದ ತೂಕದ ಅಥವಾ ಅಳತೆಯ ನಿರ್ದಿಷ್ಟಮಾನಕಗಳನ್ನು ಜಾರಿಗೆ ತರುವುದರ ಬಗ್ಗೆ ಆ ರಾಜ್ಯದಲ್ಲಿ ತತ್ಕಾಲದಲ್ಲಿ ಜಾರಿಯಲ್ಲಿರುವ ಕಾನೂನು.

(ಙ) "ವರ್ಗಾವಣೆಧಾರಕ ರಾಜ್ಯ" ಎಂದರೆ ಇತರ ಯಾವುದೇ ರಾಜ್ಯದಿಂದ ತನ್ನಲ್ಲಿ ಮಾರಾಟಕ್ಕಾಗಿ ಅಥವಾ ಬಳಸುವುದಕ್ಕಾಗಿ ಯಾವುದೇ ತೂಕವನ್ನು ಅಥವಾ ಅಳತೆಯನ್ನು ವಶಾವಣೆ ಪಡೆದ ಅಥವಾ ಸ್ವೀಕರಿಸಿದ ರಾಜ್ಯ;

(ಚ) 'ವರ್ಗಾವಣೆಕಾರ ರಾಜ್ಯ' ಎಂದರೆ ತನ್ನಲ್ಲಿ ಮಾಡಿದ ಅಥವಾ ತಯಾರಿಸಿದ ಅಥವಾ ಮಾರಾಟಕ್ಕಾಗಿ ಅಥವಾ ಬಳಸುವುದಕ್ಕಾಗಿ ತನ್ನಲ್ಲಿ ಇಟ್ಟ ಯಾವುದೇ ತೂಕವನ್ನು ಅಥವಾ ಅಳತೆಯನ್ನು ಇತರ ಯಾವುದೇ ರಾಜ್ಯಕ್ಕೆ ಕಳುಹಿಸಿದ ಅಥವಾ ವಶಾವಣೆ ಮಾಡಿದ ರಾಜ್ಯ.

41. ಒಂದು ರಾಜ್ಯದಿಂದ ಇನ್ನೊಂದಕ್ಕೆ ಕಳುಹಿಸಲಾದ ತೂಕಗಳನ್ನು ಮತ್ತು ಅಳತೆಗಳನ್ನು ಸತ್ಯಾಪನೆ ಮಾಡುವುದು ಮತ್ತು ಮುದ್ರೆ ಒತ್ತುವುದು.—(1) ವರ್ಗಾವಣೆಕಾರ ರಾಜ್ಯದಿಂದ ವರ್ಗಾವಣೆಧಾರಕ ರಾಜ್ಯಕ್ಕೆ ವಶಾವಣೆಗಾಗಿ, ಮಾರಾಟಕ್ಕಾಗಿ ಅಥವಾ ಬಳಕೆಗಾಗಿ ಕಳುಹಿಸಲಾದ ಯಾವುದೇ ತೂಕವು ಅಥವಾ ಅಳತೆಯು—

(ಕ) ವರ್ಗಾವಣೆಧಾರಕ ರಾಜ್ಯಕ್ಕೆ ಅದನ್ನು ರವಾನಿಸುವ ಮುಂಚೆ ಅದನ್ನು ಬಿಚ್ಚಿ ಕಳುಹಿಸುವ ಅಗತ್ಯವಿರದಿದ್ದಲ್ಲಿ ಮತ್ತು ಹಾಗೆ ರವಾನಿಸಿದ ಕಾರಣದಿಂದಾಗಿ ಅದು ತನ್ನ ನಿಷ್ಕೃಷ್ಟತೆಯನ್ನು ಕಳೆದುಕೊಳ್ಳುವ ಸಂಭವವಿರದಿದ್ದಲ್ಲಿ ಈ ಅಧ್ಯಾಯದ ಉದ್ದೇಶಗಳಿಗಾಗಿ ಅದನ್ನು ಒಂದನೆಯ ಪ್ರವರ್ಗದ ತೂಕವೆಂದು ಅಥವಾ ಅಳತೆಯೆಂದು ತಿಳಿಯತಕ್ಕದ್ದು;

(ಖ) ವರ್ಗಾವಣೆಧಾರಕ ರಾಜ್ಯಕ್ಕೆ ಅದನ್ನು ರವಾನಿಸುವ ಮುಂಚೆ ಅದನ್ನು ಬಿಚ್ಚಿ ಕಳುಹಿಸುವ ಮತ್ತು ವರ್ಗಾವಣೆಧಾರಕ ರಾಜ್ಯದಲ್ಲಿ ಬಳಸಲು ಅದನ್ನು ಪುನಃ ಜೋಡಿಸುವ ಹಾಗೂ ಪ್ರತಿಷ್ಠಾಪಿಸುವ ಅಗತ್ಯವಿದ್ದಲ್ಲಿ ಈ ಅಧ್ಯಾಯದ ಉದ್ದೇಶಗಳಿಗಳಿಗಾಗಿ ಅದನ್ನು ಎರಡನೇ ಪ್ರವರ್ಗದ ತೂಕವೆಂದು ಅಥವಾ ಅಳತೆಯೆಂದು ತಿಳಿಯತಕ್ಕದ್ದು.

(2) (1)ನೇ ಉಪಪ್ರಕರಣದ ಉಪಬಂಧಗಳಿಗೆ ಒಳಪಟ್ಟು ಮೊದಲನೇ ಪ್ರವರ್ಗಕ್ಕೆ ಅಥವಾ ಎರಡನೇ ಪ್ರವರ್ಗಕ್ಕೆ ಸೇರುವ ತೂಕಗಳ ಅಥವಾ ಅಳತೆಗಳ ವರ್ಗಗಳನ್ನು ಈ ಬಗ್ಗೆ ರಚಿಸಿದ ನಿಯಮಗಳ ಮೂಲಕ ಕೇಂದ್ರ ಸರ್ಕಾರವು ನಿರ್ದಿಷ್ಟಪಡಿಸಬಹುದು ಮತ್ತು ಸನ್ನಿವೇಶಗಳು ಹಾಗೆ ಅಗತ್ಯಪಡಿಸಿದರೆ ಯಾವುದೇ ತೂಕದ ಅಥವಾ ಅಳತೆಯ ವರ್ಗವನ್ನು ಯಾವ ಪ್ರವರ್ಗದಲ್ಲಿ ನಿರ್ದಿಷ್ಟಪಡಿಸಲಾಗಿದೆಯೋ ಆ ಪ್ರವರ್ಗವನ್ನು ಕಾಲ ಕಾಲಕ್ಕೆ ವ್ಯತ್ಯಾಸಗೊಳಿಸಬಹುದು.

(3) ಮೊದಲನೇ ಪ್ರವರ್ಗದ ತೂಕವನ್ನು ಅಥವಾ ಅಳತೆಯನ್ನು ಯಾವುದೇ ವರ್ಗಾವಣೆಧಾರಕ ರಾಜ್ಯಕ್ಕೆ ರವಾನಿಸುವ ಮುಂಚೆ ವರ್ಗಾವಣೆಕಾರ ರಾಜ್ಯದ ಸ್ಥಳೀಯ ಪರಿಶೀಲಕನ ಮುಂದೆ ಹಾಜರುಪಡಿಸತಕ್ಕದ್ದು ಮತ್ತು ಅಂಥ ತೂಕವನ್ನು ಅಥವಾ ಅಳತೆಯನ್ನು ಸತ್ಯಾಪನೆ ಮಾಡಿದ ಮೇಲೆ ಆ ತೂಕವು ಅಥವಾ ಅಳತೆಯು ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ನಿಗದಿಪಡಿಸಲಾದ ಮಾನಕಗಳಿಗೆ ಅನುಗುಣವಾಗಿದೆ ಎಂದು ಆ ಪರಿಶೀಲಕನಿಗೆ ಮನದಟ್ಟಾದರೆ ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ವಿಶೇಷ ಮೊಹರಿನಿಂದ ಅದಕ್ಕೆ ಮುದ್ರೆ ಒತ್ತತಕ್ಕದ್ದು.

(4) ಎರಡನೇ ಪ್ರವರ್ಗದ ತೂಕವನ್ನು ಅಥವಾ ಅಳತೆಯನ್ನು ವರ್ಗಾವಣೆಕಾರ ರಾಜ್ಯದಲ್ಲಿ ಸತ್ಯಾಪನೆ ಮಾಡತಕ್ಕದ್ದಲ್ಲ ಮತ್ತು ಮುದ್ರೆ ಹಾಕತಕ್ಕದ್ದಲ್ಲ ಆದರೆ ಅದನ್ನು ಬಳಸುವುದಕ್ಕಾಗಿ ಜೋಡಿಸಿದ ಹಾಗೂ ಪ್ರತಿಷ್ಠಾಪಿಸಿದ ಅನಂತರ ವರ್ಗಾವಣೆಧಾರಕ ರಾಜ್ಯದ ಸ್ಥಳೀಯ ಪರಿಶೀಲಕನು ಸತ್ಯಾಪನೆ ಮಾಡತಕ್ಕದ್ದು ಮತ್ತು ಮುದ್ರೆ ಒತ್ತತಕ್ಕದ್ದು.

(5) (ಕ) ಮೊದಲನೇ ಪ್ರವರ್ಗದ ಪ್ರತಿಯೊಂದು ತೂಕವನ್ನು ಅಥವಾ ಅಳತೆಯನ್ನೂ ಸತ್ಯಾಪನೆ ಮಾಡುವ ಮತ್ತು ಮುದ್ರೆಯೊತ್ತುವ ಬಗೆಗಿನ ಫೀಜನ್ನು ವರ್ಗಾವಣೆಕಾರ ರಾಜ್ಯವು;

(ಖ) ಎರಡನೇ ಪ್ರವರ್ಗದ ಪ್ರತಿಯೊಂದು ತೂಕವನ್ನು ಅಥವಾ ಅಳತೆಯನ್ನು ಸತ್ಯಾಪನೆ ಮಾಡುವ ಮತ್ತು ಮುದ್ರೆಯೊತ್ತುವ ಬಗೆಗಿನ ಫೀಜನ್ನು ವರ್ಗಾವಣೆಧಾರಕ ರಾಜ್ಯವು;

—ಈ ಅಧಿನಿಯಮದ ಮೇರೆಗೆ ರಚಿಸಲಾದ ನಿಯಮಗಳ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ದರಗಳನ್ನು ವಿಧಿಸತಕ್ಕದ್ದು ಮತ್ತು ವಸೂಲು ಮಾಡತಕ್ಕದ್ದು.

(6) ಯಾವುದೇ ತೂಕವನ್ನು ಅಥವಾ ಅಳತೆಯನ್ನು ಅದು ಮೊದಲನೇ ಪ್ರವರ್ಗದ್ದಾಗಿರಲಿ ಅಥವಾ ಎರಡನೇ ಪ್ರವರ್ಗದ್ದಾಗಿರಲಿ ಕೇವಲ ಮನೆ ಬಳಕೆಗೆಂದು ಮಾತ್ರ ಉದ್ದೇಶಿಸಿದ್ದರೆ ಮತ್ತು ವೈದ್ಯಕೀಯ ವೃತ್ತಿಯ ಯಾವನೇ ವ್ಯಕ್ತಿಯು ಅಂಥ ವೃತ್ತಿಯನ್ನು ನಡೆಸುವಲ್ಲಿ ಅದನ್ನು ಬಳಸದಿದ್ದರೆ ಅದನ್ನು ನಿಯತಕಾಲಿಕವಾಗಿ ಮತ್ತೆ ಮತ್ತೆ ಸತ್ಯಾಪನೆ ಮಾಡಿಸುವ ಅಗತ್ಯವಿರತಕ್ಕದ್ದಲ್ಲ.

(7) ಯಾವ ತೂಕವನ್ನೂ ಅಥವಾ ಅಳತೆಯನ್ನೂ ಅದು ಮೊದಲನೇ ಪ್ರವರ್ಗದ್ದಿರಲಿ ಅಥವಾ ಎರಡನೇ ಪ್ರವರ್ಗದ್ದಿರಲಿ ಸತ್ಯಾಪನೆ ಮಾಡುವ ಮತ್ತು ಮುದ್ರೆ ಒತ್ತುವ ಬಗ್ಗೆ (5)ನೇ ಉಪಪ್ರಕರಣದ ಮೇರೆಗೆ ನಿರ್ದಿಷ್ಟಪಡಿಸಲಾದ ದರಗಳಿಗೆ ಅನುಸಾರವಾಗಿ ಫೀಜನ್ನು ಸಂದಾಯ ಮಾಡಿದ ಹೊರತು ಸತ್ಯಾಪನೆ ಮಾಡತಕ್ಕದ್ದಲ್ಲ ಮತ್ತು ಮುದ್ರೆಯೊತ್ತತಕ್ಕದ್ದಲ್ಲ.

42. ಮೊದಲನೇ ಪ್ರವರ್ಗದ ತೂಕವು ಅಥವಾ ಅಳತೆಯು ಭಾರತದ ರಾಜ್ಯ ಕ್ಷೇತ್ರದಾದ್ಯಂತ ಸರಿಯಾಗಿದೆಯೆಂದು ಪೂರ್ವಭಾವನೆ ಮಾಡತಕ್ಕುದು.—(1) 41ನೇ ಪ್ರಕರಣದ (3)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾಗಿರುವ ವಿಶೇಷ ಮೊಹರಿನಿಂದ ಮುದ್ರೆ ಒತ್ತಲಾದ ಮೊದಲನೇ ಪ್ರವರ್ಗದ ತೂಕವು ಅಥವಾ ಅಳತೆಯು ಭಾರತ ರಾಜ್ಯ ಕ್ಷೇತ್ರದಾದ್ಯಂತ ಸರಿಯಾಗಿದೆಯೆಂದು ಪೂರ್ವಭಾವನೆ ಮಾಡತಕ್ಕುದು ಮತ್ತು ಕಾಲಕ್ರಮದಲ್ಲಿ ವರ್ಗಾವಣೆಧಾರಕ ರಾಜ್ಯದಲ್ಲಿ ಅದನ್ನು ಮತ್ತೆ ಸತ್ಯಾಪನೆ ಮಾಡುವವರೆಗೆ ಅದನ್ನು ವರ್ಗಾವಣೆಧಾರಕ ರಾಜ್ಯದಲ್ಲಿ ಸತ್ಯಾಪನೆ ಮಾಡುವ ಅಥವಾ ಮುದ್ರೆ ಒತ್ತುವ ಅಗತ್ಯವಿರತಕ್ಕುದಲ್ಲ;

ಪರಂತು ಮೊದಲನೇ ಪ್ರವರ್ಗದ ಯಾವುದೇ ತೂಕವು ಅಥವಾ ಅಳತೆಯು ಸಾಗಣೆಯ ಕಾಲದಲ್ಲಿ ತನ್ನ ನಿಷ್ಕೃಷ್ಟತೆಯನ್ನು ಕಳೆದುಕೊಂಡಿದೆಯೆಂದು ಅಥವಾ ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ನಿಗದಿಪಡಿಸಲಾದ ತೂಕದ ಅಥವಾ ಅಳತೆಯ ಮಾನಕಗಳಿಗೆ ಅನುಗುಣವಾಗಿರುವುದು ಯಾವುದೇ ಕಾರಣದಿಂದಾಗಿ ಕೊನೆಗೊಂಡಿದೆಯೆಂದು ನಂಬಲು ವರ್ಗಾವಣೆಧಾರಕ ರಾಜ್ಯದ ಸ್ಥಳೀಯ ಪರಿಶೀಲಕನಿಗೆ ಯಾವುದೇ ಕಾರಣವಿದ್ದಲ್ಲಿ ತಾನು ಬರಹದಲ್ಲಿ ಅಭಿಲೇಖಿಸಬೇಕಾದ ಮತ್ತು ವರ್ಗಾವಣೆಧಾರಕ ರಾಜ್ಯದ ನಿಯಂತ್ರಕನ ಮೂಲಕ ವರ್ಗಾವಣೆಕಾರ ರಾಜ್ಯದ ನಿಯಂತ್ರಕನಿಗೆ ತಿಳಿಸಬೇಕಾದ ಕಾರಣಗಳಿಗಾಗಿ,—

(ಕ) ಅಂಥ ತೂಕವನ್ನು ಅಥವಾ ಅಳತೆಯನ್ನು ಸತ್ಯಾಪನೆ ಮಾಡಬಹುದು.

(ಖ) ಹಾಗೆ ಸತ್ಯಾಪನೆ ಮಾಡಿದ ಮೇಲೆ ಅಂಥ ತೂಕವು ಅಥವಾ ಅಳತೆಯು ನಿಷ್ಕೃಷ್ಟವಾಗಿಲ್ಲವೆಂದು ಕಂಡು ಬಂದರೆ—

(i) ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ನಿಗದಿಪಡಿಸಲಾದ ಮಾನಕಗಳಿಗೆ ಅದು ಅನುಗುಣವಾಗುವಂತೆ ಮಾಡಲು ಅವಶ್ಯವಾದಂಥ ಹೊಂದಾಣಿಕೆಯನ್ನು ಮಾಡಿಸಬಹುದು; ಅಥವಾ

(ii) ಅಂಥ ಹೊಂದಾಣಿಕೆಯು ಸಾಧ್ಯವಿಲ್ಲವೆಂದು ಅವನು ಅಭಿಪ್ರಾಯಪಟ್ಟಲ್ಲಿ ಅದನ್ನು ತಿರಸ್ಕರಿಸಬಹುದು ಮತ್ತು ಅದರ ಮೇಲಿನ ಮುದ್ರೆಯನ್ನು ಅಳಿಸಿಹಾಕಬಹುದು:

ಮತ್ತೂ ಪರಂತು ಮೇಲಿನ ಪರಂತುಕದ ಮೂಲಕ ಪ್ರದತ್ತವಾಗಿರುವ ಅಧಿಕಾರಗಳನ್ನು ಚಲಾಯಿಸಿ ಸತ್ಯಾಪನೆ ಮಾಡಿದ್ದರೆ, ಹೊಂದಾಣಿಕೆ ಮಾಡಿದ್ದರೆ ಅಥವಾ ಅಳಿಸಿ ಹಾಕಿದರೆ ಹಾಗೆ ಸತ್ಯಾಪನೆ ಮಾಡಿದ್ದಕಾಗಿ ಹೊಂದಾಣಿಕೆ ಮಾಡಿದ್ದಕ್ಕಾಗಿ, ಅಥವಾ ಅಳಿಸಿ ಹಾಕಿದ್ದಕ್ಕಾಗಿ ಯಾವ ಫೀಜನ್ನೂ ವಿಧಿಸತಕ್ಕುದಲ್ಲ.

(2) ಮೊದಲನೇ ಪ್ರವರ್ಗದ ತೂಕವನ್ನು ಅಥವಾ ಅಳತೆಯನ್ನು ವರ್ಗಾವಣೆಧಾರಕ ರಾಜ್ಯದಲ್ಲಿ ಮತ್ತೆ ಸತ್ಯಾಪನೆ ಮಾಡಬೇಕಾದ ಕಾಲವು ಯಾವಾಗ ಬರುತ್ತದೆ ಎಂಬುದನ್ನು ಲೆಕ್ಕಹಾಕುವಾಗ ಆ ತೂಕವು ಅಥವಾ ಅಳತೆಯು ವರ್ಗಾವಣೆಧಾರಕ ರಾಜ್ಯದಲ್ಲಿ ಯಾವ ಅವಧಿಯಲ್ಲಿ ಮಾರಾಟವಾಗದೇ ಅಥವಾ ವಿತರಣೆಯಾಗದೆ ಉಳಿದಿದ್ದಿತೋ ಆ ಅವಧಿಯನ್ನು ಬಿಟ್ಟುಬಿಡತಕ್ಕುದು.

43. ಮೊದಲನೇ ಪ್ರವರ್ಗದ ತೂಕಕ್ಕೆ ಅಥವಾ ಅಳತೆಗೆ ವರ್ಗಾವಣೆಕಾರ ರಾಜ್ಯದಲ್ಲಿ ಮುದ್ರೆ ಒತ್ತಿದ್ದ ಹೊರತು ಯಾವುದೇ ರಾಜ್ಯದಲ್ಲಿ ಅದನ್ನು ಮಾರತಕ್ಕುದಲ್ಲ ಅಥವಾ ಬಳಸತಕ್ಕುದಲ್ಲ.—ಮೊದಲನೇ ಪ್ರವರ್ಗದ ಯಾವುದೇ ತೂಕದ ಅಥವಾ ಅಳತೆಯ ಮೇಲೆ 41ನೇ ಪ್ರಕರಣದ (3)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ವಿಶೇಷ ಮೊಹರಿನಿಂದ ಹಾಕಿದ ಮುದ್ರೆಯು ಇದ್ದ ಹೊರತು ಅಂಥ ತೂಕವನ್ನು ಅಥವಾ ಅಳತೆಯನ್ನು ಯಾವುದೇ ವರ್ಗಾವಣೆಧಾರಕ ರಾಜ್ಯದಲ್ಲಿ ಬಳಸತಕ್ಕುದಲ್ಲ, ಮಾರತಕ್ಕುದಲ್ಲ, ಖರೀದಿ ಮಾಡತಕ್ಕುದಲ್ಲ, ವಶಾವಣೆ ಮಾಡತಕ್ಕುದಲ್ಲ ಅಥವಾ ಇನ್ನಾವುದೇ ರೀತಿಯಲ್ಲಿ ವರ್ಗಾಯಿಸತಕ್ಕುದಲ್ಲ.

44. ವರ್ಗಾವಣೆಕಾರ ರಾಜ್ಯದಿಂದ ಪಡೆದ ಎರಡನೇ ಪ್ರವರ್ಗದ ತೂಕಗಳನ್ನು ಅಥವಾ ಅಳತೆಗಳನ್ನು ವರ್ಗಾವಣೆಧಾರಕ ರಾಜ್ಯದ ಸ್ಥಳೀಯ ಪರಿಶೀಲಕನ ಮುಂದೆ ಹಾಜರುಪಡಿಸತಕ್ಕುದು.—(1) ಎರಡನೇ ಪ್ರವರ್ಗದ ತೂಕವನ್ನು ಅಥವಾ ಅಳತೆಯನ್ನು ಮಾರುವುದಕ್ಕಾಗಿ ಅಥವಾ ಬಳಸುವುದಕ್ಕಾಗಿ ಸ್ವೀಕರಿಸುವ ಅಥವಾ ವಶಾವಣೆ ಮಾಡುವ ವರ್ಗಾವಣೆಧಾರಕ ರಾಜ್ಯದ ಪ್ರತಿಯೊಬ್ಬ ವ್ಯಕ್ತಿಯು ಅದನ್ನು ಉಪಯೋಗಿಸುವುದಕ್ಕಾಗಿ ಪುನ: ಜೋಡಿಸಿ ಪ್ರತಿಷ್ಠಾಪಿಸಿದ ಮೇಲೆ ಅಂಥ ತೂಕವನ್ನು ಅಥವಾ ಅಳತೆಯನ್ನು ಆ ವರ್ಗಾವಣೆಧಾರಕ ರಾಜ್ಯದ ಸ್ಥಳೀಯ ಪರಿಶೀಲಕನಿಂದ ಸತ್ಯಾಪನೆ ಮಾಡಿಸತಕ್ಕುದು ಮತ್ತು ಅದಕ್ಕೆ ಮುದ್ರೆ ಒತ್ತಿಸತಕ್ಕುದು.

(2) ವರ್ಗಾವಣೆಧಾರಕ ರಾಜ್ಯದ ಸ್ಥಳೀಯ ಪರಿಶೀಲಕನು ಎರಡನೇ ಪ್ರವರ್ಗದ ಪ್ರತಿಯೊಂದು ತೂಕವನ್ನು ಅಥವಾ ಅಳತೆಯನ್ನು ಸತ್ಯಾಪನೆ ಮಾಡತಕ್ಕುದು ಮತ್ತು ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ನಿಗದಿಪಡಿಸಲಾದ ಮಾಪಕಗಳಿಗೆ ಆ ತೂಕವು ಅಥವಾ ಅಳತೆಯು ಅನುಗುಣವಾಗಿದೆಯೆಂದು ತನಗೆ ಮನದಟ್ಟಾದರೆ ಅವನು ವರ್ಗಾವಣೆಧಾರಕ ರಾಜ್ಯದಲ್ಲಿ ಜಾರಿಯಲ್ಲಿರುವ ರಾಜ್ಯ ಕಾನೂನಿನ ಮೂಲಕ ಅಥವಾ ನಿಯಮಿಸಲಾದ ಮೊಹರಿನಿಂದ ಅದಕ್ಕೆ ಮುದ್ರೆ ಒತ್ತತಕ್ಕುದು.

(3) ಸಂದೇಹ ನಿವಾರಣೆಗಾಗಿ ಎರಡನೇ ಪ್ರವರ್ಗದ ಯಾವುದೇ ತೂಕವನ್ನು ಅಥವಾ ಅಳತೆಯನ್ನು ಮಾರುವ ಅಥವಾ ಬಳಸುವ ಉದ್ದೇಶಕ್ಕಾಗಿ ಅಲ್ಲದ ಯಾವುದೇ ಇನ್ನೊಂದು ರಾಜ್ಯಕ್ಕೆ ರವಾನಿಸುವುದಕ್ಕಾಗಿ ಒಂದು ರಾಜ್ಯವು ಯಾವುದೇ ಇತರ ರಾಜ್ಯದಿಂದ ವಶಾವಣೆಯನ್ನು ಪಡೆದರೆ ಅಥವಾ ಸ್ವೀಕರಿಸಿದರೆ ಆ ಮೇಲೆ ಆ ಇನ್ನೊಂದು ರಾಜ್ಯವನ್ನು ಈ ಅಧ್ಯಾಯದ ಉದ್ದೇಶಗಳಿಗಾಗಿ ಅಂಥ ತೂಕದ ಅಥವಾ ಅಳತೆಯ ಸಂಬಂಧದಲ್ಲಿ ವರ್ಗಾವಣೆಧಾರಕ ರಾಜ್ಯವೆಂದು ಭಾವಿಸತಕ್ಕುದು ಮತ್ತು (1)ನೇ ಉಪಪ್ರಕರಣದ ಮತ್ತು (2)ನೇ ಉಪಪ್ರಕರಣದ ಉಪಬಂಧಗಳು ತದನುಸಾರವಾಗಿ ಅನ್ವಯಿಸತಕ್ಕುದು.

45. ವರ್ಗಾವಣೆಧಾರಕ ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ಯಾವುದೇ ತೂಕವನ್ನು ಅಥವಾ ಅಳತೆಯನ್ನು ವರ್ಗಾಯಿಸಿದಾಗ ಅನುಸರಿಸಬೇಕಾದ ಪ್ರತಿಕ್ರಿಯೆ.—ವರ್ಗಾವಣೆಧಾರಕ ರಾಜ್ಯದಲ್ಲಿ ಬಳಕೆಯಲ್ಲಿರುವ ಯಾವುದೇ ತೂಕವನ್ನು ಅಥವಾ ಅಳತೆಯನ್ನು ಯಾವುದೇ ಇನ್ನೊಂದು ರಾಜ್ಯಕ್ಕೆ ಆ ರಾಜ್ಯದಲ್ಲಿ ಮಾರುವುದಕ್ಕಾಗಿ ಅಥವಾ ಬಳಸುವುದಕ್ಕಾಗಿ ಕಳುಹಿಸಿದ್ದಲ್ಲಿ ಅಥವಾ ವಶಾವಣೆ ಮಾಡಿದಲ್ಲಿ ಆಗ ಅಂಥ ಇತರ ರಾಜ್ಯವನ್ನು ಅಂಥ ತೂಕದ ಅಥವಾ ಅಳತೆಯ ಸಂಬಂಧದಲ್ಲಿ ವರ್ಗಾವಣೆಧಾರಕ ರಾಜ್ಯವೆಂದು ಭಾವಿಸತಕ್ಕುದು ಮತ್ತು ಅಂಥ ಇನ್ನೊಂದು ರಾಜ್ಯಕ್ಕೆ ಕಳುಹಿಸಲಾದ ಅಥವಾ ವಶಾವಣೆ ಮಾಡಲಾದ ತೂಕಕ್ಕೆ ಅಥವಾ ಅಳತೆಗೆ ಈ ಅಧ್ಯಾಯದ ಉಪಬಂಧಗಳು ಸಾಧ್ಯವಾಗಬಹುದಾದಷ್ಟು ಮಟ್ಟಿಗೆ ಅನ್ವಯಿಸತಕ್ಕುದು.

46. ಇತರ ಯಾವುದೇ ರಾಜ್ಯಕ್ಕೆ ಯಾವುದೇ ತೂಕವನ್ನು ಅಥವಾ ಅಳತೆಯನ್ನು ಕಳುಹಿಸುವ ತಯಾರಕರು, ಮುಂತಾದವರು ನಿಯಂತ್ರಕನಿಗೆ ವಿವರ ಪಟ್ಟಿಕೆಯನ್ನು ಸಲ್ಲಿಸತಕ್ಕುದು.—ಯಾವುದೇ ತೂಕವನ್ನು ಅಥವಾ ಅಳತೆಯನ್ನು ಅದು ಮೊದಲನೇ ಪ್ರವರ್ಗದ್ದಿರಲಿ ಅಥವಾ ಎರಡನೇ ಪ್ರವರ್ಗದ್ದಿರಲಿ ಯಾವುದೇ ವರ್ಗಾವಣೆಧಾರಕ ರಾಜ್ಯಕ್ಕೆ ಕಳುಹಿಸುವ ಅಥವಾ ವಶಾವಣೆ ಮಾಡುವ ವರ್ಗಾವಣೆಕಾರ ರಾಜ್ಯದ ಪ್ರತಿಯೊಬ್ಬ ತಯಾರಕನು ವ್ಯಾಪಾರಿಯು ಅಥವಾ ಇತರ ವ್ಯಕ್ತಿಯು—

(ಕ) ಹಾಗೆ ರವಾನಿಸುವ, ವಶಾವಣೆ ಮಾಡುವ ಅಥವಾ ವರ್ಗಾಯಿಸುವ ಬಗ್ಗೆ ನಿಯಮಿಸಬಹುದಾದಂಥ ನಿಯತಕಾಲಿಕ ವಿವರಪಟ್ಟಿಕೆಗಳನ್ನು ವರ್ಗಾವಣೆಕಾರ ರಾಜ್ಯದ ನಿಯಂತ್ರಕನಿಗೆ ಸಲ್ಲಿಸತಕ್ಕದ್ದು ಮತ್ತು ಅಂಥ ವಿವರಪಟ್ಟಿಕೆಗಳಲ್ಲಿ ವರ್ಗಾವಣೆಧಾರಕ ರಾಜ್ಯಕ್ಕೆ ಕಳುಹಿಸಿದ ಅಥವಾ ವಶಾವಣೆ ಮಾಡಿದ ತೂಕವನ್ನು ಅಥವಾ ಅಳತೆಯನ್ನು ಕುರಿತ ವಿವರಗಳನ್ನು ನಿರ್ದಿಷ್ಟಪಡಿಸತಕ್ಕದ್ದು.

(ಖ) ವರ್ಗಾವಣೆಧಾರಕ ರಾಜ್ಯದಲ್ಲಿ ಯಾವ ವ್ಯಕ್ತಿಗೆ ತೂಕವನ್ನು ಅಥವಾ ಅಳತೆಯನ್ನು ಕಳುಹಿಸಲಾಗಿದೆಯೋ ಅಥವಾ ವಶಾವಣೆ ಮಾಡಲಾಗಿದೆಯೋ ಆ ವ್ಯಕ್ತಿಯ ವಿವರಗಳನ್ನು ಅಂಥ ನಿಯತಕಾಲಿಕ ವಿವರಪಟ್ಟಿಕೆಗಳು ನಿರ್ದಿಷ್ಟಪಡಿಸತಕ್ಕದ್ದು; ಮತ್ತು

(ಗ) ಅಂಥ ನಿಯತಕಾಲಿಕ ವಿವರಪಟ್ಟಿಕೆಗಳ ಪ್ರತಿಯನ್ನು ವರ್ಗಾವಣೆಧಾರಕ ರಾಜ್ಯದ ನಿಯಂತ್ರಕನಿಗೆ ಕಳುಹಿಸತಕ್ಕದ್ದು.

## ಭಾಗ-V

## ತೂಕಗಳ ಮತ್ತು ಅಳತೆಗಳ ಆಮದು ಮತ್ತು ರಫ್ತು

### ಅಧ್ಯಾಯ-I

### ರಫ್ತುಗಾರರ ಮತ್ತು ಆಮದುಗಾರರ ನೋಂದಣಿ

47. ಯಾವುದೇ ತೂಕವನ್ನು ಅಥವಾ ಅಳತೆಯನ್ನು ರಫ್ತು ಮಾಡುವ ಅಥವಾ ಆಮದು ಮಾಡುವ ವ್ಯಕ್ತಿಗಳು ತಮ್ಮನ್ನು ನೋಂದಾಯಿಸಿಕೊಳ್ಳತಕ್ಕದ್ದು.—(1) ಈ ಪ್ರಕರಣದ ಮೇರೆಗೆ ಸಂದರ್ಭಾನುಸಾರ ಅಂಥ ರಫ್ತುಗಾರನಾಗಿ ಅಥವಾ ಆಮದುಗಾರನಾಗಿ ನೋಂದಾಯಿತನಾಗಿದ್ದ ಹೊರತು ಯಾವನೇ ವ್ಯಾಪಾರಿ ಅಥವಾ ತಯಾರಕನು ಯಾವುದೇ ತೂಕ ಅಥವಾ ಅಳತೆಯನ್ನು ರಫ್ತು ಮಾಡತಕ್ಕದ್ದಲ್ಲ ಅಥವಾ ಆಮದು ಮಾಡಿಕೊಳ್ಳತಕ್ಕದ್ದಲ್ಲ.

(2) ಯಾವುದೇ ತೂಕದ ಅಥವಾ ಅಳತೆಯ ರಫ್ತುಗಾರನಾಗಿ ಅಥವಾ ಆಮದುಗಾರನಾಗಿ ವ್ಯವಹಾರವನ್ನು ಆರಂಭಿಸಲು ಅಥವಾ ಮುಂದುವರಿಸಲು ಉದ್ದೇಶಿಸುವ ಪ್ರತಿಯೊಬ್ಬ ವ್ಯಕ್ತಿಯು ಆ ಉದ್ದೇಶಕ್ಕಾಗಿ ಇಡಲಾಗುವ ರಿಜಿಸ್ಟರಿನಲ್ಲಿ ತನ್ನ ಹೆಸರನ್ನು ಸೇರಿಸಬೇಕೆಂದು ಈ ಅಧಿನಿಯಮದ ಪ್ರಾರಂಭದಿಂದ ನಿಯಮಿಸಬಹುದಾದಂಥ ಕಾಲದೊಳಗೆ ಅರ್ಜಿಯನ್ನು ಸಲ್ಲಿಸತಕ್ಕದ್ದು.

(3) (2)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಅರ್ಜಿಯನ್ನು ನಿರ್ದೇಶಕನಿಗೆ ಸಲ್ಲಿಸತಕ್ಕದ್ದು ಮತ್ತು ಅಂತಹ ಪ್ರತಿಯೊಂದು ಅರ್ಜಿಯನ್ನೂ ನಿಯಮಿಸಬಹುದಾದಂಥ ನಮೂನೆಯಲ್ಲಿ, ರೀತಿಯಲ್ಲಿ ಮತ್ತು ಹತ್ತು ರೂಪಾಯಿಗಳಿಗೆ ಮೀರದಂತಹ ಫೀಜನ್ನು ಸಂದಾಯ ಮಾಡಿ ಸಲ್ಲಿಸತಕ್ಕದ್ದು.

(4) (2)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾಗಿರುವ ಅರ್ಜಿಯನ್ನು ಸ್ವೀಕರಿಸಿದ ಮೇಲೆ ನಿರ್ದೇಶಕನು ತಾನು ಸೂಕ್ತವೆಂದು ಆಲೋಚಿಸಬಹುದಾದಂತಹ ವಿಚಾರಣೆಯ ಅನಂತರ ಸಾರ್ವಜನಿಕ ಹಿತದೃಷ್ಟಿಯಿಂದ ಹಾಗೆ ಮಾಡುವುದು ವಿಹಿತವೆಂದು ತನಗೆ ಮನದಟ್ಟಾದರೆ, (2)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾಗಿರುವ ರಿಜಿಸ್ಟರಿನಲ್ಲಿ ಅರ್ಜಿದಾರನ ಹೆಸರನ್ನು ಸೇರಿಸತಕ್ಕದ್ದು ಮತ್ತು ಅವನ ಹೆಸರನ್ನು ಹಾಗೆ ಸೇರಿಸಲಾಗಿದೆ ಎಂಬ ಬಗ್ಗೆ ಪ್ರಮಾಣ ಪತ್ರವನ್ನು ಅರ್ಜಿದಾರನಿಗೆ ಕೊಡತಕ್ಕದ್ದು ಮತ್ತು ಯಾವ ರಾಜ್ಯದಲ್ಲಿ ಆ ರಫ್ತುಗಾರನು ಅಥವಾ ಆಮದುಗಾರನು ತನ್ನ ವ್ಯವಹಾರವನ್ನು ನಡೆಸುತ್ತಿರುವನೋ ಆ ರಾಜ್ಯದ ಕಾನೂನು ಮಾಪನಶಾಸ್ತ್ರ ನಿಯಂತ್ರಕನಿಗೆ ಸದರಿ ಪ್ರಮಾಣಪತ್ರದ ಒಂದು ಪ್ರತಿಯನ್ನು ಕಳುಹಿಸತಕ್ಕದ್ದು.

(5) (4) ಉಪಪ್ರಕರಣದ ಮೇರೆಗೆ ಕೊಡಲಾದ ಪ್ರಮಾಣ ಪತ್ರವು ಅದರಲ್ಲಿ ನಿರ್ದಿಷ್ಟಪಡಿಸಲಾಗಿರುವ ಅವಧಿಯವರೆಗೆ ಸಿಂಧುವಾಗಿರತಕ್ಕದ್ದು ಮತ್ತು ನಿಯಮಿಸಬಹುದಾದಂಥ ಹೆಚ್ಚಿನ ಅವಧಿಯವರೆಗೆ ಕಾಲ ಕಾಲಕ್ಕೆ ಅದನ್ನು ನವೀಕರಿಸಬಹುದು.

### ಅಧ್ಯಾಯ-II

### ತೂಕಗಳ, ಅಳತೆಗಳ ಮತ್ತು ಪ್ಯಾಕು ಮಾಡಿದ ರೂಪದಲ್ಲಿರುವ ಸರಕುಗಳ ರಫ್ತು ಮತ್ತು ಆಮದು

48. ಯಾವ ಷರತ್ತಿನ ಮೇರೆಗೆ ಮಾನಕವಲ್ಲದ ತೂಕಗಳನ್ನು ಮತ್ತು ಅಳತೆಗಳನ್ನು ಹಾಗೂ ಇತರ ಸರಕುಗಳನ್ನು ರಫ್ತುಮಾಡಬಹುದು (1) ನಿಯಮಿಸಬಹುದಾದಂಥ ಷರತ್ತುಗಳಿಗೆ, ಪರಿಮಿತಿಗಳಿಗೆ ಮತ್ತು ನಿರ್ಬಂಧಗಳಿಗೊಳಪಟ್ಟು ಕೇಂದ್ರ ಸರ್ಕಾರದ ಪೂರ್ವಾನುಮತಿಯೊಂದಿಗೆ ರಫ್ತಿಗಾಗಿಯೆಂದೇ ಮಾಡಿದ ಅಥವಾ ತಯಾರಿಸಿದ ಯಾವುದೇ ತೂಕವನ್ನು ಅಥವಾ ಅಳತೆಯನ್ನು ಅಂಥ ತೂಕವು ಅಥವಾ ಅಳತೆಯು ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ನಿಗದಿಪಡಿಸಲಾದ ಮಾನಕಗಳಿಗೆ ಅನುಗುಣವಾಗಿರದಿದ್ದರೂ ರಫ್ತು ಮಾಡಲು ಆ ಸರ್ಕಾರವು ಅನುಮತಿಸಬಹುದು.

(2) ಪ್ಯಾಕೇಜು ರೂಪದಲ್ಲಿರುವ ಯಾವುದೇ ಸರಕನ್ನು ರಫ್ತು ಮಾಡುವಲ್ಲಿ ಮತ್ತು ಯಾವ ವ್ಯಕ್ತಿಗೆ ಹಾಗೆ ರಫ್ತು ಮಾಡಬೇಕಾಗಿದೆಯೋ ಆ ವ್ಯಕ್ತಿಯು ಹಾಗೆ ಅಗತ್ಯಪಡಿಸಿದಲ್ಲಿ ಅಂಥ ಪ್ಯಾಕೇಜಿನ ಒಳಗಿರುವ ನಿವ್ವಳ ಪರಿಮಾಣವನ್ನು ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ನಿಗದಿಪಡಿಸಲಾದ ತೂಕದ ಅಥವಾ ಅಳತೆಯ ಮಾನಕ ಘಟಕದ ರೂಪದಲ್ಲಿ ನಿರ್ದಿಷ್ಟಪಡಿಸುವುದರ ಜೊತೆಗೆ, ಯಾವ ವ್ಯಕ್ತಿಗೆ ಅದನ್ನು ರಫ್ತು ಮಾಡಬೇಕಾಗಿದೆಯೋ ಆ ವ್ಯಕ್ತಿಯು ನಿರ್ದಿಷ್ಟಪಡಿಸಬಹುದಾದಂಥ ತೂಕದ ಅಥವಾ ಅಳತೆಯ ಘಟಕಗಳ ರೂಪದಲ್ಲೂ ಸಹ ಅದರ ತೂಕವನ್ನು ಅಥವಾ ಒಳಗಿರುವ ನಿವ್ವಳ ಪರಿಮಾಣವನ್ನು ರಫ್ತುಗಾರನು ನಿರ್ದಿಷ್ಟಪಡಿಸಬಹುದು.

(3) ಈ ಅಧಿನಿಯಮದ ಬೇರೆ ಕಡೆಯಲ್ಲಿ ಏನೇ ಇದ್ದರೂ ರಫ್ತು ಮಾಡಲಾಗಿರುವ ಯಾವುದೇ ಸರಕಿನ ಸಂಬಂಧದಲ್ಲಿ,—

(ಕ) ಯಾವುದೇ ಬೆಲೆಯ ಹೇಳು ಬೆಲೆಯನ್ನು;

(ಖ) ಯಾವುದೇ ಬೆಲೆಪಟ್ಟಿಯನ್ನು, ಖರೀದಿ ಪಟ್ಟಿಯನ್ನು ಅಥವಾ ನಗದು ರಸೀದಿಯನ್ನು ಕೊಡುವುದನ್ನು;

(ಗ) ಯಾವುದೇ ಪ್ಯಾಕೇಜಿನಲ್ಲಿರುವ ಪರಿಮಾಣದ ತೂಕವನ್ನು ಅಥವಾ ಅಳತೆಯನ್ನು ಅಥವಾ ಸಂಖ್ಯೆಯನ್ನು ಯಾವುದೇ ಲೇಬಲ್ಲಿನ ರಟ್ಟುಪೆಟ್ಟಿಗೆಯ ಅಥವಾ ಇತರ ವಸ್ತುವಿನ ಮೇಲೆ ಸೂಚಿಸುವುದನ್ನು;

(ಘ) ಯಾವುದೇ ಸುತ್ತಳತೆಯನ್ನು ನಮೂದಿಸುವುದನ್ನು;

—ಯಾವ ವ್ಯಕ್ತಿಗೆ ರಫ್ತು ಮಾಡಬೇಕಾಗಿದೆಯೋ ಆ ವ್ಯಕ್ತಿಯು ಹಾಗೆ ಅಗತ್ಯಪಡಿಸಿದರೆ ಯಾವುದೇ ಇತರ ತೂಕದ ಅಳತೆಯ ಅಥವಾ ಎಣಿಕೆಯ ಪದ್ಧತಿಗೆ ಅನುಸಾರವಾಗಿ ಮಾಡಬಹುದು

49. ಮೆಟ್ರಿಕ್ ಪದ್ಧತಿಯಲ್ಲದ ತೂಕವನ್ನು ಅಥವಾ ಅಳತೆಯನ್ನು ಆಮದು ಮಾಡಿಕೊಳ್ಳತಕ್ಕುದಲ್ಲ.—(1) (2)ನೇ ಉಪಪ್ರಕರಣದಲ್ಲಿ ಅನ್ಯಥಾ ಉಪಬಂಧಿಸಿರುವುದನ್ನು ಉಳಿದು ಯಾವುದೇ ತೂಕವನ್ನು ಅಥವಾ ಅಳತೆಯನ್ನು ಒಂಟಿಯಾಗಿಯಾಗಲಿ ಅಥವಾ ಯಾವುದೇ ಯಂತ್ರದ ಅಥವಾ ಯಂತ್ರ ಸಮುದಾಯದ ಒಂದು ಭಾಗವಾಗಿಯಾಗಲಿ ಅಥವಾ ಅಂಗವಾಗಿಯಾಗಲಿ, ಅದು ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ನಿಗದಿಪಡಿಸಲಾದ ತೂಕದ ಅಥವಾ ಅಳತೆಯ ನಿರ್ದಿಷ್ಟ ಮಾನಕಗಳಿಗೆ ಅನುಗುಣವಾಗಿದ್ದ ಹೊರತು ಆಮದು ಮಾಡಿಕೊಳ್ಳತಕ್ಕುದಲ್ಲ.

(2) ಮೆಟ್ರಿಕ್ ಪದ್ಧತಿಯ ತೂಕವು ಅಥವಾ ಅಳತೆಯು ಜಾರಿಯಲ್ಲಿರದ ದೇಶದಿಂದ ಯಾವುದೇ ಸರಕನ್ನು, ಯಂತ್ರ ಸಮುದಾಯವನ್ನು ಅಥವಾ ಯಂತ್ರ ಸಮುದಾಯದ ಯಾವುದೇ ಭಾಗವನ್ನು ಅಥವಾ ಅಂಗವನ್ನು ಆಮದು ಮಾಡಿಕೊಂಡಲ್ಲಿ ಅಥವಾ ಆ ದೇಶದಲ್ಲಿ ಅಂಥ ಪದ್ಧತಿಯು ಜಾರಿಯಲ್ಲಿದ್ದು ಅಂಥ ಸರಕನ್ನು, ಯಂತ್ರ ಸಮುದಾಯವನ್ನು ಅಥವಾ ಯಂತ್ರ ಸಮುದಾಯದ ಯಾವುದೇ ಭಾಗವನ್ನು ಅಥವಾ ಅಂಗವನ್ನು ಅಂಥ ಪದ್ಧತಿಗೆ ಅನುಸಾರವಾಗಿ ಮಾಡಿರದಿದ್ದಲ್ಲಿ ಅಥವಾ ತಯಾರಿಸದಿದ್ದಲ್ಲಿ ಆಮದುಗಾರನು ಹಾಗೆ ಆಮದು ಮಾಡಿಕೊಳ್ಳುವ ಮುಂಚೆ ಅಂಥ ಸರಕಿನ ಯಂತ್ರ ಸಮುದಾಯದ ಅಥವಾ ಭಾಗದ ಅಥವಾ ಅಂಗದ ಮತ್ತು ಅವುಗಳ ರೇಖಾ ಚಿತ್ರಗಳ ಮೇಲೆ ಅವುಗಳ ತೂಕವನ್ನು ಅಥವಾ ಅಳತೆಯನ್ನು ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ನಿಗದಿಪಡಿಸಲಾದ ತೂಕದ ಅಥವಾ ಅಳತೆಯ ಮಾನಕಗಳ ರೂಪದಲ್ಲಿ ನಮೂದಿಸಿಕೊಳ್ಳುವಂತೆ ಪ್ರಯತ್ನಿಸತಕ್ಕುದು;

ಪರಂತು, ಯಾವುದೇ ಸರಕಿನ ಯಂತ್ರ ಸಮುದಾಯದ ಭಾಗದ ಅಥವಾ ಅಂಗದ ಮೇಲೆ ಅಥವಾ ಅವುಗಳ ಯಾವುವೇ ರೇಖಾ ಚಿತ್ರಗಳ ಮೇಲೆ ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ನಿಗದಿಪಡಿಸಲಾದ ತೂಕದ ಅಥವಾ ಅಳತೆಯ ಮಾನಕ ಘಟಕಗಳ ರೂಪದಲ್ಲಿ ಯಾವುದೇ ತೂಕವನ್ನು ಅಥವಾ ಅಳತೆಯನ್ನು ನಮೂದಿಸಿರುವಲ್ಲಿ ಆಮದುಗಾರನು ಆಮದು ಮಾಡಿಕೊಂಡ ದಿನಾಂಕದಿಂದ ಆರು ತಿಂಗಳ ಒಳಗೆ ಅಂಥ ಸರಕಿನ, ಯಂತ್ರ ಸಮುದಾಯದ ಭಾಗದ ಅಥವಾ ಅಂಗದ ಮೇಲೆ ಮತ್ತು ಅವುಗಳ ರೇಖಾ ಚಿತ್ರಗಳ ಮೇಲೆ ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ನಿಗದಿಪಡಿಸಲಾದ ತೂಕದ ಅಥವಾ ಅಳತೆಯ ಮಾನಕ ಘಟಕಗಳ ರೂಪದಲ್ಲಿ ಅವುಗಳ ತೂಕವನ್ನು ಅಥವಾ ಅಳತೆಯನ್ನು ನಮೂದಿಸುವಂತೆ ಮಾಡಿಕೊಳ್ಳತಕ್ಕುದು.

## ಭಾಗ—VI

## ಅಪರಾಧಗಳು ಮತ್ತು ಅವುಗಳ ಅಧಿವಿಚಾರಣೆ

50. ಮಾನಕವಲ್ಲದ ತೂಕಗಳನ್ನು ಅಥವಾ ಅಳತೆಗಳನ್ನು ಉಪಯೋಗಿಸಿದುದಕ್ಕೆ ದಂಡ.— ಯಾವನೇ ವ್ಯಕ್ತಿಯು ಸಂದರ್ಭಾನುಸಾರ, ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ನಿಗದಿಪಡಿಸಲಾದ ತೂಕದ ಅಥವಾ ಅಳತೆಯ ಮಾನಕಗಳಿಗೆ ಅಥವಾ ಎಣಿಕೆಯ ಮಾನಕಗಳಿಗೆ ಅನುಸಾರವಾಗಿ ಅಲ್ಲದೆ ಬೇರೆ ರೀತಿಯ ತೂಕವನ್ನು ಅಥವಾ ಅಳತೆಯನ್ನು ಉಪಯೋಗಿಸಿದರೆ ಅಥವಾ ಎಣಿಕೆಯನ್ನು ಮಾಡಿದರೆ ಅವನು ಆರು ತಿಂಗಳವರೆಗಿನ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿಗಳವರೆಗಿನ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕುದು ಮತ್ತು ಎರಡನೇ ಅಥವಾ ತರುವಾಯದ ಅಪರಾಧಗಳಿಗೆ ಎರಡು ವರ್ಷಗಳವರೆಗಿನ ಕಾರಾವಾಸದಿಂದ ಮತ್ತು ಜುಲ್ಮಾನೆಯಿಂದ ಸಹ ದಂಡಿತನಾಗತಕ್ಕುದು.

51. 18ನೇ ಪ್ರಕರಣದ ಉಲ್ಲಂಘನೆಗೆ ದಂಡ.—ಯಾವನೇ ವ್ಯಕ್ತಿಯು ಯಾವುದೇ ಮೂಲ ಮಾಪಕವನ್ನು, ಎರಡನೇ ಮಾಪಕವನ್ನು ಅಥವಾ ಬಳಕೆ ಮಾಪಕವನ್ನು ಯಾವುದೇ ರೀತಿಯಲ್ಲಿ ಕೆಡಿಸಿದರೆ ಅಥವಾ ವ್ಯತ್ಯಾಸಗೊಳಿಸಿದರೆ, ಅದನ್ನು ಸತ್ಯಾಪನೆ ಮಾಡಿದಾಗ ಕಂಡುಬಂದ ಯಾವುದೇ ಪ್ರಮಾದವನ್ನು ಸರಿಪಡಿಸುವುದಕ್ಕಾಗಿ ಹಾಗೆ ವ್ಯತ್ಯಸ್ತಗೊಳಿಸಿರುವಲ್ಲಿ ಹೊರತು, ಮಿಕ್ಕ ಸಂದರ್ಭದಲ್ಲಿ ಎರಡು ವರ್ಷಗಳವರೆಗಿನ ಕಾರಾವಾಸದಿಂದ ಅಥವಾ ಐದು ಸಾವಿರ ರೂಪಾಯಿಗಳವರೆಗಿನ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ಅವನು ದಂಡಿತನಾಗತಕ್ಕುದು.

52. 22ನೇ ಪ್ರಕರಣದ ಉಲ್ಲಂಘನೆಗೆ ದಂಡ.—ರಫ್ತು ಮಾಡುವುದಕ್ಕಾಗಿ ಮಾತ್ರವೇ ಯಾವುದೇ ತೂಕವನ್ನು ಅಥವಾ ಅಳತೆಯನ್ನು ಕೇಂದ್ರ ಸರ್ಕಾರದ ಅನುಮತಿಯೊಂದಿಗೆ ಮಾಡಿರುವಲ್ಲಿ ಅಥವಾ ತಯಾರಿಸಿರುವಲ್ಲಿ ಹೊರತು ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ನಿಗದಿಪಡಿಸಲಾದ ತೂಕದ ಅಥವಾ ಅಳತೆಯ ಮಾನಕಗಳಿಗೆ ಅನುಗುಣವಾಗಿರದ ಯಾವುದೇ ತೂಕವನ್ನು ಅಥವಾ ಅಳತೆಯನ್ನು ಮಾಡುವ ಅಥವಾ ತಯಾರಿಸುವ ಪ್ರತಿಯೊಬ್ಬ ವ್ಯಕ್ತಿಯೂ ತೂಕಗಳಿಗೆ ಮತ್ತು ಅಳತೆಗಳಿಗೆ ಸಂಬಂಧಿಸಿ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೇರೆಗೆ ಅಂಥ ಅಪರಾಧವು ದಂಡನೀಯವಲ್ಲದಿದ್ದಲ್ಲಿ ಒಂದು ವರ್ಷದವರೆಗಿನ ಕಾರಾವಾಸದಿಂದ ಅಥವಾ ಎರಡು ಸಾವಿರ ರೂಪಾಯಿಗಳವರೆಗಿನ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕುದು ಮತ್ತು ಎರಡನೆಯ ಅಥವಾ ತರುವಾಯದ ಅಪರಾಧಕ್ಕೆ ಮೂರು ವರ್ಷಗಳ ವರೆಗಿನ ಕಾರಾವಾಸದಿಂದ ಮತ್ತು ಜುಲ್ಮಾನೆಯಿಂದ ಸಹ ದಂಡಿತನಾಗತಕ್ಕುದು.

53. 23ನೇ ಪ್ರಕರಣದ ಉಲ್ಲಂಘನೆಗೆ ದಂಡ.—ರಫ್ತು ಮಾಡುವುದಕ್ಕಾಗಿ ಮಾತ್ರವೇ ಯಾವುದೇ ತೂಕವನ್ನು ಅಥವಾ ಅಳತೆಯನ್ನು ಕೇಂದ್ರ ಸರ್ಕಾರದ ಅನುಮತಿಯೊಂದಿಗೆ ಮಾಡಿರುವಲ್ಲಿ ಅಥವಾ ತಯಾರಿಸಿರುವಲ್ಲಿ ಹೊರತು, ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ನಿಗದಿ ಪಡಿಸಲಾದ ತೂಕದ, ಅಳತೆಯ ಅಥವಾ ಎಣಿಕೆಯ ಮಾನಕಗಳಿಗೆ ಅನುಗುಣವಾಗಿರದ ಯಾವುದೇ ತೂಕದ, ಅಳತೆಯ ಅಥವಾ ನಂಬರಿನ ಬರಹವನ್ನು ಹೊಂದಿರುವ ಯಾವುದೇ ತೂಕವನ್ನು ಅಥವಾ ಅಳತೆಯನ್ನು ಮಾಡುವ ಅಥವಾ ತಯಾರಿಸುವ ಪ್ರತಿಯೊಬ್ಬ ವ್ಯಕ್ತಿಯೂ, ತೂಕಗಳಿಗೆ ಅಥವಾ ಅಳತೆ ಗಳಿಗೆ ಸಂಬಂಧಿಸಿ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೇರೆಗೆ ಆ ಅಪರಾಧವು ದಂಡನೀಯವಲ್ಲದಿದ್ದಲ್ಲಿ, ಒಂದು ವರ್ಷದ ವರೆಗಿನ ಕಾರಾವಾಸದಿಂದ ಅಥವಾ ಎರಡು ಸಾವಿರ ರೂಪಾಯಿಗಳವರೆಗಿನ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ಮತ್ತು ಎರಡನೆಯ ಅಥವಾ ತರುವಾಯದ ಅಪರಾಧಕ್ಕೆ ಮೂರು ವರ್ಷಗಳವರೆಗಿನ ಕಾರಾವಾಸದಿಂದ ಮತ್ತು ಜುಲ್ಮಾನೆಯಿಂದ ಸಹ ದಂಡಿತನಾಗತಕ್ಕುದು.

54. 29ನೇ ಪ್ರಕರಣದ ಉಲ್ಲಂಘನೆಗೆ ದಂಡ.—ನಿರ್ದೇಶಕನನ್ನು ಅಥವಾ ನಿರ್ದೇಶಕನ ಅಧಿಕಾರಗಳನ್ನು ಚಲಾಯಿಸಲು ಮತ್ತು ಪ್ರಕಾರ್ಯಗಳನ್ನು ನೆರವೇರಿಸಲು ಅಧಿಕೃತನಾದ ಯಾವನೇ ವ್ಯಕ್ತಿಯನ್ನು (ಈ ಭಾಗದಲ್ಲಿ ಇನ್ನು ಮುಂದೆ 'ಅಧಿಕೃತ ಅಧಿಕಾರಿ' ಎಂದು ಕರೆಯ ಲಾಗುವುದು) ಹಾಗೆ ನಿರ್ದೇಶಕನಾಗಿ ಅಥವಾ ಅಧಿಕೃತ ಅಧಿಕಾರಿಯಾಗಿ ಅವನ ಅಧಿಕಾರಗಳನ್ನು ಚಲಾಯಿಸುವಲ್ಲಿ ಅಥವಾ ಅವನ ಪ್ರಕಾರ್ಯಗಳನ್ನು ನೆರವೇರಿಸುವಲ್ಲಿ ಯಾವನೇ ವ್ಯಕ್ತಿಯು ಅಡ್ಡಿಯುಂಟು ಮಾಡಿದರೆ ಅಥವಾ ನಿರ್ದೇಶಕನನ್ನು ಅಥವಾ ಆ ಅಧಿಕೃತ ಅಧಿಕಾರಿಯನ್ನು ತನ್ನ ಅಧಿಕಾರ ಗಳನ್ನು ಚಲಾಯಿಸುವಲ್ಲಿ ಅಥವಾ ಪ್ರಕಾರ್ಯಗಳನ್ನು ನೆರವೇರಿಸುವಲ್ಲಿ ಪ್ರತಿಬಂಧಿಸುವ ಅಥವಾ ತಡೆಯುಂಟುಮಾಡುವ ಉದ್ದೇಶದಿಂದ ಅಡ್ಡಿಯುಂಟು ಮಾಡಿದರೆ ಅಥವಾ ನಿರ್ದೇಶಕನು ಅಥವಾ ಇತರ ಅಧಿಕೃತ ಅಧಿಕಾರಿಯು ಹಾಗೆ ತನ್ನ ಅಧಿಕಾರವನ್ನು ಕಾನೂನುಬದ್ಧವಾಗಿ ಚಲಾಯಿಸುತ್ತಿರುವಲ್ಲಿ ಅಥವಾ ಪ್ರಕಾರ್ಯಗಳನ್ನು ನೆರವೇರಿಸುತ್ತಿರುವಲ್ಲಿ ಮಾಡಿದ ಅಥವಾ ಮಾಡಲು ಪ್ರಯತ್ನಿಸಿದ ಯಾವುದೇ ಕಾರ್ಯದ ಪರಿಣಾಮವಾಗಿ ಅಡ್ಡಿಯುಂಟು ಮಾಡಿದರೆ ಅವನು ಎರಡು ವರ್ಷಗಳವರೆಗಿನ ಕಾರಾವಾಸದಿಂದ ಮತ್ತು ಎರಡನೆಯ ಅಥವಾ ತರುವಾಯದ ಅಪರಾಧಕ್ಕೆ ಐದು ವರ್ಷಗಳವರೆಗಿನ ಕಾರಾವಾಸದಿಂದ ದಂಡಿತನಾಗತಕ್ಕುದು.

55. 32ನೇ ಪ್ರಕರಣದ ಉಲ್ಲಂಘನೆಗೆ ದಂಡ.—ಅಂತರರಾಜ್ಯ ವ್ಯಾಪಾರವನ್ನು ಅಥವಾ ವಾಣಿಜ್ಯವನ್ನು ನಡೆಸುವಾಗ ಯಾವನೇ ವ್ಯಕ್ತಿಯು 32ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿ ಯಾವುದೇ ವ್ಯವಹಾರವನ್ನು, ವ್ಯಾಪಾರವನ್ನು ಅಥವಾ ಕರಾರನ್ನು ಮಾಡಿಕೊಂಡರೆ ಅವನು ಎರಡು ಸಾವಿರ ರೂಪಾಯಿಗಳವರೆಗಿನ ಜುಲ್ಮಾನೆಯಿಂದ ಮತ್ತು ಎರಡನೆಯ ಅಥವಾ ತರುವಾಯದ ಅಪರಾಧಕ್ಕೆ ಒಂದು ವರ್ಷದ ಕಾರಾವಾಸದಿಂದ ಮತ್ತು ಜುಲ್ಮಾನೆಯಿಂದಲೂ ಸಹ ದಂಡಿತನಾಗತಕ್ಕುದು.

56. 33ನೇ ಪ್ರಕರಣದ ಉಲ್ಲಂಘನೆಗೆ ದಂಡ.—ಅಂತರರಾಜ್ಯ ವ್ಯಾಪಾರವನ್ನು ಅಥವಾ ವಾಣಿಜ್ಯವನ್ನು ನಡೆಸುತ್ತಿರುವಾಗ ಯಾವನೇ ವ್ಯಕ್ತಿಯು 33ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿದರೆ ಅವನು ಎರಡು ಸಾವಿರ ರೂಪಾಯಿಗಳವರೆಗಿನ ಜುಲ್ಮಾನೆಯಿಂದ ಮತ್ತು ಎರಡನೆಯ ಅಥವಾ ತರುವಾಯದ ಅಪರಾಧಕ್ಕಾಗಿ ಮೂರು ವರ್ಷಗಳವರೆಗಿನ ಕಾರಾವಾಸದಿಂದ ಮತ್ತು ಜುಲ್ಮಾನೆಯಿಂದಲೂ ಸಹ ದಂಡಿತನಾಗತಕ್ಕುದು.

57. 34ನೇ ಪ್ರಕರಣದ ಉಲ್ಲಂಘನೆಗೆ ದಂಡ—ಅಂತರರಾಜ್ಯ ವ್ಯಾಪಾರವನ್ನು ಅಥವಾ ವಾಣಿಜ್ಯವನ್ನು ನಡೆಸುವಾಗ ಯಾವನೇ ವ್ಯಕ್ತಿಯು

(i) ಕರಾರು ಮಾಡಿಕೊಂಡಿರುವ ಅಥವಾ ಹಣ ಕೊಟ್ಟಿರುವ ಪರಿಮಾಣಕ್ಕಿಂತ ಅಥವಾ ಸಂಖ್ಯೆಗಿಂತ ಕಡಿಮೆ ಪರಿಮಾಣದಲ್ಲಿ ಅಥವಾ ಸಂಖ್ಯೆಯಲ್ಲಿ ಯಾವುದೇ ವಸ್ತುವನ್ನು ಅಥವಾ ಪದಾರ್ಥವನ್ನು ಖರೀದಿದಾರನಿಗೆ ಮಾರಿದರೆ, ವಶಾವಣೆ ಮಾಡಿದರೆ ಅಥವಾ ಮಾರುವಂತೆ ಅಥವಾ ವಶಾವಣೆ ಮಾಡುವಂತೆ ಮಾಡಿದರೆ; ಅಥವಾ

(ii) ಕರಾರು ಮಾಡಿಕೊಳ್ಳಲಾಗಿರುವ ಅಥವಾ ಹಣ ಕೊಡಲಾಗಿರುವ ಸೇವೆಗಿಂತ ಕಡಿಮೆ ತೂಕದಲ್ಲಿ, ಅಳತೆಯಲ್ಲಿ ಅಥವಾ ಸಂಖ್ಯೆಯಲ್ಲಿ ಯಾವುದೇ ಸೇವೆಯನ್ನು ಸಲ್ಲಿಸಿದರೆ; ಅಥವಾ

(iii) ಯಾವುದೇ ವಸ್ತುವನ್ನು ಅಥವಾ ಪದಾರ್ಥವನ್ನು ಕೊಳ್ಳುವಾಗ, ಕರಾರು ಮಾಡಿಕೊಳ್ಳಲಾಗಿರುವ ಅಥವಾ ಹಣ ಕೊಡಲಾಗಿರುವ ಪರಿಮಾಣಕ್ಕಿಂತ ಅಥವಾ ಸಂಖ್ಯೆಗಿಂತ ಹೆಚ್ಚಿನ ಪರಿಮಾಣದಲ್ಲಿ ಅಥವಾ ಸಂಖ್ಯೆಯಲ್ಲಿ ಸರಕನ್ನು ಕೇಳಿದರೆ ಅಥವಾ ಕೇಳುವಂತೆ ಮಾಡಿದರೆ ಅಥವಾ ಸ್ವೀಕರಿಸಿದರೆ ಇಲ್ಲವೇ ಸ್ವೀಕರಿಸುವಂತೆ ಮಾಡಿದರೆ; ಅಥವಾ

(iv) ಕರಾರು ಮಾಡಿಕೊಳ್ಳಲಾಗಿರುವ ಅಥವಾ ಹಣ ಕೊಡಲಾಗಿರುವ ಸೇವೆಗಿಂತ ಯಾವುದೇ ಹೆಚ್ಚಿನ ಸೇವೆಯನ್ನು ಪಡೆದುಕೊಂಡರೆ,

—ಅವನು ಐದು ಸಾವಿರ ರೂಪಾಯಿಗಳವರೆಗಿನ ಜುಲ್ಮಾನೆಯಿಂದ ಮತ್ತು ಎರಡನೆಯ ಅಥವಾ ತರುವಾಯದ ಅಪರಾಧಕ್ಕೆ ಐದು ವರ್ಷಗಳವರೆಗಿನ ಕಾರಾವಾಸದಿಂದ ಮತ್ತು ಜುಲ್ಮಾನೆಯಿಂದಲೂ ಸಹ ದಂಡಿತನಾಗತಕ್ಕುದು.

58. 35ನೇ ಪ್ರಕರಣದ ಉಲ್ಲಂಘನೆಗೆ ದಂಡ.—ಯಾವನೇ ವ್ಯಕ್ತಿಯು ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಅಗತ್ಯಪಡಿಸಲಾಗಿರುವಂತೆ ಯಾವುದೇ ದಾಖಲೆಯನ್ನು ಅಥವಾ ರಿಜಿಸ್ಟರನ್ನು ಇಟ್ಟುಕೊಂಡು ಬರಲು ಯಾವುದೇ ಯುಕ್ತ ಕಾರಣವಿಲ್ಲದೆ ತಪ್ಪಿದರೆ ಅಥವಾ ವಿಫಲನಾದರೆ ಅಥವಾ ಯಾವುದೇ ದಾಖಲೆಯನ್ನು ಅಥವಾ ರಿಜಿಸ್ಟರನ್ನು ಹಾಜರುಪಡಿಸುವಂತೆ ನಿರ್ದೇಶಕನು ಅಥವಾ ಅಧಿಕೃತ ಅಧಿಕಾರಿಯು ಅಗತ್ಯಪಡಿಸಿದ್ದು ಹಾಗೆ ಮಾಡಲು ಯಾವುದೇ ಯುಕ್ತ ಕಾರಣವಿಲ್ಲದೆ ತಪ್ಪಿದರೆ ಅಥವಾ ವಿಫಲನಾದರೆ ಅವನು ಒಂದು ಸಾವಿರ ರೂಪಾಯಿಗಳವರೆಗಿನ ಜುಲ್ಮಾನೆಯಿಂದ ಅಥವಾ ಎರಡನೆಯ ಮತ್ತು ತರುವಾಯದ ಅಪರಾಧಕ್ಕಾಗಿ ಆರು ತಿಂಗಳವರೆಗಿನ ಕಾರಾವಾಸದಿಂದ ಮತ್ತು ಜುಲ್ಮಾನೆಯಿಂದಲೂ ಸಹ ದಂಡಿತನಾಗತಕ್ಕುದು.

59. 36ನೇ ಪ್ರಕರಣದ ಉಲ್ಲಂಘನೆಗೆ ದಂಡ.—ಯಾವುದೇ ತೂಕದ ಅಥವಾ ಅಳತೆಯ ಮಾದರಿಯನ್ನು ಅನುಮೋದನೆಗಾಗಿ ಒಪ್ಪಿಸಲು 36ನೇ ಪ್ರಕರಣದ ಮೂಲಕ ಅಗತ್ಯಪಡಿಸಲಾಗಿದ್ದು ಹಾಗೆ ಮಾಡಲು ಯಾವುದೇ ಯುಕ್ತ ಕಾರಣವಿಲ್ಲದೆ ಯಾವನೇ ವ್ಯಕ್ತಿಯು ತಪ್ಪಿದರೆ ಅಥವಾ ವಿಫಲನಾದರೆ ಅವನು ಐದು ಸಾವಿರ ರೂಪಾಯಿಗಳವರೆಗಿನ ಜುಲ್ಮಾನೆಯಿಂದ ಮತ್ತು ಎರಡನೆಯ ಅಥವಾ ತರುವಾಯದ ಅಪರಾಧಕ್ಕಾಗಿ ಐದು ವರ್ಷಗಳವರೆಗಿನ ಕಾರಾವಾಸದಿಂದ ಮತ್ತು ಜುಲ್ಮಾನೆಯಿಂದಲೂ ಸಹ ದಂಡಿತನಾಗತಕ್ಕುದು.

60. ಮಾದರಿಯ ಅನುಮೋದನೆಯು ಜಾರಿಯಲ್ಲಿದ್ದ ಹೊರತು ತೂಕಗಳನ್ನು ಅಥವಾ ಅಳತೆಗಳನ್ನು ತಯಾರಿಸುವುದಕ್ಕೆ ದಂಡ.—(1) ಅಂತಾರಾಜ್ಯ ವ್ಯಾಪಾರವನ್ನು ಅಥವಾ ವಾಣಿಜ್ಯವನ್ನು ನಡೆಸುವಾಗ ಯಾವನೇ ವ್ಯಕ್ತಿಯು ಮಾರಿದ, ವಿತರಣೆ ಮಾಡಿದ, ವಶಾವಣೆ ಮಾಡಿದ ಅಥವಾ ಅನ್ಯಥಾ ವರ್ಗಾಯಿಸಿದ ಅಥವಾ ಹಾಗೆ ಮಾಡಲು ಉದ್ದೇಶಿಸಿದ ಯಾವುದೇ ತೂಕವನ್ನು ಅಥವಾ ಅಳತೆಯನ್ನು, ಅಂಥ ತೂಕದ ಅಥವಾ ಅಳತೆಯ ಮಾದರಿಯ ಬಗ್ಗೆ 36ನೇ ಪ್ರಕರಣದ ಮೇರೆಗೆ ಕೊಟ್ಟ ಅನುಮೋದನೆಯ ಪ್ರಮಾಣಪತ್ರವು ಜಾರಿಯಲ್ಲಿದ್ದ ಹೊರತು, ಮಾಡಿದರೆ ಅಥವಾ ತಯಾರಿಸಿದರೆ ಅವನು ಎರಡು ವರ್ಷಗಳವರೆಗಿನ ಕಾರಾವಾಸದಿಂದ ದಂಡಿತನಾಗತಕ್ಕುದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕುದು ಮತ್ತು ಎರಡನೆಯ ಅಥವಾ ತರುವಾಯದ ಅಪರಾಧಕ್ಕಾಗಿ ಐದು ವರ್ಷಗಳವರೆಗಿನ ಕಾರಾವಾಸದಿಂದ ಮತ್ತು ಜುಲ್ಮಾನೆಯಿಂದಲೂ ಸಹ ದಂಡಿತನಾಗತಕ್ಕುದು.

(2) ನಿಯಮಿಸಲಾದ ಪ್ರಾಧಿಕಾರವು ಅನುಮೋದಿಸಿದ ಅಥವಾ ಶಿಫಾರಸು ಮಾಡಿದ ಸಾಮಗ್ರಿಯಲ್ಲದ ಇತರ ಯಾವುದೇ ಸಾಮಗ್ರಿಯಿಂದ ಯುಕ್ತ ಕಾರಣವಿಲ್ಲದೆ, ಯಾವನೇ ವ್ಯಕ್ತಿಯು ಅನುಮೋದಿತವಾದ ಮಾದರಿಗನುಸಾರವಾಗಿ ಯಾವುದೇ ತೂಕವನ್ನು ಅಥವಾ ಅಳತೆಯನ್ನು ತಯಾರಿಸಿದರೆ ಅವನು ಐದು ವರ್ಷಗಳವರೆಗಿನ ಕಾರಾವಾಸದಿಂದ ಮತ್ತು ಜುಲ್ಮಾನೆಯಿಂದಲೂ ಸಹ ದಂಡಿತನಾಗತಕ್ಕುದು.

61. 38ನೇ ಪ್ರಕರಣದ ಉಲ್ಲಂಘನೆಗೆ ದಂಡ.—38ನೇ ಪ್ರಕರಣದ ಅಗತ್ಯತೆಗಳನ್ನು ಪಾಲಿಸದೆ ಯಾವುದೇ ತೂಕವನ್ನು ಅಥವಾ ಅಳತೆಯನ್ನು ಯಾವನೇ ವ್ಯಕ್ತಿಯು ಮಾಡಿದರೆ ಅಥವಾ ತಯಾರಿಸಿದರೆ ಅವನು ಐದು ಸಾವಿರ ರೂಪಾಯಿಗಳವರೆಗಿನ ಜುಲ್ಮಾನೆಯಿಂದ ಮತ್ತು ಎರಡನೆಯ ಅಥವಾ ತರುವಾಯದ ಅಪರಾಧಕ್ಕಾಗಿ ಐದು ವರ್ಷಗಳವರೆಗಿನ ಕಾರಾವಾಸದಿಂದ ಮತ್ತು ಜುಲ್ಮಾನೆಯಿಂದಲೂ ಸಹ ದಂಡಿತನಾಗತಕ್ಕುದು.

62. ಅಂತಾರಾಜ್ಯ ವ್ಯಾಪಾರವನ್ನು ಅಥವಾ ವಾಣಿಜ್ಯವನ್ನು ನಡೆಸುವಲ್ಲಿ ಸತ್ಯಾಪನೆ ಮಾಡಿರದ ತೂಕಗಳ, ಅಳತೆಗಳ ಮಾರಾಟ, ಇತ್ಯಾದಿಗಳಿಗೆ ದಂಡ.—ಅಂತಾರಾಜ್ಯ ವ್ಯಾಪಾರವು ಅಥವಾ ವಾಣಿಜ್ಯವು ನಡೆಯುವಾಗ ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ನಿಗದಿಪಡಿಸಲಾದ ತೂಕದ ಅಥವಾ ಅಳತೆಯ ಮಾನಕಗಳಿಗೆ ಅನುಗುಣವಾಗಿರದ ಅಥವಾ ತೂಕಗಳಿಗೆ ಅಥವಾ ಅಳತೆಗಳಿಗೆ ಸಂಬಂಧಿಸಿ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೇರೆಗೆ ಕ್ರಮಬದ್ಧವಾಗಿ ಸತ್ಯಾಪನೆ ಮಾಡಿರದ ಯಾವುದೇ ತೂಕವನ್ನು ಅಥವಾ ಅಳತೆಯನ್ನು ಯಾವನೇ ವ್ಯಕ್ತಿಯು ಮಾರಿದರೆ, ವಿತರಣೆ ಮಾಡಿದರೆ, ವಶಾವಣೆ ಮಾಡಿದರೆ ಅಥವಾ ಅನ್ಯಥಾ ವರ್ಗಾಯಿಸಿದರೆ ಅವನು ಹತ್ತು ಸಾವಿರ ರೂಪಾಯಿಗಳವರೆಗಿನ ಜುಲ್ಮಾನೆಯಿಂದ ಮತ್ತು ಎರಡನೆಯ ಅಥವಾ ತರುವಾಯದ ಅಪರಾಧಕ್ಕೆ ಏಳು ವರ್ಷಗಳವರೆಗಿನ ಕಾರಾವಾಸದಿಂದ ಮತ್ತು ಜುಲ್ಮಾನೆಯಿಂದಲೂ ಸಹ ದಂಡಿತನಾಗತಕ್ಕುದು.

63. 39ನೇ ಪ್ರಕರಣದ ಉಲ್ಲಂಘನೆಗೆ ದಂಡ.—ಅಂತಾರಾಜ್ಯ ವ್ಯಾಪಾರವನ್ನು ಅಥವಾ ವಾಣಿಜ್ಯವನ್ನು ನಡೆಸುವಾಗ ಈ ಅಧಿನಿಯಮದ ಉಪಬಂಧಗಳಿಗೆ ಅಥವಾ ಅದರ ಮೇರೆಗೆ ರಚಿತವಾದ ಯಾವುದೇ ನಿಯಮಕ್ಕೆ ಅನುಗುಣವಾಗಿರದ ಪ್ಯಾಕ್ ಮಾಡಿದ ರೂಪದಲ್ಲಿರುವ ಯಾವುದೇ ಸರಕನ್ನು ಮಾರಿದರೆ, ವಿತರಣೆ ಮಾಡಿದರೆ, ವಶಾವಣೆ ಮಾಡಿದರೆ ಅಥವಾ ಅನ್ಯಥಾ ವರ್ಗಾಯಿಸಿದರೆ ಅಥವಾ ಮಾರುವಂತೆ, ವಿತರಣೆ ಮಾಡುವಂತೆ, ವಶಾವಣೆ ಮಾಡುವಂತೆ ಅಥವಾ ಅನ್ಯಥಾ ವರ್ಗಾಯಿಸುವಂತೆ ಯಾವನೇ ವ್ಯಕ್ತಿಯು ಮಾಡಿದರೆ ಅವನು ಐದು ಸಾವಿರ ರೂಪಾಯಿಗಳವರೆಗಿನ ಜುಲ್ಮಾನೆಯಿಂದ ಮತ್ತು ಎರಡನೆಯ ಅಥವಾ ತರುವಾಯದ ಅಪರಾಧಕ್ಕೆ ಐದು ವರ್ಷಗಳವರೆಗಿನ ಕಾರಾವಾಸದಿಂದ ಮತ್ತು ಜುಲ್ಮಾನೆಯಿಂದಲೂ ಸಹ ದಂಡಿತನಾಗತಕ್ಕುದು.

64. 47ನೇ ಪ್ರಕರಣದ ಉಲ್ಲಂಘನೆಗೆ ದಂಡ.—ಈ ಅಧಿನಿಯಮದ ಮೇರೆಗೆ ನೋಂದಾಯಿತವಾಗದ ಯಾವುದೇ ತೂಕವನ್ನು ಅಥವಾ ಅಳತೆಯನ್ನು ಯಾವನೇ ವ್ಯಕ್ತಿಯು ರಫ್ತು ಮಾಡಿದರೆ ಅಥವಾ ಆಮದು ಮಾಡಿಕೊಂಡರೆ ಅವನು ಒಂದು ಸಾವಿರ ರೂಪಾಯಿಗಳವರೆಗಿನ ಜುಲ್ಮಾನೆಯಿಂದ ಮತ್ತು ಎರಡನೆಯ ಅಥವಾ ತರುವಾಯದ ಅಪರಾಧಕ್ಕೆ ಆರು ತಿಂಗಳವರೆಗಿನ ಕಾರಾವಾಸದಿಂದ ಮತ್ತು ಜುಲ್ಮಾನೆಯಿಂದಲೂ ಸಹ ದಂಡಿತನಾಗತಕ್ಕುದು.

65. 48ನೇ ಪ್ರಕರಣದ ಉಲ್ಲಂಘನೆಗೆ ದಂಡ.—ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ನಿಗದಿಪಡಿಸಲಾದ ತೂಕದ ಅಥವಾ ಅಳತೆಯ ಮಾನಕಗಳಿಗೆ ಅನುಗುಣವಾಗಿರದ ಯಾವುದೇ ತೂಕವನ್ನು ಅಥವಾ ಅಳತೆಯನ್ನು ಅಥವಾ ಪ್ಯಾಕ್ ಮಾಡಿದ ರೂಪದಲ್ಲಿರುವ ಸರಕನ್ನು ರಫ್ತು ಮಾಡುವ ಪ್ರತಿಯೊಬ್ಬ ವ್ಯಕ್ತಿಯು ಕೇಂದ್ರ ಸರ್ಕಾರದ ಪೂರ್ವ ಅನುಮೋದನೆಯೊಂದಿಗೆ ಹಾಗೆ ರಫ್ತು ಮಾಡಿರುವಲ್ಲಿ ಹೊರತು ಐದು ಸಾವಿರ ರೂಪಾಯಿಗಳವರೆಗಿನ ಜುಲ್ಮಾನೆಯಿಂದ ಮತ್ತು ಎರಡನೆಯ ಅಥವಾ ತರುವಾಯದ ಅಪರಾಧಕ್ಕೆ ಐದು ವರ್ಷಗಳವರೆಗಿನ ಕಾರಾವಾಸದಿಂದ ಮತ್ತು ಜುಲ್ಮಾನೆಯಿಂದಲೂ ಸಹ ದಂಡಿತನಾಗತಕ್ಕುದು.

66. 49ನೇ ಪ್ರಕರಣದ ಉಲ್ಲಂಘನೆಗೆ ದಂಡ.—ಯಾವನೇ ವ್ಯಕ್ತಿಯು, ಯಾವುದೇ ಯುಕ್ತ ಕಾರಣವಿಲ್ಲದೆ 49ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿದರೆ ಅವನು ಐದು ಸಾವಿರ ರೂಪಾಯಿಗಳವರೆಗಿನ ಜುಲ್ಮಾನೆಯಿಂದ ಮತ್ತು ಎರಡನೆಯ ಅಥವಾ ತರುವಾಯದ ಅಪರಾಧಕ್ಕೆ ಐದು ವರ್ಷಗಳವರೆಗಿನ ಕಾರಾವಾಸದಿಂದ ಮತ್ತು ಜುಲ್ಮಾನೆಯಿಂದಲೂ ಸಹ ದಂಡಿತನಾಗತಕ್ಕುದು.

67. ಯಾವ ನಿರ್ದಿಷ್ಟ ದಂಡವನ್ನೂ ಉಪಬಂಧಿಸಿರುವಲ್ಲಿ ದಂಡ.—ಈ ಅಧಿನಿಯಮದ ಉಪಬಂಧಗಳಲ್ಲಿ ಯಾವ ಉಪಬಂಧಗಳ ಉಲ್ಲಂಘನೆಯ ಬಗ್ಗೆ ಯಾವ ದಂಡವನ್ನೂ ಪ್ರತ್ಯೇಕವಾಗಿ ಈ ಅಧಿನಿಯಮದ ಉಪಬಂಧಗಳಲ್ಲಿ ಉಪಬಂಧಿಸಿಲ್ಲವೋ, ಆ ಉಪಬಂಧಗಳನ್ನು ಉಲ್ಲಂಘಿಸಿರುವ ಯಾವನೇ ವ್ಯಕ್ತಿಯು ಎರಡು ಸಾವಿರ ರೂಪಾಯಿಗಳವರೆಗಿನ ಜುಲ್ಮಾನೆಯಿಂದ ದಂಡಿತನಾಗತಕ್ಕುದು.

68. ಕೆಲವು ಸಂದರ್ಭಗಳಲ್ಲಿ ಪೂರ್ವಭಾವನೆಯನ್ನು ಮಾಡತಕ್ಕುದು.—(1)ಅಂತಾರಾಜ್ಯ ವ್ಯಾಪಾರವನ್ನು ಅಥವಾ ವಾಣಿಜ್ಯವನ್ನು ನಡೆಸುವಾಗ ಖೋಟಾ ಆಗಿರುವ ಅಥವಾ ಸತ್ಯಾಪನೆಮಾಡಿರದ ಯಾವುದೇ ತೂಕವನ್ನು ಅಥವಾ ಅಳತೆಯನ್ನು ಯಾವನೇ ವ್ಯಕ್ತಿಯು ಬಳಸಿದರೆ ಅಥವಾ ಬಳಸುವಂತೆ ಮಾಡಿದರೆ, ಮಾರಿದರೆ, ವಿತರಣೆ ಮಾಡಿದರೆ, ವಶಾವಣೆ ಮಾಡಿದರೆ ಅಥವಾ ಅನ್ಯಥಾ ವರ್ಗಾಯಿಸಿದರೆ ಅಥವಾ ಮಾರುವಂತೆ, ವಿತರಣೆ ಮಾಡುವಂತೆ, ವಶಾವಣೆ ಮಾಡುವಂತೆ, ಅಥವಾ ಅನ್ಯಥಾ ವರ್ಗಾಯಿಸುವಂತೆ ಮಾಡಿದರೆ ಆ ತೂಕವು ಅಥವಾ ಅಳತೆಯು ಖೋಟಾ ಆದ ಅಥವಾ ಸತ್ಯಾಪನೆ ಮಾಡಿರದ ತೂಕವೆಂಬ ಅಥವಾ ಅಳತೆಯೆಂಬ ತಿಳುವಳಿಕೆ ಅವನಿಗಿದ್ದೂ ಅವನು ಹಾಗೆ ಮಾಡಿದನೆಂದು, ತದ್ವಿರುದ್ಧವಾಗಿ ರುಜುವಾತಾಗುವವರೆಗೂ, ಪೂರ್ವಭಾವನೆ ಮಾಡತಕ್ಕುದು.

(2) ಯಾವುದೇ ಖೋಟಾ ಆದ ಅಥವಾ ಸತ್ಯಾಪನೆ ಮಾಡಿರದ ತೂಕವನ್ನು ಅಥವಾ ಅಳತೆಯನ್ನು, ಅಂಥ ತೂಕವನ್ನು ಅಥವಾ ಅಳತೆಯನ್ನು ಅಂತಾರಾಜ್ಯ ವ್ಯಾಪಾರವನ್ನು ಅಥವಾ ವಾಣಿಜ್ಯವನ್ನು ನಡೆಸುವಾಗ ಬಳಸುವ ಸಂಭವವಿದೆ ಎಂದು ಸೂಚಿಸುವಂತಹ ಸನ್ನಿವೇಶಗಳಲ್ಲಿ ಯಾವನೇ ವ್ಯಕ್ತಿಯು ಮಾಡಿದರೆ ಅಥವಾ ತಯಾರಿಸಿದರೆ ಅಥವಾ ಅದು ಅವನ ಸ್ವಾಧೀನದಲ್ಲಿ, ಅಭಿರಕ್ಷೆಯಲ್ಲಿ ಅಥವಾ ನಿಯಂತ್ರಣದಲ್ಲಿ ಇದ್ದರೆ, ಆ ತೂಕವನ್ನು ಅಥವಾ ಅಳತೆಯನ್ನು ಅಂತಾರಾಜ್ಯ ವ್ಯಾಪಾರವನ್ನು ಅಥವಾ ವಾಣಿಜ್ಯವನ್ನು ನಡೆಸುವಾಗ ಬಳಸಲಾಗುವುದು ಅಥವಾ ಬಳಸಲು ಉದ್ದೇಶಿಸಲಾಗಿದೆ ಎಂಬ ತಿಳುವಳಿಕೆಯಿಂದ್ದು ಅದನ್ನು ಮಾಡಲಾಗಿದೆ, ತಯಾರಿಸಲಾಗಿದೆ, ಸ್ವಾಧೀನದಲ್ಲಿಟ್ಟುಕೊಳ್ಳಲಾಗಿದೆ, ಇರಿಸಿಕೊಳ್ಳಲಾಗಿದೆ ಅಥವಾ ನಿಯಂತ್ರಣದಲ್ಲಿಟ್ಟುಕೊಳ್ಳಲಾಗಿದೆ ಎಂದು ತದ್ವಿರುದ್ಧವಾಗಿ ರುಜುವಾತಾಗುವವರೆಗೂ, ಪೂರ್ವಭಾವನೆ ಮಾಡತಕ್ಕುದು.

69. ಅಧಿಕಾರಿಗಳಂತೆ ನಟಿಸಿದುದಕ್ಕಾಗಿ ದಂಡ.—ಯಾವನೇ ವ್ಯಕ್ತಿಯು ನಿರ್ದೇಶಕನಂತೆ ಅಥವಾ ಯಾವನೇ ಅಧಿಕೃತ ಅಧಿಕಾರಿಯಂತೆ ಯಾವುದೇ ರೀತಿಯಲ್ಲಿ ನಟಿಸಿದರೆ ಅವನು ಮೂರು ವರ್ಷಗಳವರೆಗಿನ ಕಾರಾವಾಸದಿಂದ ದಂಡಿತನಾಗತಕ್ಕುದು.

70. ಸುಳ್ಳು ಮಾಹಿತಿಯನ್ನು ಅಥವಾ ಸುಳ್ಳು ವರದಿಯನ್ನು ಕೊಡುವುದಕ್ಕೆ ದಂಡ.—(1) ನಿರ್ದೇಶಕನು ಅಥವಾ ಅಧಿಕೃತ ಅಧಿಕಾರಿಯು ತನ್ನ ಕರ್ತವ್ಯ ನಿರ್ವಹಣೆಯಲ್ಲಿ ಅಗತ್ಯಪಡಿಸಬಹುದಾದ ಅಥವಾ ಕೇಳಬಹುದಾದ ಮಾಹಿತಿಯನ್ನು ಮತ್ತು ಅದು ಸುಳ್ಳೆಂದು ತನಗೆ ಗೊತ್ತಿದ್ದ ಅಥವಾ ಹಾಗೆಂದು ನಂಬಲು ತನಗೆ ಕಾರಣವಿದ್ದು, ಕೊಡುವ ಯಾವನೇ ವ್ಯಕ್ತಿಯು ಆರು ತಿಂಗಳವರೆಗಿನ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿಗಳವರೆಗಿನ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕುದು.

(2) ಕಾನೂನಿನ ಮೂಲಕ ಅಥವಾ ಮೇರೆಗೆ ವರದಿ ಸಲ್ಲಿಸಬೇಕೆಂದು ಅಗತ್ಯಪಡಿಸಲಾಗಿರುವ ಯಾವನೇ ವ್ಯಕ್ತಿಯು ಪ್ರಮುಖ ವಿವರಗಳು ಸುಳ್ಳಾಗಿರುವ ವರದಿಯನ್ನು ಸಲ್ಲಿಸಿದರೆ ಅವನು ಎರಡು ಸಾವಿರ ರೂಪಾಯಿಗಳವರೆಗಿನ ಜುಲ್ಮಾನೆಯಿಂದ ಮತ್ತು ಎರಡನೆಯ ಮತ್ತು ತರುವಾಯದ ಅಪರಾಧಕ್ಕೆ ಒಂದು ವರ್ಷದವರೆಗಿನ ಕಾರಾವಾಸದಿಂದ ಮತ್ತು ಜುಲ್ಮಾನೆಯಿಂದಲೂ ಸಹ ದಂಡಿತನಾಗತಕ್ಕುದು.

71. ಕಿರುಕುಳದ ಕ್ರಮಗಳು.—(1) ಯಾವನೇ ಅಧಿಕೃತ ಅಧಿಕಾರಿಯು ಹಾಗೆ ಮಾಡಲು ಯುಕ್ತ ಕಾರಣಗಳಿಲ್ಲವೆಂದು ತಿಳಿದು—

(ಕ) ಯಾವುದೇ ಮನೆಯನ್ನು, ವಾಹನವನ್ನು ಅಥವಾ ಸ್ಥಳವನ್ನು ಶೋಧಿಸಿದರೆ, ಶೋಧಿಸುವಂತೆ ಮಾಡಿದರೆ; ಅಥವಾ

(ಖ) ಯಾವನೇ ವ್ಯಕ್ತಿಯನ್ನು ಶೋಧಿಸಿದರೆ; ಅಥವಾ

(ಗ) ಯಾವುದೇ ತೂಕವನ್ನು, ಅಳತೆಯನ್ನು ಅಥವಾ ಇತರ ಚರಸ್ವತ್ತನ್ನು ಅಭಿಗ್ರಹಿಸಿದರೆ

—ಅಂತಹ ಪ್ರತಿಯೊಂದು ಅಪರಾಧಕ್ಕೂ ಅವನು ಒಂದು ವರ್ಷದವರೆಗಿನ ಅವಧಿಯ ಕಾರಾವಾಸದಿಂದ ಅಥವಾ ಎರಡು ಸಾವಿರ ರೂಪಾಯಿಗಳವರೆಗಿನ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕುದು.

(2) 40ನೇ ಪ್ರಕರಣದಲ್ಲಿ ಪರಿಭಾಷಿತನಾಗಿರುವಂಥ ಸ್ಥಳೀಯ ಪರಿಶೀಲಕನು, 42ನೇ ಪ್ರಕರಣದ ಮೊದಲನೇ ಪರಂತುಕದ ಉಪಬಂಧಗಳನ್ನು ಉಲ್ಲಂಘಿಸಿ—

(ಕ) 41ನೇ ಪ್ರಕರಣದ ಅರ್ಥದಲ್ಲಿ ಮೊದಲನೇ ಪ್ರವರ್ಗದ ಯಾವುದೇ ತೂಕವನ್ನು ಅಥವಾ ಅಳತೆಯನ್ನು ಯಾವುದೇ ಯುಕ್ತ ಕಾರಣವಿಲ್ಲದೆ ಸತ್ಯಾಪನೆ ಮಾಡಿದರೆ,

(ಖ) ಅಂಥ ಯಾವುದೇ ತೂಕದ ಅಥವಾ ಅಳತೆಯ ಮೇಲಿನ ಯಾವುದೇ ಮುದ್ರೆಯನ್ನು ಯುಕ್ತ ಕಾರಣವಿಲ್ಲದೆ ಅಳಿಸಿ ಹಾಕಿದರೆ, —ಅವನು ಅಂಥ ಪ್ರತಿಯೊಂದು ಅಪರಾಧಕ್ಕೂ ಒಂದು ವರ್ಷದ ವರೆಗಿನ ಅವಧಿಯ ಕಾರಾವಾಸದಿಂದ ಅಥವಾ ಎರಡು ಸಾವಿರ ರೂಪಾಯಿಗಳವರೆಗಿನ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

72. ಅಪರಾಧಗಳ ಸಂಜ್ಞೇಯತೆ ಇತ್ಯಾದಿ.—ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2) ರಲ್ಲಿ ಏನೇ ಇದ್ದರೂ—

(ಕ) ನಿರ್ದೇಶಕನು ಅಥವಾ ಯಾವನೇ ಇತರ ಅಧಿಕೃತ ಅಧಿಕಾರಿಯು ಸಲ್ಲಿಸಿದ ಲಿಖಿತ ದೂರಿನ ಮೇಲೆ ಹೊರತು, ಈ ಅಧಿನಿಯಮದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧವನ್ನು ಯಾವ ನ್ಯಾಯಾಲಯವೂ ಸಂಜ್ಞಾನಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ;

(ಖ) ಈ ಅಧಿನಿಯಮದ ಮೇರೆಗಿನ ಯಾವುದೇ ಅಪರಾಧವನ್ನು ಮಹಾನಗರ ಮ್ಯಾಜಿಸ್ಟ್ರೇಟ್ ಅಥವಾ ಪ್ರಥಮ ದರ್ಜೆಯ ನ್ಯಾಯಿಕ ಮ್ಯಾಜಿಸ್ಟ್ರೇಟ್‌ನ ನ್ಯಾಯಾಲಯಕ್ಕಿಂತ ಕಡಿಮೆ ದರ್ಜೆಯ ನ್ಯಾಯಾಲಯವು ಅಧಿವಿಚಾರಣೆ ಮಾಡತಕ್ಕದ್ದಲ್ಲ;

(ಗ) 50ನೇ, 52ನೇ, 53ನೇ, 56ನೇ, 58ನೇ, 60ನೇ, 61ನೇ, 63ನೇ, 64ನೇ, 65ನೇ ಅಥವಾ 66ನೇ ಪ್ರಕರಣದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧವನ್ನು ಮ್ಯಾಜಿಸ್ಟ್ರೇಟನು ಸಂಕ್ಷಿಪ್ತವಾಗಿ ಅಧಿವಿಚಾರಣೆ ಮಾಡಬಹುದು ಮತ್ತು ಈ ಪ್ರಕರಣದ ಮೇರೆಗೆ ಅಧಿವಿಚಾರಣೆ ಮಾಡಲಾದ ಯಾವುದೇ ಅಪರಾಧದ ಬಗೆಗಿನ ಅಪರಾಧ ನಿರ್ಣಯದ ಸಂದರ್ಭದಲ್ಲಿ ಒಂದು ವರ್ಷಕ್ಕೆ ಮೀರಿದ ಅವಧಿಯ ಕಾರಾವಾಸದ ಶಿಕ್ಷೆಯನ್ನು ಕೊಡತಕ್ಕದ್ದಲ್ಲ.

73. ಅಪರಾಧಗಳ ರಾಜಿ.—(1) 50ನೇ, 55ನೇ, 56ನೇ, 57ನೇ, 58ನೇ, 59ನೇ, 60ನೇ, 63ನೇ, 64ನೇ, 65ನೇ, 66ನೇ ಅಥವಾ 67ನೇ ಪ್ರಕರಣದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧವನ್ನು, ಪ್ರಾಸಿಕ್ಯೂಷನ್ನನ್ನು ಹೂಡುವ ಮುಂಚೆಯಾಗಲಿ ಅಥವಾ ಅನಂತರವಾಗಲಿ ನಿರ್ದೇಶಕನು ಅಥವಾ ಈ ಬಗ್ಗೆ ಅವನಿಂದ ವಿಶೇಷವಾಗಿ ಅಧಿಕೃತನಾದಂಥ ಇತರ ಅಧಿಕಾರಿಯು, ನಿರ್ದೇಶಕನು ಅಥವಾ ಅಂಥ ಇತರ ಅಧಿಕಾರಿಯು ನಿರ್ದಿಷ್ಟಪಡಿಸಬಹುದಾದಂಥ ಮೊತ್ತವನ್ನು ಸರ್ಕಾರದ ಲೆಕ್ಕಕ್ಕೆ ಸಂದಾಯ ಮಾಡಿದ ಮೇಲೆ ರಾಜಿ ಮಾಡಿಕೊಳ್ಳಬಹುದು;

ಪರಂತು ಅಂಥ ಮೊತ್ತವು ಯಾವುದೇ ಸಂದರ್ಭದಲ್ಲಿ ಹಾಗೆ ರಾಜಿ ಮಾಡಿಕೊಳ್ಳಲಾದ ಅಪರಾಧದ ಬಗ್ಗೆ ಈ ಅಧಿನಿಯಮದ ಮೇರೆಗೆ ವಿಧಿಸಬಹುದಾದ ಜುಲ್ಮಾನೆಯ ಗರಿಷ್ಠ ಮೊಬಲಗನ್ನು ಮೀರತಕ್ಕದ್ದಲ್ಲ.

(2) (1)ನೇ ಉಪಪ್ರಕರಣದಲ್ಲಿರುವುದು ಯಾವುದೂ ತಾನು ಮಾಡಿದ ಮೊದಲನೇ ಅಪರಾಧವನ್ನು ರಾಜಿ ಮಾಡಿಕೊಂಡ ದಿನಾಂಕದಿಂದ ಮೂರು ವರ್ಷಗಳ ಅವಧಿಯ ಒಳಗೆ ಅದೇ ಅಥವಾ ಅದೇ ಬಗೆಯ ಅಪರಾಧವನ್ನು ಮಾಡುವ ವ್ಯಕ್ತಿಗೆ ಅನ್ವಯಿಸತಕ್ಕದ್ದಲ್ಲ.

ವಿವರಣೆ.—ಅಪರಾಧವನ್ನು ಈ ಹಿಂದೆ ರಾಜಿ ಮಾಡಿಕೊಂಡ ದಿನಾಂಕದಿಂದ ಮೂರು ವರ್ಷಗಳ ಅವಧಿಯು ಮುಗಿದ ಅನಂತರ ಮಾಡಿದ ಯಾವುದೇ ಎರಡನೆಯ ಅಥವಾ ತರುವಾಯದ ಅಪರಾಧವನ್ನು ಈ ಉಪಪ್ರಕರಣದ ಉದ್ದೇಶಗಳಿಗಾಗಿ, ಮೊದಲನೇ ಅಪರಾಧವೆಂದು ಭಾವಿಸತಕ್ಕದ್ದು.

(3) (1)ನೇ ಉಪಪ್ರಕರಣದ ಮೇರೆಗೆ ಯಾವುದೇ ಅಪರಾಧವನ್ನು ರಾಜಿ ಮಾಡಿಕೊಂಡಿರುವಲ್ಲಿ ಹಾಗೆ ರಾಜಿ ಮಾಡಿಕೊಳ್ಳಲಾದ ಅಪರಾಧದ ಸಂಬಂಧದಲ್ಲಿ ಅಪರಾಧಿಯ ವಿರುದ್ಧ ಸಂದರ್ಭಾನುಸಾರ ಯಾವುದೇ ವ್ಯವಹರಣೆಯನ್ನು ಅಥವಾ ಮುಂದಿನ ವ್ಯವಹರಣೆಯನ್ನು ನಡೆಸತಕ್ಕದ್ದಲ್ಲ ಮತ್ತು, ಅಪರಾಧಿಯು ಅಭಿರಕ್ಷೆಯಲ್ಲಿದ್ದರೆ ಅವನನ್ನು ತತ್‌ಕ್ಷಣವೇ ವಿಮೋಚನೆಗೊಳಿಸತಕ್ಕದ್ದು.

(4) ಈ ಪ್ರಕರಣದಲ್ಲಿ ಉಪಬಂಧಿಸಿರುವಂತೆ ಹೊರತು ಈ ಅಧಿನಿಯಮದ ಮೇರೆಗಿನ ಯಾವ ಅಪರಾಧವನ್ನೂ ರಾಜಿಮಾಡಿಕೊಳ್ಳತಕ್ಕದ್ದಲ್ಲ.

74. ಕಂಪನಿಗಳ ಅಪರಾಧಗಳು ಮತ್ತು ಅಪರಾಧಿಯೆಂದು ನಿರ್ಣೀತವಾದ ಕಂಪನಿಗಳ ಹೆಸರನ್ನು, ವ್ಯವಹಾರ ಸ್ಥಳವನ್ನು, ಇತ್ಯಾದಿಗಳನ್ನು ಪ್ರಕಟಪಡಿಸಲು ನ್ಯಾಯಾಲಯಕ್ಕೆ ಇರುವ ಅಧಿಕಾರ.—(1) ಈ ಅಧಿನಿಯಮದ ಮೇರೆಗಿನ ಯಾವುದೇ ಅಪರಾಧವನ್ನು ಒಂದು ಕಂಪನಿಯು ಮಾಡಿದ್ದರೆ, ಅಪರಾಧವು ನಡೆದ ಕಾಲದಲ್ಲಿ ಕಂಪನಿಯ ವ್ಯವಹಾರದ ಅಧಿಕಾರವನ್ನು ಹೊಂದಿದ್ದ ಮತ್ತು ಕಂಪನಿಯ ವ್ಯವಹಾರವನ್ನು ನಡೆಸಲು ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಹಾಗೂ ಆ ಕಂಪನಿಯನ್ನು, ಆ ಅಪರಾಧದ ಬಗೆಗೆ ತಪ್ಪಿತಸ್ಥರೆಂದು ಭಾವಿಸತಕ್ಕದ್ದು ಮತ್ತು ಅವರ ವಿರುದ್ಧದ ವ್ಯವಹರಣೆಗೆ ಮತ್ತು ಅದಕ್ಕನುಸಾರವಾದ ದಂಡನೆಗೆ ಗುರಿಯಾಗತಕ್ಕದ್ದು :

ಪರಂತು, ಅಂಥ ಅಪರಾಧವು ತನ್ನ ತಿಳಿವಳಿಕೆಗೆ ಬಾರದೆ ನಡೆಯಿತೆಂದು ಅಥವಾ ಅಂಥ ಅಪರಾಧವನ್ನು ಪ್ರತಿಬಂಧಿಸಲು ತಾನು ಎಲ್ಲ ತಕ್ಕ ಜಾಗರೂಕತೆಯನ್ನು ವಹಿಸಿದ್ದೆನೆಂದು ಅಂಥ ಯಾವನೇ ವ್ಯಕ್ತಿಯು ರುಜುವಾತುಪಡಿಸಿದರೆ ಅಂಥ ಯಾವನೇ ವ್ಯಕ್ತಿಯನ್ನು ಈಉಪಪ್ರಕರಣದಲ್ಲಿರುವುದು ಯಾವುದೂ ದಂಡನೆಗೆ ಗುರಿಪಡಿಸತಕ್ಕದ್ದಲ್ಲ.

(2) (1)ನೇ ಉಪಪ್ರಕರಣದಲ್ಲಿ ಏನೇ ಇದ್ದರೂ ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಕಂಪನಿಯು ಮಾಡಿರುವಲ್ಲಿ ಮತ್ತು ಆ ಅಪರಾಧವು ಕಂಪನಿಯ ಯಾವನೇ ನಿರ್ದೇಶಕನ, ವ್ಯವಸ್ಥಾಪಕನ, ಕಾರ್ಯದರ್ಶಿಯ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ನಡೆಯಿತೆಂದು ಅಥವಾ ಅವರ ನಿರ್ಲಕ್ಷ್ಯದ ಕಾರಣದಿಂದ ಸಂಭವಿಸಿತೆಂದು ಹೇಳಬಹುದಾದಂತೆ ರುಜುವಾತಾದರೆ ಅಂಥ ನಿರ್ದೇಶಕನನ್ನು, ವ್ಯವಸ್ಥಾಪಕನನ್ನು, ಕಾರ್ಯದರ್ಶಿಯನ್ನು ಅಥವಾ ಇತರ ಅಧಿಕಾರಿಯನ್ನು ಸಹ ಆ ಅಪರಾಧದ ಬಗೆಗೆ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು, ತದನುಸಾರವಾಗಿ ಅವನು ವ್ಯವಹರಣೆಗೆ ಗುರಿಯಾಗತಕ್ಕದ್ದು ಹಾಗೂ ದಂಡಿತನಾಗತಕ್ಕದ್ದು.

(3) ಈ ಅಧಿನಿಯಮದ ಅಥವಾ ಅದರ ಮೇರೆಗೆ ಯಾವುದೇ ಉಪಬಂಧದ ಉಲ್ಲಂಘನೆಯ ಬಗ್ಗೆ ಯಾವುದೇ ಕಂಪನಿಯು, ಅಪರಾಧಿಯೆಂದು ನಿರ್ಣೀತವಾಗಿದ್ದರೆ ಆ ಕಂಪನಿಯನ್ನು ಅಪರಾಧಿಯೆಂದು ನಿರ್ಣಯಿಸುವ ನ್ಯಾಯಾಲಯವು, ಕಂಪನಿಯ ಹೆಸರನ್ನು, ವ್ಯವಹಾರ ಸ್ಥಳವನ್ನು, ಉಲ್ಲಂಘನೆಯ ಸ್ವರೂಪವನ್ನು, ಕಂಪನಿಯನ್ನು ಹಾಗೆ ಅಪರಾಧಿಯೆಂದು ನಿರ್ಣಯಿಸಲಾಗಿದೆಯೆಂಬ ಸಂಗತಿಯನ್ನು ಮತ್ತು ಮೊಕದ್ದಮೆಯ ಸನ್ನಿವೇಶಗಳಲ್ಲಿ ಯುಕ್ತವೆಂದು ನ್ಯಾಯಾಲಯವು, ಪರ್ಯಾಲೋಚಿಸಬಹುದಾದಂಥ ಇತರ ವಿವರಗಳನ್ನು ನ್ಯಾಯಾಲಯವು ನಿರ್ದೇಶಿಸಬಹುದಾದಂಥ ವೃತ್ತ ಪತ್ರಿಕೆಗಳಲ್ಲಿ ಅಥವಾ ಇತರ ರೀತಿಯಲ್ಲಿ ಕಂಪನಿಯ ವೆಚ್ಚದಲ್ಲಿ ಪ್ರಕಟಪಡಿಸಲು ಸಕ್ಷಮವಾಗಿರತಕ್ಕದ್ದು.

(4) ನ್ಯಾಯಾಲಯದ ಆದೇಶಗಳ ವಿರುದ್ಧ ಅಪೀಲನ್ನು ಸಲ್ಲಿಸಲು ಇರುವ ಅವಧಿಯು, ಯಾವುದೇ ಅಪೀಲನ್ನು ಸಲ್ಲಿಸದೆಯೇ ಮುಕ್ತಾಯವಾಗುವವರೆಗೂ ಅಥವಾ ಅಂಥ ಅಪೀಲನ್ನು ಸಲ್ಲಿಸಲಾಗಿದ್ದು ಅದು ವಿಲೆಯಾಗುವವರೆಗೂ, (3)ನೇ ಉಪಪ್ರಕರಣದ ಮೇರೆಗಿನ ಯಾವ ಪ್ರಕಟಣೆಯನ್ನೂ ಮಾಡತಕ್ಕದ್ದಲ್ಲ.

(5) (3)ನೇ ಉಪಪ್ರಕರಣದ ಮೇರೆಗಿನ ಯಾವುದೇ ಪ್ರಕಟಣೆಯ ವೆಚ್ಚಗಳು ಅವು ನ್ಯಾಯಾಲಯವು ವಿಧಿಸಿದ ಜುಲ್ಮಾನೆಯಾಗಿದ್ದರೆ ಹೇಗೋ ಹಾಗೆ ಕಂಪನಿಯಿಂದ ವಸೂಲೀಯವಾಗಿರತಕ್ಕದ್ದು.

ವಿವರಣೆ.—ಈ ಪ್ರಕರಣದ ಉದ್ದೇಶಗಳಿಗಾಗಿ—

(ಕ) 'ಕಂಪನಿ' ಎಂದರೆ, ಯಾವುದೇ ನಿಗಮಿತ ನಿಕಾಯ ಮತ್ತು ಇದು ಫರ್ಮನ್ನು ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ, ಮತ್ತು

(ಖ) "ನಿರ್ದೇಶಕ" ಎಂದರೆ ಫರ್ಮಿನ ಸಂಬಂಧದಲ್ಲಿ ಫರ್ಮಿನ ಒಬ್ಬ ಪಾಲುಗಾರ.

75. ಈ ಅಧಿನಿಯಮದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧಕ್ಕೆ ಭಾರತ ದಂಡ ಸಂಹಿತೆಯ ಉಪಬಂಧಗಳು ಅನ್ವಯಿಸತಕ್ಕುದಲ್ಲ.—ಈ ಅಧಿನಿಯಮದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧಕ್ಕೆ ಭಾರತ ದಂಡ ಸಂಹಿತೆ, (1860ರ 40) 1860ರ ಉಪಬಂಧಗಳು ಅವುಗಳು ತೂಕಗಳ ಮತ್ತು ಅಳತೆಗಳ ಬಗೆಗಿನ ಅಪರಾಧಗಳಿಗೆ ಸಂಬಂಧಿಸಿರುವಷ್ಟರ ಮಟ್ಟಿಗೆ ಅನ್ವಯಿಸತಕ್ಕುದಲ್ಲ.

## ಭಾಗ—VII

### ತರಬೇತಿ ಸಂಸ್ಥೆ

76. ತರಬೇತಿ ಸಂಸ್ಥೆಯ ಸ್ಥಾಪನೆ ಮತ್ತು ಅಲ್ಲಿ ತರಬೇತಿ ಕೊಡುವ ಬಗ್ಗೆ ಉಪಬಂಧಗಳು.—(1) ಕಾನೂನು ಮಾಪನ ಶಾಸ್ತ್ರದಲ್ಲಿ ಮತ್ತು ಸಂಬಂಧಪಟ್ಟ ಇತರ ಜ್ಞಾನ ಶಾಖೆಗಳಲ್ಲಿ ತರಬೇತಿ ಕೊಡುವುದಕ್ಕಾಗಿ ತಾನು ಯುಕ್ತವೆಂದು ಆಲೋಚಿಸಬಹುದಾದಂಥ ಸ್ಥಳದಲ್ಲಿ "ಭಾರತ ಕಾನೂನು ಮಾಪನ ಶಾಸ್ತ್ರ ಸಂಸ್ಥೆ" ಎಂಬ ಹೆಸರಿನ (ಇನ್ನು ಮುಂದೆ "ಸಂಸ್ಥೆ" ಎಂದು ಉಲ್ಲೇಖಿಸಲಾಗುವ) ಒಂದು ಸಂಸ್ಥೆಯನ್ನು ಸ್ಥಾಪಿಸತಕ್ಕುದು.

(2) ಕೇಂದ್ರ ಸರ್ಕಾರದಲ್ಲಿ ನಿಹಿತವಾಗತಕ್ಕ ಈ ಸಂಸ್ಥೆಯ ವ್ಯವಸ್ಥಾಪನೆಯನ್ನು ಮತ್ತು ನಿಯಂತ್ರಣವನ್ನು ಕೇಂದ್ರ ಸರ್ಕಾರವು ರಚಿಸಬಹುದಾದಂಥ ವಿನಿಯಮಗಳಿಗೆ ಅನುಸಾರವಾಗಿ ನಡೆಸತಕ್ಕುದು.

(3) ಕಾನೂನುಮಾಪನ ಶಾಸ್ತ್ರದಲ್ಲಿ ಮತ್ತು ಸಂಬಂಧಪಟ್ಟ ಇತರ ಜ್ಞಾನ ಶಾಖೆಗಳಲ್ಲಿ ಸಾಕಷ್ಟು ತರಬೇತಿ ಕೊಡುವಲ್ಲಿ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವುದು ಆ ಸಂಸ್ಥೆಗೆ ಸಾಧ್ಯವಾಗುವಂತೆ ಮಾಡಲು ತಾನು ಸೂಕ್ತವೆಂದು ಆಲೋಚಿಸುವಂಥ ಬೋಧಕ ಸಿಬ್ಬಂದಿಯನ್ನು ಮತ್ತು ಇತರ ನೌಕರರನ್ನು ಮತ್ತು ಸಲಕರಣೆಗಳನ್ನು ಹಾಗೂ ಇತರ ಸೌಕರ್ಯಗಳನ್ನು ಆ ಸಂಸ್ಥೆಗೆ ಕೇಂದ್ರ ಸರ್ಕಾರವು ಒದಗಿಸತಕ್ಕುದು.

(4) ಆ ಸಂಸ್ಥೆಯಲ್ಲಿ, ತರಬೇತಿಯ ವಿಷಯ ಕ್ರಮಗಳು ಮತ್ತು ಪಾಠಕ್ರಮಗಳು ಹಾಗೂ ಅಲ್ಲಿ ಪ್ರತಿಯೊಂದು ವಿಷಯಕ್ರಮವನ್ನು ತರಬೇತಿಯನ್ನು ನೀಡುವ ಅವಧಿಯು ನಿಯಮಿಸಬಹುದಾದಂತೆ ಇರತಕ್ಕುದು.

(5) ತರಬೇತಿಯನ್ನು ಪಡೆಯುವುದಕ್ಕಾಗಿ ಸಂಸ್ಥೆಗೆ ಪ್ರವೇಶವನ್ನು ಪಡೆಯಲು ಒಬ್ಬ ವ್ಯಕ್ತಿಯು ಹೊಂದಿರಬೇಕಾದ ಕನಿಷ್ಠ ವಿದ್ಯಾರ್ಹತೆಗಳನ್ನು ಕೇಂದ್ರ ಸರ್ಕಾರವು ನಿಯಮಿಸತಕ್ಕುದು ಮತ್ತು ಆ ಸಂಸ್ಥೆಯಲ್ಲಿ ಬೋಧಿಸಲಾಗುವ ಬೇರೆ ಬೇರೆ ವಿಷಯಕ್ರಮಗಳ ತರಬೇತಿಗಳಿಗೆ ಬೇರೆ ಬೇರೆ ವಿದ್ಯಾರ್ಹತೆಗಳನ್ನು ನಿಯಮಿಸಬಹುದು.

(6) ಆ ಸಂಸ್ಥೆಗೆ ಅನುಕೂಲಕರವಾಗಬಹುದಾದಂಥ ತಂಡಗಳಲ್ಲಿ ಪರಿಶೀಲಕನ ಅಥವಾ ಅದಕ್ಕಿಂತ ಹೆಚ್ಚಿನ ದರ್ಜೆಯ ನೌಕರರನ್ನು ಆ ಸಂಸ್ಥೆಯಲ್ಲಿ ತರಬೇತಿ ಪಡೆಯುವುದಕ್ಕಾಗಿ ಕೇಂದ್ರ ಸರ್ಕಾರವು ಮತ್ತು ಪ್ರತಿಯೊಂದು ರಾಜ್ಯ ಸರ್ಕಾರವು ಪ್ರತಿನಿಯೋಜನೆ ಮಾಡಬಹುದು ಮತ್ತು ಕೇಂದ್ರ ಸರ್ಕಾರವು ತಾನು ಸೂಕ್ತವೆಂದು ಆಲೋಚಿಸಬಹುದಾದಂಥ ಇತರ ವ್ಯಕ್ತಿಗಳಿಗೂ ಸಹ ಆ ಸಂಸ್ಥೆಯಲ್ಲಿ ತರಬೇತಿಗೆ ವ್ಯವಸ್ಥೆಯನ್ನು ಮಾಡಬಹುದು.

(7) ಸಂಸ್ಥೆಯು—

(ಕ) ಕಾನೂನು ಮಾಪನ ಶಾಸ್ತ್ರದಲ್ಲಿ ಮತ್ತು ಸಂಬಂಧಪಟ್ಟ ಇತರ ಜ್ಞಾನ ಶಾಖೆಗಳಲ್ಲಿ ಕೇಂದ್ರ ಸರ್ಕಾರವು ತನಗೆ ವಹಿಸಿಕೊಡಬಹುದಾದಂಥ ಸಂಶೋಧನೆಗಳನ್ನು ನಡೆಸಬಹುದು. ಮತ್ತು

(ಖ) ತಾನು ಸೂಕ್ತವೆಂದು ಆಲೋಚಿಸಬಹುದಾದಂಥ ವಿಚಾರ ಸಂಕೀರ್ಣಗಳನ್ನು, ಸಭೆಗಳನ್ನು ಅಥವಾ ಇತರ ಗೋಷ್ಠಿಗಳನ್ನು ನಡೆಸಬಹುದು.

77. ಇತರ ಸ್ಥಳಗಳಲ್ಲಿ ತರಬೇತಿ.—ಸಂಸ್ಥೆಯಲ್ಲಿ ಕೊಟ್ಟ ತರಬೇತಿಯ ಜೊತೆಗೆ, ಆ ಸಂಸ್ಥೆಯಲ್ಲಿ ಒದಗಿಸದಿದ್ದ ಹೆಚ್ಚಿನ ವಿಶೇಷ ತರಬೇತಿಯನ್ನು, ಪರಿಶೀಲಕನ ದರ್ಜೆಗೆ ಕಡಿಮೆಯಲ್ಲದ ದರ್ಜೆಯ ನೌಕರನಿಗೆ ಕೊಡುವುದು ಅವಶ್ಯ ಎಂದು ಕೇಂದ್ರ ಸರ್ಕಾರವು ಅಭಿಪ್ರಾಯಪಟ್ಟಲ್ಲಿ ಅಂಥ ವಿಶೇಷ ತರಬೇತಿಯನ್ನು ಪಡೆಯುವುದಕ್ಕಾಗಿ ತಾನು ಸೂಕ್ತವೆಂದು ಆಲೋಚಿಸುವಂಥ ಇತರ ಸ್ಥಳಕ್ಕೆ, ಪ್ರಾಧಿಕಾರಕ್ಕೆ ಅಥವಾ ಸಂಸ್ಥೆಗೆ ಅದು ಅಂಥ ನೌಕರನನ್ನು ಕಳುಹಿಸಬಹುದು,

## ಭಾಗ—VIII

### ಸಂಕೀರ್ಣ

78. ಸಮೀಕ್ಷೆ ಮತ್ತು ಅಂಕಿ ಅಂಶಗಳು.—ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ನಿಗದಿಪಡಿಸಲಾದ ಯಾವುದೇ ತೂಕದ, ಅಳತೆಯ ಅಥವಾ ಎಣಿಕೆಯ ಯಾವುದೇ ಮಾನಕವನ್ನು ಯಾವುವೇ ಪ್ರದೇಶದಲ್ಲಿ ಅಥವಾ ಯಾವುವೇ ಉದ್ಯಮಗಳ, ಬಳಕೆದಾರರ ಅಥವಾ ಸರಕುಗಳ ಯಾವುದೇ ವರ್ಗದ ಸಂಬಂಧದಲ್ಲಿ ಎಷ್ಟರಮಟ್ಟಿಗೆ ಜಾರಿಗೆ ತರಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳುವ ದೃಷ್ಟಿಯಿಂದ ತಾನು ಅವಶ್ಯವೆಂದು ಪರ್ಯಾಲೋಚಿಸಬಹುದಾದಂಥ ಸಮೀಕ್ಷೆಯನ್ನು ಕೇಂದ್ರ ಸರ್ಕಾರವು ಮಾಡತಕ್ಕುದು ಅಥವಾ ಮಾಡಿಸತಕ್ಕುದು ಮತ್ತು ಅಂಥ ಅಂಕಿ-ಅಂಶಗಳನ್ನು ಸಂಗ್ರಹಿಸತಕ್ಕುದು ಅಥವಾ ಸಂಗ್ರಹಿಸುವಂತೆ ಮಾಡತಕ್ಕುದು ಮತ್ತು ಅಂಥ ಸಮೀಕ್ಷೆಯನ್ನು ನಡೆಸುತ್ತಿರುವ ಅಥವಾ ಅಂಕಿ ಅಂಶಗಳನ್ನು ಸಂಗ್ರಹಿಸುತ್ತಿರುವ ವ್ಯಕ್ತಿಯು ಅಗತ್ಯಪಡಿಸಬಹುದಾದಂಥ ಸಹಾಯವನ್ನು ಕೊಡುವುದು ತೂಕವನ್ನು ಅಥವಾ ಅಳತೆಯನ್ನು ಬಳಸುತ್ತಿರುವ ಅಥವಾ ಯಾವುದೇ ಎಣಿಕೆಯನ್ನು ಮಾಡುತ್ತಿರುವ ಪ್ರತಿಯೊಬ್ಬ ವ್ಯಕ್ತಿಯ ಕರ್ತವ್ಯವಾಗಿರತಕ್ಕುದು.

79. ಮೆಟ್ರಿಕ್ ಪದ್ಧತಿಯುವಲ್ಲದ ತೂಕಗಳನ್ನು ಮತ್ತು ಅಳತೆಗಳನ್ನು ತೂಕಗಳ ಅಥವಾ ಅಳತೆಗಳ ಮಾನಕ ಘಟಕಗಳನ್ನಾಗಿ ಪರಿವರ್ತಿಸುವುದು.—(1) ತೂಕದ ಅಥವಾ ಅಳತೆಯ ಮಾನಕ ಘಟಕಗಳಲ್ಲಿ ಅಲ್ಲದೆ ಇತರ ಯಾವುದೇ ತೂಕದ ಅಥವಾ ಅಳತೆಯ ಘಟಕದಲ್ಲಿ ಹೇಳಲಾದ ಮೌಲ್ಯವನ್ನು ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಲಾದ ದರದಲ್ಲಿ ತೂಕದ ಅಥವಾ ಅಳತೆಯ ಮಾನಕ ಘಟಕದಲ್ಲಿ ಹೇಳಲಾದ ಮೌಲ್ಯಗಳನ್ನಾಗಿ ಪರಿವರ್ತಿಸಬಹುದು.

(2) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಅಧಿನಿಯಮಿತಿಯಲ್ಲಿ ಅಥವಾ ಯಾವುದೇ ಅಧಿನಿಯಮಿತಿಯ ಮೇರೆಗೆ ಮಾಡಲಾದ ಯಾವುದೇ ಅಧಿಸೂಚನೆಯಲ್ಲಿ, ನಿಯಮದಲ್ಲಿ ಅಥವಾ ಆದೇಶದಲ್ಲಿ ಅಥವಾ ಯಾವುದೇ ಕರಾರಿನಲ್ಲಿ, ವಿಲೇಖದಲ್ಲಿ ಅಥವಾ ಇತರ ಲಿಖಿತದಲ್ಲಿ ತೂಕದ, ಅಳತೆಯ ಅಥವಾ ಎಣಿಕೆಯ ಮಾನಕ ಘಟಕವಲ್ಲದ ಯಾವುದೇ ಇತರ ತೂಕದ, ಅಳತೆಯ ಅಥವಾ ಎಣಿಕೆಯ ಮಾನಕ ಘಟಕದಲ್ಲಿ ಹೇಳಲಾದ ಮೌಲ್ಯಕ್ಕೆ ಸಂಬಂಧಿಸಿ ಮಾಡಿದ ಎಲ್ಲ ಉಲ್ಲೇಖಗಳನ್ನು, ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಲಾದ ದರಗಳಲ್ಲಿ ಪರಿವರ್ತಿಸಿ, ಸಂದರ್ಭಾನುಸಾರ ತೂಕದ ಅಳತೆಯ ಅಥವಾ ಎಣಿಕೆಯ ಮಾನಕ ಘಟಕಗಳಲ್ಲಿ ಹೇಳಲಾದ ಮೌಲ್ಯಕ್ಕೆ ಸಂಬಂಧಿಸಿ ಮಾಡಿದ ಉಲ್ಲೇಖಗಳೆಂದು ಅರ್ಥೈಸತಕ್ಕದ್ದು.

80. ಈ ಅಧಿನಿಯಮವು ಪ್ರಾರಂಭವಾದ ಅನಂತರ ಮೆಟ್ರಿಕ್ ಪದ್ಧತಿಯದಲ್ಲದ ತೂಕವನ್ನು ಅಥವಾ ಅಳತೆಯನ್ನು ಯಾವುದೇ ದಸ್ತಾವೇಜು ಇತ್ಯಾದಿಗಳಲ್ಲಿ ನಮೂದಿಸತಕ್ಕದ್ದಲ್ಲ ಅಥವಾ ಅದು ಯಾವುದೇ ಕರಾರಿನ ಆಧಾರವಾಗಿರತಕ್ಕದ್ದಲ್ಲ.—(1) ಈ ಅಧಿನಿಯಮವು ಪ್ರಾರಂಭವಾದ ಅನಂತರ ತೂಕದ, ಅಳತೆಯ ಅಥವಾ ಎಣಿಕೆಯ ಯಾವ ಘಟಕವನ್ನೂ ಯಾವುದೇ ಅಧಿನಿಯಮಿತಿಯಲ್ಲಿ, ಅಧಿಸೂಚನೆಯಲ್ಲಿ, ನಿಯಮದಲ್ಲಿ ಆದೇಶದಲ್ಲಿ ಕರಾರಿನಲ್ಲಿ ಉಲ್ಲೇಖದಲ್ಲಿ ಅಥವಾ ಇತರ ಲಿಖಿತದಲ್ಲಿ ತೂಕದ, ಅಳತೆಯ ಅಥವಾ ಎಣಿಕೆಯ ಮಾನಕ ಘಟಕವಲ್ಲದ ಇತರ ಯಾವುದೇ ತೂಕದ, ಅಳತೆಯ ಅಥವಾ ಎಣಿಕೆಯ ಘಟಕದಲ್ಲಿ ಹೇಳತಕ್ಕದ್ದಲ್ಲ.

(2) ಈ ಅಧಿನಿಯಮವು ಪ್ರಾರಂಭವಾದಂದು ಮತ್ತು ಅಂದಿನಿಂದ ಮಾನಕ ತೂಕವಲ್ಲದ ಅಳತೆಯಲ್ಲದ ಅಥವಾ ಸಂಖ್ಯೆಯಲ್ಲದ ಇತರ ಯಾವುದೇ ತೂಕವನ್ನು ಅಳತೆಯನ್ನು ಅಥವಾ ಸಂಖ್ಯೆಯನ್ನು ಯಾವುದೇ ಅಂತಾರಾಜ್ಯದ ಅಥವಾ ಅಂತಾರಾಷ್ಟ್ರೀಯ ವ್ಯಾಪಾರದ ಅಥವಾ ವಾಣಿಜ್ಯದ ಸಂಬಂಧದಲ್ಲಿನ ಯಾವುದೇ ಕರಾರಿನಲ್ಲಿ ಅಥವಾ ಇತರ ಒಪ್ಪಂದದಲ್ಲಿ ಬಳಸತಕ್ಕದ್ದಲ್ಲ ಅಥವಾ ಅದು ಅವುಗಳಿಗೆ ಆಧಾರವಾಗಿರತಕ್ಕದ್ದಲ್ಲ:

ಪರಂತು ರಫ್ತು ಮಾಡಲಾದ ಯಾವುದೇ ಸರಕಿನ ಸಂಬಂಧದಲ್ಲಿ, ಅಂಥ ಸರಕಿನ ತೂಕವನ್ನು, ಅಳತೆಯನ್ನು ಅಥವಾ ಸಂಖ್ಯೆಯನ್ನು ಅದರ ಮೇಲೆ ಅಥವಾ ಯಾವುದೇ ಕರಾರಿನಲ್ಲಿ ತೂಕದ, ಅಳತೆಯ ಅಥವಾ ಸಂಖ್ಯೆಯ ಮಾನಕ ಘಟಕಗಳಲ್ಲಿ ಸೂಚಿಸುವುದರ ಜೊತೆಗೆ ಇತರ ಯಾವುದೇ ತೂಕದ ಅಳತೆಯ ಅಥವಾ ಎಣಿಕೆಯ ಪದ್ಧತಿಗೆ ಅನುಸಾರವಾಗಿ ಯಾರಿಗೆ ರಫ್ತು ಮಾಡಬೇಕಾಗಿದೆಯೋ ಆ ವ್ಯಕ್ತಿಯು ಹಾಗೆ ಅಗತ್ಯಪಡಿಸಿದರೆ ಸೂಚಿಸಬಹುದು.

(3) (2)ನೇ ಉಪಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿ ಮಾಡಿಕೊಂಡ ಯಾವುದೇ ಕರಾರು ಅಥವಾ ಇತರ ಒಪ್ಪಂದವು ಶೂನ್ಯವಾಗತಕ್ಕದ್ದು.

(4) ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ನಿಗದಿಪಡಿಸಲಾದ ತೂಕದ, ಅಳತೆಯ ಅಥವಾ ಎಣಿಕೆಯ ಮಾನಕ ಘಟಕವಲ್ಲದ ಇತರ ಯಾವುದೇ ಘಟಕದಲ್ಲಿ ಯಾವುದೇ ಅಳತೆಯ ಫಲಿತಾಂಶಗಳ ಬಗ್ಗೆ ಯಾವ ಲಿಖಿತ ದಾಖಲೆಯನ್ನೂ ಇಟ್ಟುಕೊಂಡು ಬರತಕ್ಕದ್ದಲ್ಲ.

81. ಅಪೀಲುಗಳು.—(1) (2)ನೇ ಉಪಪ್ರಕರಣದ ಉಪಬಂಧಗಳಿಗೆ ಒಳಪಟ್ಟು 30ನೇ ಅಥವಾ 36ನೇ ಪ್ರಕರಣದ ಮೇರೆಗೆ ಮಾಡಿದ ಆದೇಶದ ಮೂಲಕ ಬಾಧಿತನಾದ ಯಾವನೇ ವ್ಯಕ್ತಿಯು, ಅಂಥ ಆದೇಶದ ವಿರುದ್ಧ ನಿರ್ದೇಶಕನಿಗೆ ಅಪೀಲು ಸಲ್ಲಿಸಬಹುದು ಅಥವಾ ಆ ಆದೇಶವನ್ನು ನಿರ್ದೇಶಕನು ಮಾಡಿರುವಲ್ಲಿ ಕೇಂದ್ರ ಸರ್ಕಾರಕ್ಕೆ ಅಪೀಲು ಸಲ್ಲಿಸಬಹುದು.

(2) ಅಂಥ ಪ್ರತಿಯೊಂದು ಅಪೀಲನ್ನೂ ಆ ಪ್ರಶ್ನಿತವಾದ ಆದೇಶವನ್ನು ಮಾಡಿದ ದಿನಾಂಕದಿಂದ ಅರವತ್ತು ದಿನಗಳ ಒಳಗೆ ಸಲ್ಲಿಸತಕ್ಕದ್ದು:

ಪರಂತು ಸದರಿ ಅರವತ್ತು ದಿನಗಳ ಅವಧಿಯ ಒಳಗೆ ಅಪೀಲು ಸಲ್ಲಿಸಲು ಅಪೀಲುದಾರನು ಸಾಕಷ್ಟು ಕಾರಣದಿಂದಾಗಿ ಪ್ರತಿಬಂಧಿತನಾಗಿದ್ದನು ಎಂದು ಅಪೀಲು ಪ್ರಾಧಿಕಾರಕ್ಕೆ ಮನದಟ್ಟಾದರೆ, ಅದು ಇನ್ನೂ ಅರವತ್ತು ದಿನಗಳ ಹೆಚ್ಚಿನ ಅವಧಿಯ ಒಳಗೆ ಅಪೀಲು ಸಲ್ಲಿಸಲು ಅಪೀಲುದಾರನಿಗೆ ಅವಕಾಶ ಕೊಡಬಹುದು.

(3) ಅಂಥ ಯಾವುದೇ ಅಪೀಲನ್ನು ಸ್ವೀಕರಿಸಿದ ಮೇಲೆ ಅಪೀಲು ಪ್ರಾಧಿಕಾರವು ತಮ್ಮ ಅಹವಾಲನ್ನು ಹೇಳಿಕೊಳ್ಳಲು ಅಪೀಲಿನ ಪಕ್ಷಕಾರರಿಗೆ ಯುಕ್ತ ಅವಕಾಶವನ್ನು ಕೊಟ್ಟ ಅನಂತರ ಮತ್ತು ತಾನು ಯುಕ್ತವೆಂದು ಭಾವಿಸಬಹುದಾದಂಥ ವಿಚಾರಣೆಯನ್ನು ಮಾಡಿದ ಅನಂತರ ಯಾವ ಆದೇಶದ ವಿರುದ್ಧ ಅಪೀಲು ಮಾಡಲಾಗಿದೆಯೋ ಆ ಆದೇಶವನ್ನು ತಾನು ಸೂಕ್ತವೆಂದು ಆಲೋಚಿಸಬಹುದಾದಂತೆ ಸ್ಥಿರೀಕರಿಸುವ ಮಾರ್ಪಾಡಿಸುವ ಅಥವಾ ವಿಪರ್ಯಯಗೊಳಿಸುವ ಆದೇಶವನ್ನು ಮಾಡತಕ್ಕದ್ದು ಅಥವಾ ಅವಶ್ಯವಿದ್ದರೆ ಹೆಚ್ಚಿನ ಸಾಕ್ಷ್ಯವನ್ನು ತೆಗೆದುಕೊಂಡ ಅನಂತರ ಹೊಸ ಆದೇಶಕ್ಕಾಗಿ ಆ ಮೊಕದ್ದಮೆಯನ್ನು ತಾನು ಸೂಕ್ತವೆಂದು ಆಲೋಚಿಸಬಹುದಾದಂಥ ನಿರ್ದೇಶದೊಂದಿಗೆ ವಾಪಸು ಕಳುಹಿಸಬಹುದು.

(4) ಪ್ರತಿಯೊಂದು ಅಪೀಲನ್ನೂ ನಿಯಮಿಸಬಹುದಾದಂಥ ಫೀಜನ್ನು ಸಂದಾಯ ಮಾಡಿದ ಮೇಲೆ ಸಲ್ಲಿಸತಕ್ಕದ್ದು.

(5) ಯಾವ ವ್ಯವಹರಣೆಯಲ್ಲಿ ಯಾವುದೇ ತೀರ್ಮಾನವನ್ನು ಅಥವಾ ಆದೇಶವನ್ನು ಮಾಡಲಾಗಿದೆಯೋ ಆ ಯಾವುದೇ ವ್ಯವಹರಣೆಯ (ಅಪೀಲಿನ ವ್ಯವಹರಣೆಯೂ ಸೇರಿ) ದಾಖಲೆಯನ್ನು ಅಂಥ ತೀರ್ಮಾನದ ಅಥವಾ ಆದೇಶದ ಸರಿತನದ, ಕಾನೂನು ಸಮ್ಮತತೆಯ ಅಥವಾ ಔಚಿತ್ಯದ ಬಗ್ಗೆ ತಾನು ಮನದಟ್ಟು ಮಾಡಿಕೊಳ್ಳುವ ಉದ್ದೇಶಕ್ಕಾಗಿ ಕೇಂದ್ರ ಸರ್ಕಾರವು ತಾನಾಗಿಯೇ ಅಥವಾ ಅನ್ಯಥಾ ತರಿಸಿಕೊಳ್ಳಬಹುದು ಹಾಗೂ ಪರೀಕ್ಷಿಸಬಹುದು ಮತ್ತು ಅದರ ಮೇಲೆ ತಾನು ಸೂಕ್ತವೆಂದು ಆಲೋಚಿಸಬಹುದಾದಂಥ ಆದೇಶವನ್ನು ಮಾಡಬಹುದು.

ಪರಂತು ಉದ್ದೇಶಿತ ಕ್ರಮದ ವಿರುದ್ಧವಾಗಿ ಕಾರಣವನ್ನು ತೋರಿಸಲು ಅಂಥ ವ್ಯಕ್ತಿಗೆ ಯುಕ್ತ ಅವಕಾಶವನ್ನು ಕೊಟ್ಟ ಹೊರತು, ಆ ಯಾವನೇ ವ್ಯಕ್ತಿಗೆ ಪ್ರತಿಕೂಲವಾಗುವಂತೆ ಯಾವುದೇ ತೀರ್ಮಾನವನ್ನು ಅಥವಾ ಆದೇಶವನ್ನು ಈ ಉಪಪ್ರಕರಣದ ಮೇರೆಗೆ ವ್ಯತ್ಯಾಸಗೊಳಿಸತಕ್ಕದ್ದಲ್ಲ.

82. ಫೀಜನ್ನು ವಿಧಿಸುವುದು.—(1) ಕೇಂದ್ರ ಸರ್ಕಾರವು 83ನೇ ಪ್ರಕರಣದ ಮೇರೆಗೆ ರಚಿಸಲಾದ ನಿಯಮಗಳ ಮೂಲಕ—

(ಕ) ಯಾವುದೇ ಅಂತಾರಾಜ್ಯ ವ್ಯಾಪಾರವನ್ನು ಅಥವಾ ವಾಣಿಜ್ಯವನ್ನು ನಡೆಸುವಾಗ ಮಾರುವುದಕ್ಕಾಗಿ, ಖರೀದಿಗಾಗಿ, ವಿತರಣೆಗಾಗಿ ಅಥವಾ ವರ್ಗಾವಣೆಗಾಗಿ ಮಾಡಲು ಅಥವಾ ತಯಾರಿಸಲು ಉದ್ದೇಶಿಸಲಾದ ಯಾವುದೇ ತೂಕದ ಅಥವಾ ಅಳತೆಯ ಮಾದರಿಯ ಅನುಮೋದನೆಗಾಗಿ ಐದು ಸಾವಿರ ರೂಪಾಯಿಗಳಿಗೆ ಮೀರದ;

(ಖ) 41ನೇ ಪ್ರಕರಣದ ಅರ್ಥದಲ್ಲಿ ಮೊದಲನೇ ಪ್ರವರ್ಗದ ತೂಕವನ್ನು ಅಥವಾ ಅಳತೆಯನ್ನು ಸತ್ಯಾಪನೆ ಮಾಡಲು ಮತ್ತು ಮುಂದೆ ಹಾಕಲು ಒಂದು ಸಾವಿರ ರೂಪಾಯಿಗಳಿಗೆ ಮೀರದ;

(ಗ) 41ನೇ ಪ್ರಕರಣದ ಅರ್ಥದಲ್ಲಿ ಎರಡನೆಯ ಪ್ರವರ್ಗದ ತೂಕವನ್ನು ಅಥವಾ ಅಳತೆಯನ್ನು ಸತ್ಯಾಪನೆ ಮಾಡಲು ಮತ್ತು ಮುದ್ರೆ ಒತ್ತಲು ಐದು ಸಾವಿರ ರೂಪಾಯಿಗಳಿಗೆ ಮೀರದ;

(ಘ) ರಹಸ್ಯ ಸ್ವರೂಪದಲ್ಲದ ಯಾವುದೇ ದಸ್ತಾವೇಜಿನ ಪ್ರತಿಗಳನ್ನೂ ಕೊಡಲು ಪ್ರತಿ ನೂರು ಅಥವಾ ಅದಕ್ಕೂ ಕಡಿಮೆಯ ಪ[...] ಗಳಿಗೆ ಒಂದು ರೂಪಾಯಿಗೆ ಮೀರದ;

(ಙ) ತೂಕಗಳ ಅಥವಾ ಅಳತೆಗಳ ರಫ್ತುಗಾರರ ಅಥವಾ ಆಮದುಗಾರರ ನೋಂದಣಿಗಾಗಿ ಹತ್ತು ರೂಪಾಯಿಗಳಿಗೆ ಮೀರದ,

(ಚ) ಈ ಅಧಿನಿಯಮದ ಮೇರೆಗೆ ಸಲ್ಲಿಸಲಾಗುವ ಯಾವುದೇ ಅಪೀಲಿಗೆ ಇಪ್ಪತ್ತೈದು ರೂಪಾಯಿಗಳಿಗೆ ಮೀರದ,

—ಫೀಜನ್ನು ನಿರ್ದಿಷ್ಟಪಡಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ನಿಯಮಿಸಲಾದ ಫೀಜನ್ನು ಸಂದಾಯ ಮಾಡಿದ ಹೊರತು ಯಾವ ಅನುಮೋದನೆಯನ್ನೂ ಸತ್ಯಾಪನೆಯನ್ನು ಅಥವಾ ಮುದ್ರೆ ಒತ್ತುವುದನ್ನೂ ಮಾಡತಕ್ಕದ್ದಲ್ಲ, ಪ್ರತಿಯನ್ನು ಕೊಡತಕ್ಕದ್ದಲ್ಲ, ನೋಂದಣಿಯನ್ನು ಮಾಡತಕ್ಕದ್ದಲ್ಲ ಅಥವಾ ಅಪೀಲನ್ನು ಸ್ವೀಕರಿಸತಕ್ಕದ್ದಲ್ಲ.

83. ನಿಯಮ ರಚನಾಧಿಕಾರ.—(1) ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಕೇಂದ್ರ ಸರ್ಕಾರ ಅಧಿಸೂಚನೆಯ ಮೂಲಕ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರಗಳ ಸಾಮಾನ್ಯತೆಯಕ್ಕೆ ಬಾಧೆ ಬಾರದಂತೆ, ಅಂಥ ನಿಯಮಗಳು ಕೆಳಕಂಡ ಎ[...] ಅಥವಾ ಯಾವುದೇ ವಿಷಯಗಳ ಬಗ್ಗೆ ಉಪಬಂಧಿಸಬಹುದು ಎಂದರೆ—

ಅಥವಾ ಯಾವುದೇ ವಿಷಯಗಳ ಬಗ್ಗೆ ... ಸಾಮಾನ್ಯ ಸಮ್ಮೇಳನವು ಅಥವಾ ಕಾನೂನು ಮಾಪನ ಶಾಸ್ತ್ರದ ಅಂತಾರಾಷ್ಟ್ರೀಯ ಸಂಸ್ಥೆಯು ಶಿಫಾರ[...]

(ಕ) ತೂಕಗಳ ಅಥವಾ ಅಳತೆಗಳ ಸಾಮಾನ್ಯ ಸಮ್ಮೇಳನವು ಅಥವಾ ಕಾನೂನು ಮಾಪನ ಶಾಸ್ತ್ರದ ಅಂತಾರಾಷ್ಟ್ರೀಯ ಸಂಸ್ಥೆಯು ಶಿಫಾರಸು ಮಾಡಿದ ಪೂರಕ, ನಿಷ್ಪಾದಿತ ವಿಶೇಷ ಅಥವಾ ಇತರ ತೂಕದ ಅಥವಾ ಅಳತೆಯ ಘಟಕಗಳು, ಮಾನಕ ಸಂಕೇತಗಳು ಅಥವಾ ಪರಿಭಾಷೆಗಳು;

(ಖ) ತೂಕಗಳ ಮತ್ತು ಅಳತೆಗಳ ಸಾಮಾನ್ಯ ಸಮ್ಮೇಳನವು ಅಥವಾ ಕಾನೂನು ಮಾಪನ ಶಾಸ್ತ್ರದ ಅಂತಾರಾಷ್ಟ್ರೀಯ ಸಂಸ್ಥೆ ಶಿಫಾರಸು ಮಾಡಿದ ತೂಕದ ಅಥವಾ ಅಳತೆಯ ಘಟಕಗಳ ಸಂಬಂಧದಲ್ಲಿನ ಗುಣಕಗಳು ಮತ್ತು ಉಪ–ಗುಣಕಗಳು ಮತ್ತು ಭೌತಿಕ, ನಿಯತಾಂಕಗ[...] ಪ್ರಮಾಣಗಳು ಅಥವಾ ಗುಣಾಂಕಗಳು;

(ಗ) ಸಂಖ್ಯೆಗಳ ದಶಮಾಂಶ ಗುಣಕಗಳ ಮತ್ತು ಉಪಗುಣಕಗಳ ವರ್ಗಗಳು ಮತ್ತು ಅವುಗಳನ್ನು ಬರೆಯುತಕ್ಕ ರೀತಿ;

(ಘ) 16ನೇ ಪ್ರಕರಣದ (1)ನೇ ಅಥವಾ (2)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಪದಾರ್ಥಗಳ ಅಥವಾ ಸಲಕರಣೆ[...] ನಿಷ್ಕೃಷ್ಟತೆಯನ್ನು ಪ್ರಮಾಣೀಕರಿಸಬೇಕಾದ ನಿಯತಕಾಲಿಕ ಅಂತರಗಳು;

(ಙ) 15ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ಪ್ರತಿಯೊಂದು ರಾಷ್ಟ್ರೀಯ ಪ್ರಥಮ ಮಾದರಿಯನ್ನು ಮತ್ತು 16ನೇ ಪ್ರಕರಣ[...] ಉಲ್ಲೇಖಿಸಲಾದ ಪ್ರತಿಯೊಂದು ಪದಾರ್ಥವನ್ನು ಅಥವಾ ಸಲಕರಣೆಯನ್ನು ಯಾವ ರೀತಿಯಲ್ಲಿ ಮತ್ತು ಯಾವ ಪರಿಸ್ಥಿತಿಗಳಲ್ಲಿ ಇಡತಕ್ಕದ್ದು;

(ಚ) ಪ್ರತಿಯೊಂದು ಮೂಲ ಮಾನಕವನ್ನು, ಎರಡನೇ ಮಾನಕವನ್ನು ಅಥವಾ ಬಳಕೆಯ ಮಾನಕವನ್ನು ಯಾವ ರೀತಿಯಲ್ಲಿ ಮತ್ತು ಯಾ[...] ಪರಿಸ್ಥಿತಿಗಳಲ್ಲಿ ಇಡತಕ್ಕದ್ದು.

(ಛ) ಪ್ರತಿಯೊಂದು ಮೂಲ ಮಾನಕವನ್ನು ಎರಡನೇ ಮಾನಕವನ್ನು ಮತ್ತು ಬಳಕೆಯ ಮಾನಕವನ್ನು ಯಾವ ಸ್ಥಳದಲ್ಲಿ, ಯಾವ [...] ಕಾರಿಯು ಯಾವ ರೀತಿಯಲ್ಲಿ ಮತ್ತು ಯಾವ ನಿಯತಕಾಲಿಕ ಅಂತರಗಳಲ್ಲಿ ಸತ್ಯಾಪನೆ ಮಾಡತಕ್ಕದ್ದು ಮತ್ತು ಅಧಿಪ್ರಮಾಣಿಸತಕ್ಕದ್ದು;

(ಜ) ಪ್ರತಿಯೊಂದು ಮೂಲ ಮಾನಕವನ್ನು, ಎರಡನೇ ಮಾನಕವನ್ನು ಅಥವಾ ಬಳಕೆಯ ಮಾನಕವನ್ನು ಯಾವ ಅಭಿರಕ್ಷೆಯ[...] ಇಟ್ಟಿರತಕ್ಕದ್ದು.

(ಝ) ತೂಕಗಳಿಗೆ ಅಥವಾ ಅಳತೆಗಳಿಗೆ ಸಂಬಂಧಿಸಿದ ಭೌತಿಕ ಲಕ್ಷಣಗಳು, ಆಕೃತಿ, ನಿರ್ಮಾಣ ವಿವರಗಳು, ಸಾಮಗ್ರಿಗಳು ಸಲಕರಣೆಗ[...] ನಿರ್ವಹಣೆ ಅನುಮತಿತ ವ್ಯತ್ಯಾಸಗಳು ಪರೀಕ್ಷೆಗಳ ವಿಧಾನಗಳು ಮತ್ತು ಪ್ರಕ್ರಿಯೆಗಳು.

(ಞ) ಮಾನಕವಲ್ಲದ ತೂಕಗಳನ್ನು ಅಥವಾ ಅಳತೆಗಳನ್ನು ಯಾವ ಷರತ್ತುಗಳ ಪರಿಮಿತಿಗಳ ಅಥವಾ ನಿರ್ಬಂಧಗಳ ಮೇರೆಗೆ ರಫ್ತು ಮಾ[...] ವುದಕ್ಕಾಗಿ ತಯಾರಿಸಬಹುದು ಅಥವಾ ರಫ್ತು ಮಾಡಬಹುದು;

(ಟ) ಶೀಘ್ರವಾಗಿ ಅಥವಾ ಸ್ವಾಭಾವಿಕವಾಗಿ ಕೊಳೆತು ಹೋಗಬಹುದಾದ ಯಾವುದೇ ಸರಕನ್ನು ವಿಲೆ ಮಾಡುವ ರೀತಿ;

(ಠ) ಯಾವ ವರ್ಗದ ಸರಕುಗಳ ಅಥವಾ ಉದ್ಯಮಗಳ ಸಂಬಂಧದಲ್ಲಿ ಅಥವಾ ಯಾವ ವರ್ಗದ ಬಳಕೆದಾರರ ಸಂಬಂಧದಲ್ಲಿ ಯ[...] ವ್ಯವಹಾರವನ್ನೂ ವ್ಯಾಪಾರವನ್ನು ಅಥವಾ ಕರಾರನ್ನೂ ನಿರ್ದಿಷ್ಟಪಡಿಸಿದ ತೂಕದ, ಅಳತೆಯ ಅಥವಾ ಸಂಖ್ಯೆಯ ಮೂಲಕ ಹೊರತು ಮಾಡಿಕೊ[...] ತಕ್ಕದ್ದಲ್ಲ ಅಥವಾ ಹೊಂದತಕ್ಕದ್ದಲ್ಲ;

(ಡ) 33ನೇ ಪ್ರಕರಣದಲ್ಲಿ ಉಲ್ಲೇಖಿತರಾದ ವ್ಯಕ್ತಿಗಳು ಇಟ್ಟುಕೊಂಡು ಬರಬೇಕಾದ ರಿಜಿಸ್ಟರುಗಳು ಮತ್ತು ದಾಖಲೆಗಳು;

(ಢ) ಅನುಮೋದನೆಗಾಗಿ ಮಾದರಿಗಳನ್ನು ಯಾವ ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದು;

(ಣ) ಮಾದರಿಯನ್ನು ಅನುಮೋದಿಸುವುದಕ್ಕಾಗಿ ಸಲ್ಲಿಸಬೇಕಾದ ಮಾದರಿಗಳ, ರೇಖಾ ಚಿತ್ರಗಳ ಸಂಖ್ಯೆ ಮತ್ತು ಇತರ ಮಾಹಿತಿ;

(ತ) ಯಾವುದೇ ಮಾದರಿಯ ಕಾರ್ಯನಿರ್ವಹಣೆಯನ್ನು ಯಾವ ಪರಿಸ್ಥಿತಿಗಳಲ್ಲಿ ಪರೀಕ್ಷಿಸತಕ್ಕದ್ದು;

(ಥ) ಪ್ರತಿಯೊಂದು ತೂಕದ ಅಥವಾ ಅಳತೆಯ ಮೇಲೆ ಮಾದರಿಯ ನಂಬರನ್ನು ಮತ್ತು ಪ್ರಮಾಣಪತ್ರವನ್ನು ಬರೆಯುತಕ್ಕ ರೀತಿ;

(ದ) ಪ್ಯಾಕೇಜಿನಲ್ಲಿ ಇರುವ ವಸ್ತುವನ್ನು ಘೋಷಿಸಬೇಕಾದ ರೀತಿ ಮತ್ತು ಯಾವ ತೂಕದ, ಅಳತೆಯ ಅಥವಾ ನಂಬರಿನ ಘಟ[...] ಅನುಸಾರವಾಗಿ ಪ್ಯಾಕೇಜಿನ ಮೇಲೆ ಚಿಲ್ಲರೆ ಮಾರಾಟದ ಬೆಲೆಯನ್ನು ಘೋಷಿಸತಕ್ಕದ್ದೋ ಆ ತೂಕದ, ಅಳತೆಯ ಅಥವಾ ನಂಬರಿನ ಘಟಕವ[...] ನಿರ್ದಿಷ್ಟಪಡಿಸಬೇಕಾದ ರೀತಿ;

(ಧ) ಯಾವ ಮಾನಕ ಪರಿಮಾಣಗಳಲ್ಲಿ ಅಥವಾ ನಂಬರುಗಳಲ್ಲಿ ಸರಕುಗಳನ್ನು ಪ್ಯಾಕು ಮಾಡಬಹುದು;

(ನ) ಪ್ಯಾಕೇಜನ್ನು ವಿಷ್ಟರಪಟ್ಟಿಗೆ ಸೇರಿಸತಕ್ಕದ್ದು;

(ಪ) ಪ್ಯಾಕು ಮಾಡುವ ವಿಧಾನದಿಂದಾಗಿ ಅಥವಾ ಸಾಮಾನ್ಯವಾಗಿ ತೆರೆದಿಡುವುದರಿಂದಾಗಿ ಪ್ಯಾಕೇಜು ಮಾಡಿದ ಸರಕಿನ ನಿವ್ವಳ [...] ಮಾಣದಲ್ಲಿ ಉಂಟಾಗಬಹುದಾದ ಯುಕ್ತ ವ್ಯತ್ಯಾಸಗಳು ;

(ಫ) ಒಂದನೇ ಪ್ರವರ್ಗದಲ್ಲಿ ಅಥವಾ ಎರಡನೇ ಪ್ರವರ್ಗದಲ್ಲಿ ಬರುವ ತೂಕಗಳ ಅಥವಾ ಅಳತೆಗಳ ವರ್ಗಗಳು ;

(ಬ) ಮೊದಲನೇ ಪ್ರವರ್ಗದ ತೂಕಗಳಿಗೆ ಅಥವಾ ಅಳತೆಗಳಿಗೆ ಯಾವ ವಿಶೇಷ ಮೊಹರಿನಿಂದ ಮುದ್ರೆ ಒತ್ತತಕ್ಕದ್ದು ;

(ಭ) ವರ್ಗಾವಣಕಾರ ರಾಜ್ಯದಲ್ಲಿರುವ ಪ್ರತಿಯೊಬ್ಬ ತಯಾರಕನು ವ್ಯಾಪಾರಿಯು ಅಥವಾ ಇತರ ವ್ಯಕ್ತಿಯು ಸಲ್ಲಿಸತಕ್ಕ ನಿಯತಕಾ[...] ವಿವರಪಟ್ಟಿಕೆ ;

(ಪ) ತೂಕಗಳ ಮತ್ತು ಅಳತೆಗಳ ರಪ್ತುಗಾರರ ಅಥವಾ ಆಮದುಗಾರರ ರಿಜಿಸ್ಟರಿನಲ್ಲಿ ಹೆಸರನ್ನು ಸೇರಿಸುವುದಕ್ಕಾಗಿ ಯಾವ ನಮೂನೆಯಲ್ಲಿ ಮತ್ತು ರೀತಿಯಲ್ಲಿ ಹಾಗೂ ಯಾವ ಕಾಲದೊಳಗೆ ಅರ್ಜಿಯನ್ನು ಸಲ್ಲಿಸತಕ್ಕದು;

(ಯ) ತೂಕಗಳ ಅಥವಾ ಅಳತೆಗಳ ರಪ್ತುಗಾರನ ಅಥವಾ ಆಮದುಗಾರನ ನೋಂದಣಿ ಪ್ರಮಾಣ ಪತ್ರವನ್ನು ಯಾವ ಅವಧಿಗಾಗಿ ನವೀಕರಿಸಬಹುದು;

(ಯಕ) ಸಂಸ್ಥೆಯಲ್ಲಿನ ತರಬೇತಿಯ ವಿಷಯಕ್ರಮಗಳು ಮತ್ತು ಪಠ್ಯಕ್ರಮಗಳು ಹಾಗೂ ತರಬೇತಿಯ ಅವಧಿ;

(ಯಖ) ಸಂಸ್ಥೆಗೆ ಸೇರಲು ಇರಬೇಕಾದ ಕನಿಷ್ಠ ಅರ್ಹತೆಗಳು;

(ಯಗ) 82ನೇ ಪ್ರಕರಣದ ಮೇರೆಗೆ ಫೀಜನ್ನು ಯಾವ ದರಕ್ಕೆ ಅನುಸಾರವಾಗಿ ವಸೂಲು ಮಾಡಬಹುದು;

(ಯಘ) ನಿಯಮಿಸಬೇಕಾದ ಅಗತ್ಯವಿರುವ ಅಥವಾ ನಿಯಮಿಸಬಹುದಾದ ಇತರ ಯಾವುದೇ ವಿಷಯ;

(3) ಈ ಪ್ರಕರಣದ ಮೇರೆಗೆ ಯಾವುದೇ ನಿಯಮವನ್ನು ರಚಿಸುವಲ್ಲಿ, ಅದರ ಭಂಗವು ಎರಡು ಸಾವಿರ ರೂಪಾಯಿಗಳ ವರೆಗಿನ ಜುಲ್ಮಾನೆಯಿಂದ ದಂಡನೀಯವೆಂದು ಕೇಂದ್ರ ಸರ್ಕಾರವು ಉಪಬಂಧಿಸಬಹುದು.

(4) ಈ ಅಧಿನಿಯಮದ ಮೇರೆಗೆ ಕೇಂದ್ರ ಸರ್ಕಾರವು ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಸಾಧ್ಯವಾದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ ಒಂದು ಅಥವಾ ಎರಡು ಅಥವಾ ಒಂದಾದ ಮೇಲೊಂದರಂತೆ ಬರುವ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳವರೆಗೆ ಇರಿಸತಕ್ಕದು ಮತ್ತು ಅದನ್ನು ಹಾಗೆ ಇರಿಸಲಾದ ಅಧಿವೇಶನದ ಅಥವಾ ಮೇಲೆ ಹೇಳಿದ ಒಂದಾದ ಮೇಲೊಂದರಂತೆ ಬರುವ ಅಧಿವೇಶನಗಳ ನಿಕಟ ತರುವಾಯದ ಅಧಿವೇಶನವು ಮುಗಿಯುವುದಕ್ಕೆ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡು ಸದನಗಳೂ ಒಪ್ಪಿದರೆ ಅಥವಾ ಆ ನಿಯಮವನ್ನು ರಚಿಸಕೂಡದೆಂದು ಎರಡು ಸದನಗಳೂ ಒಪ್ಪಿದರೆ ಆ ನಿಯಮವು, ಆ ತರುವಾಯ ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ, ಆದರೆ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಪ್ರತಿಕೂಲವಾಗದಂತೆ ಇರತಕ್ಕದು.

84. <u>ಸಂಕ್ರಮಣ ಕಾಲದಲ್ಲಿ ಕೆಲವು ತೂಕಗಳನ್ನು ಮತ್ತು ಅಳತೆಗಳನ್ನು ಮುಂದುವರಿಸುವುದು</u>.—(1) ಸಿಕ್ಕಿಂ ರಾಜ್ಯದ ಯಾವುದೇ ಪ್ರದೇಶಕ್ಕೆ ಅಥವಾ ಸರಕುಗಳ ವರ್ಗಕ್ಕೆ ಅಥವಾ ಉದ್ಯಮಗಳಿಗೆ ಅಥವಾ ತೂಕಗಳ ಅಥವಾ ಅಳತೆಗಳ ವರ್ಗಕ್ಕೆ ಅಥವಾ ತೂಕಗಳ ಅಥವಾ ಅಳತೆಗಳ ಬಳಕೆದಾರರಿಗೆ ಸಂಬಂಧಿಸಿ, ಈ ಅಧಿನಿಯಮವು ಜಾರಿಗೆ ಬಂದಿದ್ದರೂ ಅಂಥ ಪ್ರಾರಂಭದ ಅನಂತರ, ಆ ಪ್ರದೇಶಕ್ಕೆ ಅಥವಾ ಸರಕುಗಳ ವರ್ಗಕ್ಕೆ ಅಥವಾ ಉದ್ಯಮಗಳಿಗೆ ಅಥವಾ ತೂಕಗಳ ಮತ್ತು ಅಳತೆಗಳ ಬಳಕೆದಾರರ ವರ್ಗಗಳಿಗೆ ಸಂಬಂಧಿಸಿ ಮಾನಕ ತೂಕಗಳ ಅಥವಾ ಅಳತೆಗಳ ಜೊತೆಗೆ ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ತೂಕಗಳ ಅಥವಾ ಅಳತೆಗಳ ಬಳಕೆಯನ್ನು ಐದು ವರ್ಷಗಳಿಗೆ ಮೀರದಂಥ ಅವಧಿಯವರೆಗೆ ಮುಂದುವರಿಸಲು ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ ಅನುಮತಿಸಬಹುದು.

(2) (1)ನೇ ಉಪಪ್ರಕರಣದಲ್ಲಿರುವುದು ಯಾವುದೂ ಈ ಅಧಿನಿಯಮದ ಪ್ರಾರಂಭದ ನಿಕಟಪೂರ್ವದಲ್ಲಿ ಸಿಕ್ಕಿಂ ರಾಜ್ಯದಲ್ಲಿ ಬಳಕೆಯಲ್ಲಿರದಿದ್ದ ಯಾವುದೇ ತೂಕದ ಅಥವಾ ಅಳತೆಯ ಸಂಬಂಧದಲ್ಲಿ ಯಾವುದೇ ಅಧಿಸೂಚನೆಯನ್ನು ಹೊರಡಿಸಲು ಕೇಂದ್ರ ಸರ್ಕಾರಕ್ಕೆ ಅಧಿಕಾರವನ್ನು ಕೊಡುತ್ತದೆಂದು ಭಾವಿಸತಕ್ಕದ್ದಲ್ಲ.

85. <u>ನಿರಸನ ಮತ್ತು ಉಳಿಸುವಿಕೆಗಳು</u>.—(1) ತೂಕಗಳ ಮತ್ತು ಅಳತೆಗಳ ಮಾನಕಗಳ ಅಧಿನಿಯಮ 1956 (1956ರ 89)-ಈ ಮೂಲಕ ನಿರಸಿತವಾಗಿದೆ.

(2) ನಿರಸನಗಳಿಗೆ ಸಂಬಂಧಿಸಿ ಸಾಮಾನ್ಯ ಖಂಡಗಳ ಅಧಿನಿಯಮ 1897 (1897ರ 10)ರಲ್ಲಿರುವ ಉಪಬಂಧಗಳಿಗೆ ಪ್ರತಿಕೂಲವಾಗದಂತೆ, ತೂಕಗಳ ಮತ್ತು ಅಳತೆಗಳ ಮಾನಕಗಳ ಅಧಿನಿಯಮ, 1956 (1956ರ 89)ರ ಮೇರೆಗೆ ಮಾಡಲಾದ ಯಾವುದೇ ಅಧಿಸೂಚನೆಯು, ನಿಯಮವು ಅಥವಾ ಆದೇಶವು ಈ ಅಧಿನಿಯಮದ ಪ್ರಾರಂಭದಲ್ಲಿ ಜಾರಿಯಲ್ಲಿದ್ದರೆ ಜಾರಿಯಲ್ಲಿರುವುದು ಮುಂದುವರಿಯತಕ್ಕದು ಮತ್ತು ಈ ಅಧಿನಿಯಮದ ಸಂವಾದಿ ಉಪಬಂಧದ ಮೇರೆಗೆ ಮಾಡಿದ್ದರೆ ಹೇಗೋ ಹಾಗೆ ಪರಿಣಾಮವನ್ನು ಹೊಂದಿರತಕ್ಕದು.

## ಅನುಸೂಚಿ

(79ನೇ ಪ್ರಕರಣವನ್ನು ನೋಡಿ)

(1) ಉದ್ದ:

| | | |
|---|---|---|
| 1 ಅಂಗುಲ | = | 0.0254 ಮೀಟರು |
| 1 ಅಡಿ | = | 0 3048 ಮೀಟರು |
| 1 ಗಜ | = | 0.9144 ಮೀಟರು |
| 1 ಮೈಲು | = | 1609.344 ಮೀಟರುಗಳು |
| 1 ನೌಕಾ ಮೈಲು (ಯು.ಕೆ) | = | 1853.18 ಮೀಟರುಗಳು |

<u>ಭಾರತದ ಯೋಜಣೆಗಾಗಿ ಮಾತ್ರ</u>

| | | |
|---|---|---|
| 1 ಅಡಿ | = | 0.3047996 ಮೀಟರು |

(2) ವಿಸ್ತೀರ್ಣ:

| | | |
|---|---|---|
| 1 ಚದರ ಅಂಗುಲ | = | 0.000 64516 ಚದರ ಮೀಟರು |
| 1 ಚದರ ಅಡಿ | = | 0.092 903 04 ಚದರ ಮೀಟರು |
| 1 ಚದರ ಗಜ | = | 0 836 127 36 ಚದರ ಮೀಟರು |
| 1 ಚದರ ಮೈಲು | = | 2.589988.110.336 ಚದರ ಮೀಟರುಗಳು |

| | | |
|---|---|---|
| 1 ಚದರ ಅಡಿ | = | 0.092 903 ಚದರ ಮೀಟರು |
| 1 ಎಕರೆ | = | 4046.8564 ಚದರ ಮೀಟರುಗಳು |
| | | 0.404 686 69 ಹೆಕ್ಟೇರು |
| (3) ಗಾತ್ರ: | | |
| 1 ಘನ ಅಂಗುಲ | = | 0.000 016 387 064 ಘನ ಮೀಟರು |
| 1 ಘನ ಅಡಿ | = | 0.028 316 846 592 ಘನ ಮೀಟರು |
| 1 ಘನ ಗಜ | = | 0.764 554 857 984 ಘನ ಮೀಟರು |
| 1 ಗ್ಯಾಲನ್ (ಯು.ಕೆ) | = | 0.004 546 087 ಘನ ಮೀಟರು |
| 1 ಗ್ಯಾಲನ್ (ಯು.ಎಸ್.ಎ) | = | 0.003 785 411784 ಘನ ಮೀಟರು |
| 1 ಬುಷೆಲ್ (ಯು.ಎಸ್.ಎ) (2150.42 ಘನ ಅಂಗುಲಗಳು) | = | 0.035 239 070 17 ಘನ ಮೀಟರು |
| 1 ಬ್ಯಾರೆಲ್ (ಪೆಟ್ರೋಲಿಯಂಗಾಗಿ) | = | 0.158 987 294 928 ಘನ ಮೀಟರು |
| 1 ಎಕರೆ—ಅಡಿ | = | 1233.482 ಘನ ಮೀಟರುಗಳು |
| (4) ದ್ರವ್ಯರಾಶಿ: | | |
| 1 ಗ್ರೈನ್ | = | 0.000064 798 91 ಕಿಲೋಗ್ರಾಂ |
| 1 ತೊಲ | = | 0.011 663 803 8 ಕಿಲೋಗ್ರಾಂ |
| 1 ಸೇರು | = | 0.933 104 304 ಕಿಲೋಗ್ರಾಂ |
| 1 ಮಣ | = | 37.324 172 16 ಕಿಲೋಗ್ರಾಂಗಳು |
| 1 ಔನ್ಸ್ (ಟ್ರಾಯ್) | = | 0.031 103 476 8 ಕಿಲೋಗ್ರಾಂ |
| 1 ಪೌಂಡು (ಆ್ಯವರ್‌ದು ಪ್ಯಾಯ್ಸ್) | = | 0.453 592 37 ಕಿಲೋಗ್ರಾಂ |
| 1 ಹಂಡ್ರಡ್ ವೈಟ್ (ಯು.ಕೆ) | = | 50.802 345 44 ಕಿಲೋಗ್ರಾಂಗಳು |
| 1 ಹಂಡ್ರಡ್ ವೈಟ್ (ಯುಎಸ್ಎ) | = | 45.359 237 ಕಿಲೋಗ್ರಾಂಗಳು |
| 1 ಟನ್ (ಯುಕೆ) | = | 1 016.046 908 8 ಕಿಲೋಗ್ರಾಂಗಳು |
| 1 ಟನ್ (ಯುಎಸ್ಎ) | = | 907.184 74 ಕಿಲೋಗ್ರಾಂಗಳು |
| (5) ಉಷ್ಣಾಂಶ: | | |
| 1 ಡಿಗ್ರಿ ಫ್ಯಾರನ್‌ಹೀಟ್ (ಘಟಕ) | = | 5/9 ಕೆಲ್ವಿನ್ ಅಥವಾ ಡಿಗ್ರಿ (ಸೆಲ್ಸಿಯಸ್) |
| ಫಾರನಹಿಟ್ ಡಿಗ್ರಿಯಲ್ಲಿ ಉಷ್ಣಾಂಶ | = | 5/9 ($t^\circ F+459.67$) ಕೆಲ್ವಿನ್ಸ್ |
| | | 5/9 ($t^\circ F-32$) ಡಿಗ್ರಿ (ಸೆಲ್ಸಿಯಸ್) |
| (6) ಬಲ: | | |
| 1 ಪೌಂಡ್ ಬಲ | = | 4.448 221 615 260 5 ನ್ಯೂಟನ್ಸ್ |
| 1 ಪೌಂಡಲ್ | = | 0.138 254 954 376 ನ್ಯೂಟನ್ |
| (7) ಒತ್ತಡ: | | |
| ವಾಯು ಮಾಪಕದಲ್ಲಿನ ಪಾದರಸದ 1 ಅಂಗುಲ | = | 3386.388 640 341 ಪಾಸ್ಕಲ್‌ಗಳು |
| 1 ಅಂಗುಲ ನೀರು | = | 249.088 91 ಪಾಸ್ಕಲ್‌ಗಳು |
| (8) ಸಾಮರ್ಥ್ಯ: | | |
| 1 ಬ್ರಿಟಿಷ್ ಉಷ್ಣ ಘಟಕ | = | 1,055.055 852 62 ಯೂಲ್‌ಗಳು |
| 1 ಅಡಿ—ಪೌಂಡ್—ಬಲ | = | 1.355 817 948 331 400 4 ಯೂಲ್‌ಗಳು |
| (9) ಶಕ್ತಿ: | | |
| 1 ಅಶ್ವ—ಶಕ್ತಿ (ಯು.ಕೆ) | = | 745.699 871 582 270 22 ವ್ಯಾಟ್‌ಗಳು |
| 1 ಅಶ್ವ ಶಕ್ತಿ (ಯೂರೋಪಿಯನ್) | = | 735.498 75 ವ್ಯಾಟ್‌ಗಳು |
| 1 ಟನ್ ಶೀತಲೀಕರಣ | = | 3516.852 842 67 ವ್ಯಾಟ್‌ಗಳು |

The above translation in Kannada of the Standard of Weights and Measures Act, 1976 (Act No. 60 of 1976) has been authorised by the President to be published in the official Gazette under clause (a) of Section 2 of the Authorised Translations (Central Laws) Act, 1973.

Secretary to the Government of India.

WD P: 5388